# ಕೊಡಗ್‌ರ ಆರ ಬೇರ

ಬಾಚರಣಿಯಂಡ ಅಪ್ಪಣ್ಣ ಪಿಂಞ ರಾಣು ಅಪ್ಪಣ್ಣ









ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

## ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಸ್ಕೌಟ್ಸ್ ಅ್ಯಂಡ್ ಗೈಡ್ಸ್ ಕಟ್ಟಡ, ಮ್ಯಾನ್ಸ್ ಕಾಂಪೌಂಡ್ ಪಕ್ಕ, ಮಡಿಕೇರಿ-571201

ಫೋನ್ : 29074


# ಕೊಡಗ್‌ರ ಆರ ಬೇರ


ಬಾಚರಣೆಯಂಡ ಅಪ್ಪಣ್ಣ

ಪಿಂಞ

ರಾಣು ಅಪ್ಪಣ್ಣ

"KODAGURA AARA BERA" is the Book Written by **Bacharaniyanda Appanna and Ranu Appanna** Published by the **Karnataka Kodava Sahithya Academy, Madikeri**.

ಕ್ರಯ ರೂ. 22/-

ಹಕ್ಕ್ :- ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಬೊಳಿಪಡ್‌ತ್‌ನವು:-

ರಿಜಿಸ್ಟ್ರಾರ್
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಸ್ಪೈಟ್ಸ್ ಆ್ಯಂಡ್ ಗ್ರೇಸ್ ಕಟ್ಟಡ
ಮ್ಯಾನ್ಸ್ ಕಾಂಪೌಂಡ ಹತ್ರ
ಮಡಿಕೇರಿ : 571 201 ಫೋನ್ : 29074

ಅಚ್ಚ್ ಮಾಡ್‌ನವು:-

ಗುಡ್‌ಟಚ್ ಪ್ರಿಂಟರ್ಸ್
ಜಯಲಕ್ಷ್ಮೀಪುರಂ, ಮೈಸೂರ್.
ಫೋನ್ :- 512626. 517919

# ಮುಂಜೊಲ್ಲ್

ನಾಡ್‌ರ ವಿಶಿಷ್ಟವಾನ ಕೊಡವ ತಕ್ಕ್-ಸಾಹಿತ್ಯ, ಜಾನಪದ-ಸಂಸ್ಕೃತಿ, ಆಚಾರ-ವಿಚಾರ, ಕಲೆನ ಪೋತಿ ಬೊಳ್‌ತುವ ಖಿನ ಉದ್ದೇಶತ್ ಕರ್ನಾಟಕ ಸರಕಾರ **''ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ''**ನ ರಚನೆ ಮಾಡಿತ್. ಇಲ್ಲಿಕೆತ್ತನೆ ಅಕಾಡೆಮಿ ಈ ನ್‌ಟ್ಟ್‌ಲ್ ನಲ್ಲ ಕೆಲಸ ಮಾಡಿಯಂಡ್ ಬಂದಿತ್.

ಕೊಡವ ಸಾಹಿತ್ಯ ಪರಂಪರೆಲ್ ಎಚ್ಚಕೋ ಬಲ್ಯ ಬಲ್ಯ ಸಾಹಿತಿಯ, ಜಾನಪದ ತಜ್ಞಂಗ, ಕಲಾವಿದಂಗ, ನಾಟಕಕಾರಂಗ ನಯಿಚಿತ್ ಕೊಡವ ಸಾಹಿತ್ಯತ್‌ರ ಪರಂಪರೆನ ಬೊಳ್‌ತಿಯಂಡ್ ಮಿಂಞಕ್ ಬಂದಿತ್. ಎಚ್ಚಕೋ ಪುದಿಯ ಎಳ್‌ತ್ತ್‌ಕಾರ, ಪುದಿಯ ಪುರ್‌ಡ್‌ಲ್ ಮಿಞ್ಞಕ್ ಬಂದಂಡ್ ಉಂಡ್. ಇಂಥಯಿಂಗಡ ಎಳ್‌ತ್, ಸಾಹಿತ್ಯತ್‌ನ ದಾಖಲೆ ಆಯಿತ್ ಮಾಡಂಡು ಅಲ್ಲತೆ, ಸಾಹಿತ್ಯ ಪರಂಪರೆನ ಬೊಳ್‌ತುವ ದೃಷ್ಟಿಲ್ ಕೊಡವ ಸಾಹಿತ್ಯ ಅಕಾಡೆಮಿ ಪುದಿಯ ಪುದಿಯ ಪುಸ್ತಕತ್‌ನ ಪ್ರಕಟ ಪಡ್‌ತಿಯಂಡ್ ಉಂಡ್.

**''ಕೊಡ್‌ಗ್‌ರ ಆರ ಬೇರ''**ಎಣ್ಣುವ ಈ ಪುಸ್ತಕತ್, ಕೊಡಗ್‌ಕ್ ಸಂಬಂಧಪಟ್ಟ ಬಲ್ಯ ಬಲ್ಯ ವ್ಯಕ್ತಿಯಡ ಬಗ್ಗೆ, ಕೊಡವಡ ಉಡುಪ್ ತೊಡ್‌ಪ್‌ರ ಬಗ್ಗೆ, ಕೊಡವ ಸಂಸ್ಕೃತಿರ ಬೊಳಚೆಕ್ ಪೊಣ್ಣಾಳಡ ಪಾತ್ರತ್‌ರ ಬಗ್ಗೆ, ಜಾನಪದ ನೃತ್ಯತ್‌ರ ಬಗ್ಗೆ, ಇಂಞೂ ಎಚ್ಚಕೋ ವಿಷಯತ್‌ರ ಬಗ್ಗೆ ಅರ್ಥಪೂರ್ಣವಾಯಿತ್ ಸಮಾಜಕ್ ನಂಗಡ ವಿಷಯತ್‌ನ ಎಳ್‌ದಿತ್ ಕಾಟಿತ್. ಈ ಪುಸ್ತಕತ್‌ರ ಎಳ್‌ತ್ತ್‌ಕಾರ **ಶ್ರೀ ಬಾಚರಣಿಯಂಡ ಅಪ್ಪಣ್ಣ ಪಿಂಞ ಶ್ರೀಮತಿ ರಾಣು ಅಪ್ಪಣ್ಣ** ಇಯಂಗಕ್, ಈ ಪುಸ್ತಕತ್‌ನ ಒರ್ ನ್‌ಟ್ಟ್‌ಕ್ ಕೊಂಡ ಬಪ್ಪಕ್ ಸಹಾಯ ಮಾಡ್‌ನ **ಗುಡ್‌ಟಚ್ ಪ್ರಿಂಟರ್ಸ್**ಕಾರಕೂ ನಾಡ ವಂದ್ನನೆ.

**ಮೇಕೇರಿರ ಕೆ. ಕಾರ್ಯಪ್ಪ**
**ಅಧ್ಯಕ್ಷ**
**ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ**

**02-06-2001**
**ಮಡಿಕೇರಿ**

# ಎಳ್ತ್‌ಕಾರಡ ತಕ್ಕ್

ಕಯಿಂಜ ಸುಮಾರ್ ಕಾಲತ್‌ಂಜ ಕೊಡವ ಸಾಹಿತ್ಯ ಬೊಳಚೆಕಾಯಿತ್ ಪೆರ್ತ್ ಸಭೆ ಸಮಾರಂಭ ನಡಂದಿತ್. ಇನ್ನತ ಸಭೆಲೆಲ್ಲ ಒರಂದ್ ಪ್ರಬಂಧ ಮಂಡನೆ ಮಾಡಂಡೂಂದ್ ಸಂಘಟನೆ ಮಾಡುವಯಿಂಗಳೇ ವಿಷಯ ತಪ್ಪಂಜತ್. ಅನ್ನನೆ ಎಳ್ದ್‌ನ ಪ್ರಬಂಧತ್‌ರ ಸಂಗ್ರಹವೇ ಇದ್.

ಏದೇ ತರ ಎಳ್ತಾಡ್ ನಂಗ ವಡಿಯ ಪೊಣ್ಣ್ ದಂಡಾಳೂ ಕೂಡಿತೆಳ್‌ದುವದ್ ಕ್ರಮ. ಒಬ್ಬ ಎಳ್ದ್‌ನಾನ ಇಂಞೊಬ್ಬ ತಿದ್ದಿತ್, ದಂಡಾಳ್‌ಕೂ ಮನಸ್ಸ್‌ಕೊತ್ತ್‌ಕ ಅದ್‌ನ ಸಭೆಲ್ ಮಂಡನೆ ಮಾಡುವೊ ಅಥವಾ ಸಂಚಿಕೆಕ್ ಕೊಡ್‌ಪ ಪದ್ಧತಿ.

ಕೊಡವ ಪತ್ರಿಕೆಯಡ ಸಂಪಾದಕಂಗ, ಕೊಡವ ಸಾಹಿತ್ಯ ಅಕಾಡೆಮಿರ ಅಧ್ಯಕ್ಷಂಗ ಪಿಞ ಸದಸ್ಯಂಗಡ ಪ್ರೋತ್ಸಾಹತ್‌ನ ಗುಂಡೇ ಈ ಎಳ್ತೆಲ್ಲ ಪೊರಬೂವಕ್ ಕಾರಣ ಆಚಿ. ಅಯಿಂಗಳೆಲ್ಲ ಕೃತಜ್ಞತೆಲ್ ನೆನತಿಯುವ.

ಬಾಚರಣಿಯಂಡ ಅಪ್ಪಣ್ಣ
ಪಿಂಞ
ರಾಣು ಅಪ್ಪಣ್ಣ

ಕುಶಾಲನಗರ
15.4.2001

# ಕೊಡಗ್‌ರ ಆರ ಬೇರ


1. ಕೊಡವ ಸಾಹಿತ್ಯ ಕ್ಷೇತ್ರತ್ ಅಪ್ಪಚ್ಚ ಕವಿರ ಕೊಡುಗೆ 1-5
2. ಕೊಡವಡ ಉಡುಪ್ ತೊಡ್‌ಪ್ 6-12
3. ಕೊಡವ ಸಂಸ್ಕೃತಿ ಬೊಳಚೆಕ್ ಪೊಣ್ಣಾಳಡ ಪಾತ್ರ 13-15
4. ಕಾರ್ಯಪ್ಪಜ್ಜಂಡ ಮನೆಲ್ 16-19
5. ನಾನ್ ಕೊಡವತಿ ಮೂಡಿ ಕೊಡವ ಬಂಬನೇ ಮಂಗಲಾಪಿ 20-23
6. ಕೊಡಗ್‌ರ ಜಾನಪದ ನೃತ್ಯ ಉಮ್ಮತ್ತಾಟ್ 24-26
7. ಅಖಿಲ ಕೊಡವ ಸಮಾಜ ಪಂಡ್‌ಪೋಲೆ ತಕ್ಕಾಮೆಲೇ ಇರಂಡು 27-28
8. ಕೊಡವ ಉಪಜನಾಂಗತ್‌ನ ಕೊಡವಳಾಕಿಯವಂಡು 29-31
9. ಕೊಡಗ್‌ರ ವೀರ ಪರಂಪರೆ 32-39
10. ಕೊಡವ ಜಾನಪದ ವಿಶೇಷತೆ 40-50
11. ಕೊಡವ ಸಾಹಿತ್ಯ ಕೋವುಕ್ ಐಚೆಟ್ಟಿರ ಮುತ್ತಣ್ಣಂಡ ಕೊಡುಗೆ 51-53
12. ಕೊಡವ ಜನಾಂಗತ್‌ರ ಭವಿಷ್ಯತ್‌ರ ಬಾಳ್ ಬದ್‌ಕ್ 54-56
13. ಈ ಮುತ್ತಣ್ಣಂಗ ದಾರ್?
(ಡಾ. ಐ.ಮಾ. ಮುತ್ತಣ್ಣಂಡ ಎಳ್ತ್‌ರ ಭಾಷಾಂತರ) 57-59
14. ಕೊಡಗ್‌ರ ಮಣ್ಣೇ ನಂಗಕ್ ಪ್ರತ್ಯಕ್ಷ ದೇವ.
ಕೊಡಗ್‌ರ ಪ್ರಕೃತಿಯೇ ನಂಗಡ ದೇವಸ್ಥಾನ. 60-65
15. ಐನ್‌ಮನೆ - ಓರ್ ಪರಿಚಯ. 66-70
16. ಕೊಡಗ್‌ಕ್ ರೈಲ್ - ವಿಮರ್ಶೆ 71-72
17. ಕಕ್ಕಡ ತಿಂಗತ್‌ರ ವಿಶೇಷತೆ 73-79
18. ನೆಲ್ಲಕ್ಕಿ ನಡುಬಾಡೆ 80-85
19. ಕೊಡಗ್ ಅಧ್ಯಯನ ಕೇಂದ್ರ 86-88
20. ಜಮ್ಮ ಕೊಡಗಿದ್ ಎಂಗಡ -
(ಭಾಷಾಂತರ ಮೂಲ ಹ.ಮಾ. ನಾಯಕ) 89-93

# ಕೊಡವ ಸಾಹಿತ್ಯ ಕ್ಷೇತ್ರಕ್ ಅಪ್ಪಚ್ಚಕವಿರ ಕೊಡುಗೆ

ಸಾಹಿತ್ಯತ್ ದಂಡ್ ತರ. ಕಂಠಸ್ತ ಸಾಹಿತ್ಯ ಪಿಂಞ ಪ್ರೌಢ ಸಾಹಿತ್ಯ ಬಾಯಿಂಜಿ ಬಾಯಿಕ್ ಬಂದದ್ ಕಂಠಸ್ತ ಸಾಹಿತ್ಯ. ಎಳ್‌ತ್‌ಲ್ ದಾಖಲಾನದ್ ಪ್ರೌಢ ಸಾಹಿತ್ಯ. ಕಂಠಸ್ತ ಸಾಹಿತ್ಯ ಕೊಡವಡ ಬಾಳೋ ಪಾಟ್, ಜಾಪ್ ಪಾಟ್, ಮಕ್ಕಡ ಪಾಟ್, ತಪ್ಪಡಕ ಕೆಟ್ಟುವೊ, ಗಾದೆ, ಪಳಂಜೊಲ್ಲ್ - ಇನ್ನನೆ ಸುಮಾರ್ ಉಂಡ್.

ಪ್ರೌಢ ಸಾಹಿತ್ಯತ್‌ನ ಕೊಡವ ಭಾಷೆಲ್ ಸೃಷ್ಟಿ ಮಾಡ್‌ನ ಮೂಲಪುರುಷ ಅಪ್ಪಚ್ಚ ಕವಿ. ಕೊಡವ ಸಾಹಿತ್ಯತ್‌ರ ಸೃಷ್ಟಿಕರ್ತನೇ ಅಪ್ಪಚ್ಚ ಕವಿ. ಕೊಡವ ಸಾಹಿತ್ಯ ಬೊಳಚೆಕ್ ಕವಿ ತಾಂಡ ಬದ್‌ಕ್‌ನೇ ಚಾಂದ್ ತುಂಡ್‌ರನೆಕೆ ತೇಚತ್. ಆಚೇಂಗಿ, ಕೊಡವಳಗುಂಡ್ ಬಲ್ಯ ಪುರ್‌ಡ್ ಕ್‌ಟ್ಟಿತೆ, ತಾನ್ ಪಟ್ಟ ಪಾಡ್‌ನ ಕವಿ ಎಳ್‌ದ್‌ನ ಚೆನ್ನ ಕಾಗದತ್‌ರ ಆಂಜಿ ಎಡ್‌ತ ಗೆರೆನ ಇಲ್ಲಿ ಓದ್‌ನಕ ಗೊತ್ತಾಕು. ಇದೆಲ್ಲಾ ಡಾ|| ಐ.ಮಾ ಮುತ್ತಣ್ಣಂಗ್ ಎಳ್‌ದ್‌ನ ಕಾಗದತ್‌ಂಜ ಆಂಜಂಡ ಗೆರೆ ಮಾತ್ರ - "ಕೊಡವ ಪಿಂಞ ಕನ್ನಡ ಪಾಟ್ ಕೂಟಿಯಂಡ್ "ಭಕ್ತಿ ರತ್ನಾಕರ" ಎಣ್ಣುವ ಸಾಧಾರಣ 50-70 ಉರ್‌ಪಿಯತ್‌ರ ಒಳ್‌ಲ್ ಆಯಿರ ಬುಕ್ಕ್ ಆಪಂತ ಎಳ್‌ತ್‌ನ ತಯಾರ್ ಮಾಡಿಯೆ. ಪುಲಿಯಂಡ ಜಿ. ಅಯ್ಯಪ್ಪಂಡ ಕೂಡ ಈ ವಿಷಯ ತಕ್ಕ್ ಪರೆವಕ ಅಯಿಂಗ ಕುಶಿಪಟ್ಟತ್. ಕನ್ನಡ ಸಾಹಿತ್ಯ ಸಂಘಕಾರಳಗುಂಡ್ ಪ್ರಿಂಟ್‌ಕ್ ಪ್ರಯತ್ನ ಪಡುವೀಂದ್ ಅಯಿಂಗ ಎಣ್ಣ್‌ನನೆಕೆ, ಅಧ್ಯಕ್ಷ ಪಿ. ಸುಬ್ಬಯ್ಯ ರಾಮ ರಾಯ ತಕ್ಕ್ ಪರ್‌ಂದಿತ್, ಮಡಿಕೇರಿ ಹೈಸ್ಕೂಲ್‌ಲ್ ಇದ್‌ನ ಓದಂಡೊಂದ್ ಎಣ್ಣ್‌ಚಿ. ಅಂದ್ ನಾನ್ ಓದುವಕ ಎಲ್ಲಾರೂ ಕುಶಿಪಟ್ಟತ್, ಪ್ರಿಂಟ್ ಮಾಡುವಕ್ ಪಣ ಸಂಗ್ರಹ ಮಾಡಿತ್ ನಿಂಗಕ್ ಅರಿಚಿಡುವಿಂದ್ ಎಣ್ಣ್‌ಚಿ. ನಾಡ ದುರಾದೃಷ್ಟಕ್ ಸುಮಾರ್ ದಿನ ಕಾತಕಲೂ ಪ್ರಯೋಜನ ಆಯಿಲೆ ಪಿಂಞ ಸುಬ್ಬಯ್ಯ ಅಯಿಂಗಡ ಮೇಲೆ ಓರ್ ಪಾಟ್ ಎಳ್‌ದಿತ್ ಅಯಿಂಗಕ್ ಕಾಟುವಕ ಪಾಡ್‌ಚಿಟ್ಟತ್. ದುಂಬ ಕುಶಿಪಟ್ಟತ್. ಅದ್‌ನ ಅಯಿಂಗಳೇ ಎಡ್‌ತಂಡ್ ಎಟ್ಟ್ ದಿನತ್ ಜವಾಬ್ ಎಳ್‌ದುವೀಂದ್ ಮಾರಾಯ ಎಣ್ಣ್‌ಚೇಂಗಿಯೂ, ನಾಡ ದುರಾದೃಷ್ಟಕ್ ಎಟ್ಟ್ ದಿನ ಪೋಡ್. ಇಕ್ಕ ಮೂಂದ್ ಕಾಲ ಆಯಿಪೋಚಿ". 8-4-1942, ಕಿರುಂದಾಡ್, ನಾಪೋಕ್ಲ್ ಪೋಸ್ಟ್ - ಇದ್ ಓರ್ ಉದಾರಣೆಕ್ ಮಾತ್ರ ಎಳ್‌ದಿಯೆ.

ಇನ್ನನೆ, ಕವಿ ಎಳ್‌ದ್‌ನ ಕಾಗದತ್‌ನೆಲ್ಲ ಓದ್‌ನಕ ಕವಿರ ಪರಿಸ್ಥಿತಿ ಎನ್ನನೆಯಿಂಜತ್, ಏದ್ ತರ ಗೋಳ್ ಬುದ್ದತ್, ಅಕ್ಕತ್‌ರ ಕೊಡವ ಕವಿಕ್ ಎಚ್ಚಕ್ ಒತ್ತಾಸೆ ಕೊಡತತ್ ಎಣ್ಣುವಾನೆಲ್ಲ ಅರಿಯಲು.

ಕವಿ ಒರ್ ಕಾಗದತ್ ಇನ್ನನೆ ಎಳ್‌ದಿತ್ -"ಮಾಳೇಟಿರ ಮಾಚಯ್ಯ, ಕೇಳಪಂಡ ಮುದ್ದಪ್ಪ- ಇವು ಚತ್ತ ಪಿಂಞ ನಾಡ ಸಾಹಿತ್ಯ ಬೊಳಚೆಕ್ ಕಾತ್ ಬೀಜುವು ಇಲ್ಲತಾಚಿ!"

* * * *

1870-80ರ ಮಧ್ಯತ್ ತಿಪಟೂರ್ ನಾಟಕ ಮಂಡಳಿ ಮಡಿಕೇರಿ ಓಂಕಾರೇಶ್ವರ ತಿರ್‌ಕೆರ ಪಕ್ಕ ರಂಗಭೂಮಿ ಮಾಡಿತ್ ಕಳ್‌ಚದ್ ಕೊಡಗ್‌ರ ಆದ್ಯ ನಾಟಕ ಕಲಾಪ್ರದರ್ಶನ. ಇದ್‌ನ ನೋಟುವಕ್ ಪೋನ ಕವಿ, ನಾಟಕತ್‌ರ ಎಲ್ಲಾ ಪಾಟ್‌ನೋ ಪಡ್‌ಚಿತ್ ಪಾಡ್‌ನಾನ ಕಂಡಿತ್ ಕಂಪೆನಿಕಾರ ಕವಿಕ್ ಚೆರಿ ಚೆರಿಯ ನಟನೆ ಮಾಡುವಕ್ ಕೊಡ್‌ತತ್. ಅಕ್ಕ ಕೊಡಗ್‌ರ ಒರ್ ಕವಿ ಆಯಿತಿಂಜ ವೆಂಕಟಾದ್ರಿ ಶಾಮರಾಯಂಡ ಪರಿಚಯ ಆಚಿ. ಅಯಿಂಗಡ ಕೈಲ್ ಕೀರ್ತನನೆಲ್ಲ ಎಳ್‌ದಿಚಿಟ್ಟಂಡ್ ಪಡ್‌ಚತ್. ತಿಪಟೂರ್ ಕಾರ ಬುಟ್ಟಿತ್ ಪೋನ ರಂಗ ಸಾಮಗ್ರಿನೆಲ್ಲ ಚೆನ್ನ ಜನಡ ಸಹಾಯತ್ ತಾನೇ ಕ್ರಯಕ್ ಎಡ್‌ತಂಡ್ "ಚಂದ್ರಹಾಸ" ನಾಟಕ ಕಳ್‌ಚಿತ್ ನಲ್ಲ ಕೇಳಿ ಎಡ್‌ತತ್.

1892ಲ್ ಮಂಗಲ ಆಯಿತ್, 1894ಲ್ ಮಡಿಕೇರಿಂಜ ವರ್ಗ ಆಯಿತ್ ಭಾಗಮಂಡಲಕ್ ಪೋಚಿ. ಅಕ್ಕಣೆಕ್ ಅಪ್ಪಚ್ಚ ಕವಿ ಸಂಸ್ಕೃತಿ ಶ್ಲೋಕ ಅಭ್ಯಾಸ ಮಾಡಿತಿಂಜತ್. ಕವಿ ಸ್ವತಃ ಎಳ್‌ದಿತ್ ಪಾಡುವಾನ ಕಂಡಿತ್ ಕುಶಿಪಟ್ಟ ಅಕ್ಕತ್‌ರ ವಿದ್ಯಾಧಿಕಾರಿ ರಘುನಾಥರಾಯ ಕವಿನ ಕಾಕಿತ್ "ನಿಂಗಡ ಕೊಡವ ತಕ್ಕ್‌ಲ್ ನಿಂಗ ಪಾಟ್ ಕಟ್ಟಿತ್ ನಾಟಕ ಎಳ್‌ದಿ. ಇದ್ ಕೊಡವ ಜನಾಂಗಕ್ ಭೂಷಣ"ಂದ್ ಎಣ್ಣ್‌ಚಿ. ಅಂದ್‌ಂಜ ಕವಿರ ಸಾಹಿತ್ಯ ಸೇವೆ ಉಕ್ಕಿತ್ ಮರ್‌ಂಜತ್. ಕೊಡಗ್‌ಲ್ ಸಾಹಿತ್ಯ ಜಾಗೃತಿ ಆಚಿ.

1909ಲ್ "ಸುಕನ್ಯಾ ಪರಿಣಯ" ಎಣ್ಣುವ ಕನ್ನಡ ನಾಟಕ ಎಳ್‌ದ್‌ಚಿ. ಆಚೇಂಗಿ, ಅದ್ ಅಚ್ಚಾಯಿತಿಲ್ಲೆ. ಕೊಡಗ್‌ರ ಒಳ್‌ಲ್ ಕೊಡವ ನಾಟಕ, ಕೊಡಗ್‌ರ ಪೊರಮೆ ಕನ್ನಡ ನಾಟಕ ಮಾಡಿಯಂಡಿಪ್ಪಕ "ಮದ್ರಾಸ್ ಮೇಲ್" ಎಣ್ಣುವ ಒರ್ ಪತ್ರಿಕೆ - ಅಪ್ಪಚ್ಚಕವಿ ಪೆರ್ತ್ ನಲ್ಲ ನಟ, ಕವಿ ಪಿಂಞ ವಿದ್ಯಾಂಸಂದ್ ಹೊಗಳಿತ್ ಎಳ್‌ದ್‌ಚಿ. ಕವಿಕ್ ಬಡತನತ್‌ರ ಕೂಟ್‌ಕ್ ಕೆಮಿಯೂ ಕೇಕತಾಪಕ ಹರಿಕಥೆ ಮಾಡುವಕ್ ಸುರು ಮಾಡ್‌ಚಿ. ಕವಿರ ಸಾಮರ್ಥ್ಯ ಕಂಡ ಮಂಗಳೂರ್‌ರ ಕವಿ ಮಂಗೇಶರಾಯ 1928 ಮಾರ್ಚ್‌ಲ್ "ಸ್ವದೇಶಾಭಿಮಾನಿ" ಪತ್ರಿಕೆಲ್ ಪೆರ್ತ್ ಹೊಗಳಿತ್ ವರದಿ ಮಾಡ್‌ಚಿ. ಪಂಜೆ ಮಂಗೇಶರಾಯ ಅಪ್ಪಚ್ಚಂಡ ಕವಿತಾ ಪ್ರತಿಭೆನ ಪೆರ್ತ್ ಕೊಂಡಾಡ್‌ಚಿ.

ಸಾಹಿತ್ಯ ಸಾಧನೆ: ಇಂದ್ ಕೊಡಗ್‌ರ ಜನಕ್ ಸಾಧಾರಣ ಗೊತ್ತುಳ್ಳ ಅಪ್ಪಚ್ಚ ಕವಿರ ನಾಲ್ ನಾಟಕತ್‌ರ ಪೆದ ಮಾತ್ರ; ಅದೂ ಪಳೆಯಯಿಂಗಕ್ ಕವಿ ಕನ್ನಡತ್ ಎಳ್‌ದ್‌ನ

ನಾಟಕ ಪದ್ಯ, ಕೊಡವ ತಕ್ಕ್‌ರ ಭಕ್ತಿಗೀತೆ ಇದೆಲ್ಲಾ ಅಚ್ಚಾಗತೆ ಪೋನದ್ ಸಾಹಿತ್ಯ ಕ್ಷೇತ್ರಕ್ ಆನ ಬಲ್ಯ ನಷ್ಟ.

1906ಲ್ ಯಯಾತಿ ರಾಜಂಡ ನಾಟಕ, 1908ಲ್ ಸಾವಿತ್ರಿ ಪಿಂಞ ಸುಬ್ರಹ್ಮಣ್ಯ ನಾಟಕ, 1918ಲ್ ಶ್ರೀ ಕಾವೇರಿ ನಾಟಕ ಆಚಿ. ತಾನ್ ಎಳ್‌ದ್‌ನ ನಾಟಕತ್‌ನ ಇಡೀ ಕೊಡಗ್‌ಲ್ ತಾನೇ ಮುಖ್ಯ ಪಾತ್ರಧಾರಿ ಆಯಿತ್ ನಾಟಕ ಕಳ್‌ಚತ್. 1926ಲ್ ಕವಿರ ಮನೆಯೂ ಬೆಂಜಿಪೋಚಿ. ಗರೀಬತನ ಬಾತ್. ಜನಡ ಪ್ರೋತ್ಸಾಹವೂ ಇಲ್ಲತಾಚಿ. ಎಲ್ಲಾ ಸರಿ ಕೂಡಿತಿಂಜಕ ಆ ಸಾಹಿತ್ಯ ಗಣಿರೊಳ್‌ಂಜ ಎಂತೆಂತಾ ಸಾಹಿತ್ಯ ಪೊರಬೂವಯಿಂಜತೋ ಎನ್ನೋ!

ಕವಿತಾ ಸಾಮರ್ಥ್ಯ: ಅಪ್ಪಚ್ಚಕವಿ ತಾನೇ ಎಳ್‌ದ್‌ನ ನಾಟಕತ್‌ಲೆಲ್ಲಾ ತಾಂಡ ಕವಿತಾ ಸಾಮರ್ಥ್ಯ ಕಾಟ್‌ನಾನ ನೋಟುವಕ್ ಭಾರತ ದೇಶತ್‌ರ ಪಳೆಯ ಏದ್ ಕವಿಯಕೂ ಈ ಕವಿ ಕಮ್ಮಿ ಆಯಿತ್ ಕಾಂಬ್‌ಲೆ.

ಕವಿ ತಾಂಡ ಕೊಡವ ಪಾಟ್‌ಲ್ ಈ ರಾಗತ್‌ನ ಬಳಸಿಯಂಡತ್ -ಕಲ್ಯಾಣ, ಹಿಂದೂಸ್ಥಾನಿ ಕಾಪಿ, ಕೇತಾರ, ಜುಂಜೋಟ, ಬೇಹಾಗ್, ಮೋಹನ, ಕಾಮಾಚ್, ಸುರಟಿ, ನೋಟ್, ದರ್ಬಾರ್, ಬೇಗಡೆ, ಕರಹರಪ್ರಿಯ, ಮಾಯಿವಾಳದ ಗಾಳ, ಮುಖಾರಿ, ಶ್ರೀರಾಗ, ಶಂಕರಾಭರಣ, ಕಾವೇರಿ, ಯವಮನ ಕಲ್ಯಾಣಿ, ನಾದನಾಮ, ಗಜಲ್, ಕಾಂಬೋಡಿ, ಮಾಂಜಿ, ಜಂಗಲ್, ಬಿಲಾಹರಿ, ಪೂರ್ವ ಕಲ್ಯಾಣಿ, ನಾದನಾಮ, ಕ್ರಯಕಾನಡ, ಧನಾಸರಿ, ಫರ್ಜ್, ಯಮುನಾ, ಕಲ್ಯಾಣಿ, ಧನ್ಯಾನ, ಶಾಮ ಕಲ್ಯಾಣಿ, ನೀಲಾಂಬರಿ.

ಪ್ರತಿಯೋರ್ ರಾಗಕೂ ಪಳೆಯ ಒರ್ ಪಾಟ್‌ರ ಗೆರೆನ ಉದಾರಣೆ ತಂದಿತ್, ಎನ್ನನೆ ಪಾಡಂಡೂಂದ್ ಬಟ್ಟೆ ಕಾಟಿತ್. ಕವಿಕ್ ಸಾಹಿತ್ಯ ಲೋಕತ್‌ರ ಆಳ ಎಚ್ಚಕ್ ಅರ್‌ಂಜಿತಿಂಜತ್‌ಇಂದ್ ಕಲ್ಪನೆ ಮಾಡುವದೇ ನಂಗಡಂತಯಿಂಗಕ್ ಕಷ್ಟ ಸಾಧ್ಯ.

ತಾಂಡ ಸಾಹಿತ್ಯತ್ ನವರಸ ದುಂಬ್‌ಚಿಟ್ಟತ್, ನಾಟಕಕ್ ಮುಖ್ಯಾಯಿತ್ ಬೋಂಡಿಯಾನ ಹಾಸ್ಯರಸ, ಕರುಣಾರಸ, ವೀರರಸತ್‌ನ ಸಂದರ್ಭಕ್ ಸೆರಿಯಾಯಿತ್ ಕೂಟಿಯಂಡಿತ್. ಕೊಡವತಕ್ಕ್‌ಲ್ ಶಬ್ದಭಂಡಾರ ಕಮ್ಮಿ ಉಳ್ಳಾನಗುಂಡ್, ಸಾಹಿತ್ಯ ರಚನೆ ಚೆನ್ನ ಕಷ್ಟಾಂದ್ ಜನಡ ಅಭಿಪ್ರಾಯ. ಆಚೇಂಗಿ, ಅಪ್ಪಚ್ಚಕವಿಕ್ ಮಾತ್ರ ಈ ವಾದ ಸರಿ ಆಗಾಂದೆಣ್ಣುವದ್ ಅಯಿಂಡ ಕವನ ನೋಟ್‌ಚೇಂಗಿ ಗೊತ್ತಾಪ.

*ಪಣ್ಮ ಖಂಡವ್ವನೀ | ಮನ್ಮ ಥ ಮಾವಿ | ನಿ |*
*ಕಣ್ಮೊಂದ್ ಉಳ್ಳ ಆ ಚೆನ್ಮ ಯ ರಾಣೀ*

ಇಲ್ಲಿ ಕಾಂಬ ಪೌರಾಣಿಕ ಜ್ಞಾನ ಪಿಂಞ ಲಕ್ಷರ ಶಬ್ದ ಒಂದಾಗೊಂದ್ ತಾಳ ಪೊಜ್ಜಿತ್ ಪೊರಡುವ ನಾದಲಹರಿ ನೋಟುಂಡು.

*ಬೆಂಜವ ನೀನ್ ಡೆದ್ದಿತ್ ಕೇಳ್*
*ಮಂಜ್ ಕುಂದ್‌ಲುದ್‌ಚಿತ್*
*ಅಂಜಿ ಮೂಡ್‌ನ ತಪಸ್ಸ್ ಮಾಡಿಯುವ*
*ನಂಜ್‌ನಲಿಂಜವನೊಲಿಯು*

ಈ ನಾಲ್ ಗೆರೆಲ್ ಇಡೀ ಶಿವಪುರಾಣ ಕಥೆ ಅಡ್‌ಂಗಿತ್ - ಪ್ರತಿ ಶಬ್ದಕೂ ದ್ವಿಪ್ರಾಸ, ನಾದ ಸ್ತುತಿ, ಪದಸರಣಿ ಪಿಂಞ ವಾಕ್ ಪ್ರವಾಹ ಈ ಕವಿರ ವಿಶೇಷತೆ.

ಬಲ್ಯ ತಾತ್ವಿಕ ವಿಷಯು ಅನ್ನನೆ ಆಚೇಂಗಿ, ಚಿಲ್ಲರೆ ಸಂಗತಿನ ಇನ್ನನೆ ಎಳ್‌ದಿತ್-

*ಕಳ್ಳ್ ನಲ್ಲದ್ ಕಂಡ | ಕಳ್ಳಂಗ ಕೆಲ್ಲಾಕು*
*ಬೊಳ್ಳಿಕಳ್ಳದ್ ನಲ್ಲದ್*
*ಚಳ್ಳಿತ್ ಬೂಕಣೆ ತುಳ್ಳಿ ಕಳಿಪಳ*
*ಬೊಳ್ಳವ್ವ ಬೊಳ್ಳಿ ಕಳ್ಳ್ ||*

ಪಿಂಞ ಕವಿರ ಶಬ್ದವೇಗ, ಕವಿತಾ ಚಮತ್ಕಾರ ಕ್‌ದಲ್ ನೋಟ್‌ನ -

*ಕರ್‌ತೋರ್ ಪಟ್ಟುವ್‌ತ್ | ಅರೆಕೆಟ್ಟ್ ಚೇಲ ಬೆಚ್ಚಿ*
*ತೊರ್‌ವನ ಆಡ್‌ಚಂಡ್ ಪೊಣ್ಣೇ*
*ಒರ್‌ವತ್ ಪೋಪೆಲ್ಲಿಕ್*
*ಮುಂಡಕ್ ನೀರೆಡ್‌ತ್*
*ಚಂಡೆಲ್ ಪೂವ್ ಬೆಚ್ಚಿ*
*ಹಂಡ್ ತಿರ್‌ತಿರ್‌ಕಿ ಪೊಣ್ಣೇ !*
*ಕುಂಡೋಣಲೆಲ್ಲಿಕ್ ನೀ*

ಶುದ್ಧ ಕೊಡವಪತಕ್ಕ್‌ರ ಶಬ್ದ ಕವಿರ ಪೆನ್ನ್‌ಂಜಿ ಇಚ್ಚಕ್ ಪುಟ್ಟಿಗೆ ಪೊರಬೂವಂಡುವೇಂಗಿ, ಅದ್ ದೈವದತ್ತ ವರತ್‌ನಗುಂಡ್ ಮಾತ್ರ ಸಾಧ್ಯ.

*ಬಂಬ ನಾನ್‌ಲೊ ಅಂಬ್ ಕನ್‌ಟಲೊ*
*ಕೊಂಬ ಕವಮುಂಡ ತೊಂಬೆ ಕೆಣೆಪಿನೊ*
*ಬಾಳ ನಾ ಶೂರ ಬಾಳ್‌ಲ್ ಧೀರ*
*ಕಾಳೆ ಪಂದಿರ ಬೋಳೆ ಕೆಪ್ಪುವಿ*

ಕೊಡವಭಾಷೆಲ್ ಅಗತ್ಯ ಶಬ್ದಕ್ ಕೊರತೆ ಇಲ್ಲೇಂದ್ ಇನ್ನತ ಓರಂದ್ ಪಾಟ್‌ನ

ನೋಟ್‌ನಕ ಮದಿ. ಇನ್ನನೆ ಕೆಟ್ಟ್‌ನ ನೂರಾರ್ ಪಾಟ್ ಪಿಂಞ ಕಂದ ಪದ್ಯ ಕವಿರ ಕಲಾಶಕ್ತಿ ಪಿಂಞ ವಿಚಾರ ಜ್ಞಾನತ್‌ನ ಕಾಟುವ.

ಇದ್‌ಂಗ್‌ಂಜಿ ಬಲ್ಯ ಸಾಹಿತ್ಯ ಕೊಡುಗೆ ಇಂಞ್‌ಲ್ಲಿ ಕಾಂಗಲು? ಆಚೇಂಗಿ, ಕವಿರ ಕಲ್ಪನಾಶಕ್ತಿ, ರಸಮಾಧುರ್ಯತ್‌ನ ಓದಿತ್ ಅರ್ಥ ಮಾಡಿಯಂಡ್, ಅರ್‌ಗಣೆ ಮಾಡಿಯವನ್ನತ ಕೊಡವಡ ಕೊರತೆ ಮಾತ್ರ ಅಂದೂ ಇಂಜತ್, ಇಂದೂ ಜಾಸ್ತಿ ಆಯಿತ್.

ಕೊಡವತಕ್ಕ್‌ಲೂ ಪ್ರೌಢ ಸಾಹಿತ್ಯ ಸೃಷ್ಟಿ ಮಾಡಲೂಂದ್ ಜನಕ್ ಪುರ್‌ಡ್ ಪುಟ್ಟ್‌ಚಿಟ್ಟಿತ್, ಕವಿ ಕವಿಯಕೆಲ್ಲ ಅಪ್ಪಚ್ಚಕವಿಯೇ ಆದರ್ಶ ಪುರುಷ. ಅಪ್ಪಚ್ಚ ಕವಿ ಬಳಸ್‌ನ ಕೊಡವತಕ್ಕ್‌ರ ಮೂಲ ಶಬ್ದತ್‌ನ ಬಳಸಿತ್ ಎಚ್ಚಕೊ ಸಾಹಿತ್ಯ ಸೃಷ್ಟಿ ಆಚಿ. ಪುಸ್ತಕ ಅಚ್ಚಾಚಿ. ಇನ್ನನೆ ಕೊಡವತಕ್ಕ್‌ರ ಸಾಹಿತ್ಯ ಲೋಕತ್‌ರ ಸಾಹಿತ್ಯ ಬ್ರಹ್ಮಂಡ ಪಟ್ಟ ಈ ಕವಿಕ್ ಕ್‌ಟ್ಟ್‌ಚಿ.

ಕಾಡ್‌ಲ್ ಬೀಂದ್ ಒರ್ ಪೂವ್ ದೇವ ಪಾದ ಸೇರತೆ, ಪ್ರಕೃತಿ ಆರಾಧಕಂಗಕೂ ಕಾಂಗತೆ, ಬಾಡಿ ಒಣಂಗಿ ಪೋನನೆಕೆ ಹರದಾಸ ಅಪ್ಪಚ್ಚಕವಿರ ಸಾಹಿತ್ಯ ಚುರ್‌ಂಡಿ ಪೋಪಕಾನದ್ ಕೊಡಗ್‌ರ, ಕೊಡವಡ ದೌರ್ಭಾಗ್ಯ.

ಆಚೇಂಗಿ, ಎಡೆಲೆಡೆಲ್ ಸಾಹಿತ್ಯಾಭಿಮಾನಿಯು, ಕಲಾಭಿಮಾನಿಯು ಉಂಡ್‌ಂದೆಣ್ಣುವಕ್ ಈ 125ನೇ ಕಾಲತ್‌ರ ನಮ್ಮೆ ನಡ್‌ತುವದೇ ಸಾಕ್ಷಿ.

ಕೊಡವ ಸಾಹಿತ್ಯ ಬ್ರಹ್ಮ, ರಸಿಕ ರಾಜ ಮಾಕವಿರ ಪೊರಬುದ್ದ ನಾಲ್ ನಾಟಕತ್‌ನ ಆಚೇಂಗಿಯೂ ಕೊಡವಡ ಮನೆಮನೆಲ್ ಎಲಂಗುವನೆಕ ಮಾಡ್‌ವಕ ಅದ್‌ಂಗ್‌ಂಜಿ ಬಲ್ಯ ಸಾಹಿತ್ಯ ಸೇವೆ ಬೋರೆ ಉಂಡಾ? ಇದೇ ಆ ಮಹಾ ಕವಿಕ್ ಕೊಡವಳಾನ ನಂಗಡ ಪ್ರತಿ ಕೊಡುಗೆ!

❖ ❖ ❖

# ಕೊಡವಡ ಉಡ್‌ಪ್ ತೊಡ್‌ಪ್

[ವೀರಾಜಪೇಟೆಲ್ 11.4.93ಲ್ ನಡ್‌ಂದ ಅಖಿಲ ಕೊಡವ ಸಮಾಜ ಪೊನ್ನ್ ನಮ್ಮೆ ಕಾರ್ಯಕ್ರಮತ್‌ರ ವಿಚಾರಗೋಷ್ಠಿಲ್ "ಕೊಡವ ಉಡ್‌ಪ್-ತೊಡ್‌ಪ್"ರ ವಿಷಯತ್ ಬಾಚರಣಿಯಂಡ ರಾಣು ಅಪ್ಪಣ್ಣ ಓದ್‌ನ ಪ್ರಬಂಧತ್‌ರ ವಿವರ ಇಲ್ಲಿ ಉಂಡ್.]

ಕೊಡವಡ ವಿಚಾರತ್ ಸಂಶೋಧನೆ ಮಾಡ್‌ನ ಚೆನ್ನ ಪಾಶ್ಚಾತ್ಯ ಜನ ಎಳ್‌ದಿ ಬೆಚ್ಚ ದಾಖಲೆ ನೋಟುವಕ ನಂಗಡ ಘನತೆ ಯೋಗ್ಯತೆ ಗೊತ್ತಾಪ. ಅಲ್ಲತೆ, ಇನ್ನತೋರ್ ಸುಸಂಸ್ಕೃತ ಜನಾಂಗ ಅಡ್ನ ಬಟ್ಟೆ ಪುಡಿಕತೆ ಪಳೆಯ ಗತ್ತ್‌ನ ಪೊತಿ ಬೊಳ್‌ತಂಡೊಂದ್ ಪುರ್‌ಡ್ ಪುಟ್ಟತಿರ. ಕೊಡವ ಈ ಕೊಡಗ್‌ಲ್ ಎಕ್ಕಂಜಿ ಉಂಡ್ ಎಣ್ಣುವ ವಿಚಾರತ್ ಸಂಶೋಧಕಂಗಡಲ್ಲಿಯೇ ಭಿನ್ನಾಭಿಪ್ರಾಯ ಉಂಡ್. ಆಚೇಂಗಿ ಕೊಡವ ಇಲ್ಲಿಯತ್‌ರ ಮೂಲನಿವಾಸಿಯ ಎಣ್ಣುವಾತ್ ದಂಡಭಿಪ್ರಾಯ ಇಲ್ಲೆ. ಪಾಶ್ಚಾತ್ಯ ವಿದ್ವಾಂಸಂಗ ಕೊಡವಡ ವಿಷಯತ್ ಎಳ್‌ದಿ ಬೆಚ್ಚದ್ ಇನ್ನನೆ ಉಂಡ್-

**ಜನರಲ್ ವೆಲ್:-** ಕೊಡವ ಶಿಸ್ತ್‌ಕಾರ, ಸ್ನೇಹಜೀವಿಯ, ತಂಗಳೇ ಮಿಂಞಕ್ ಬಂದಿತ್ ಸಹಾಯ ಮಾಡುವ. ನಾನ್ ಇಡೀ ಪ್ರಪಂಚ ಸುತ್ತಿ ನೋಟಿಯೆ; ಆಚೇಂಗಿ, ಕೊಡವಳನ್ನತ ಬೋರೆ ಜನಳ ಕಂಡಿತಿಲ್ಲೆ. ಕೊಡವ ಕಾಟುವ ಸ್ನೇಹ ಪಿಂಞ ಸಹಕಾರ ಏದೋರ್ ಪ್ರತಿಫಲತ್‌ರ ಲಾಭಕಾಯಿತ್ ಅಲ್ಲ ಎಣ್ಣುವದ್ ಬಲ್ಯ ಆಶ್ಚರ್ಯ. ನಾನ್ ಒಬ್ಬನೇ ಇಪ್ಪಕ ಪಣ ಕೊಡ್‌ತಿತ್ ಆಶೆ ಕಾಟಿನೋಟ್‌ನೆ. ದಕ್ಷಿಣಭಾರತತ್ ದಾರ್‌ನ ಬೋಂಡಿಕ್ ಪಣತ್‌ರ ಆಶೆ ಕಾಟಿತ್ ಬಗಲ್‌ಕ್‌ಡಲು. ಆಚೇಂಗಿ, ಕೊಡವಳ ಕಯ್ಯ, ಸಾಧಾರಣ ಜನಕ್ ಅರ್ಥ ಆಗತನ್ನತ ಎತ್ತರ ಮಟ್ಟತ್‌ರ ರೀತಿ ಈ ಜನಡಲ್ಲಿ ಕಾಂಬ.

**ಡಾ|| ಮೂಗ್ಲಿಂಗ್:-** ಕೊಡವ ಏದೇ ವೈದಿಕ ಧರ್ಮಕಾಡ್, ಬ್ರಾಹ್ಮಣ, ಶಿವಾಚಾರ ಪ್ರಭಾವಕಾಡ್ ಒಳಪಟ್ಟ್‌ತಿಲ್ಲೆ. ಕೊಡವಡ ಜನನ, ಪೆದ ಇಡುವೊ, ಮಂಗಲ, ಚಾವ್, ದಫನ - ಇನ್ನತ ಏದೇ ಕಾರ್ಯತೂ ಪಟ್ಟಮ, ವೇದಮಂತ್ರತ್‌ರ ಅಗತ್ಯ ಇಲ್ಲೆ.

**ರಾಬ್ ಕೋಲ್:-** ಕೊಡವ ತಂಗಡ ಭೂಮಿ ಆಸ್ತಿನ ಸೈನಿಕ ಹಿಡುವಳಿ (ಜಮ್ಮ) ಆಯಿತ್ ಪಡ್‌ಂದಿತ್. ಈ ರಿಯಾಯಿತಿಕಾಯಿತ್ ಅಕ್ಕತ ರಾಜಂಗ್ ಸೇವೆ ಮಾಡಂಡಿಯ ಅಗತ್ಯ ಇಂಜತ್.

**ಲೆ|| ಕೊನ್ನಾರ್ :-** ಕೊಡವ ಚೆರ್‌ಪತಿಂಜೆ ಕತ್ತಿ, ತೋಕ್ ಪುಡಿಪಾಂಗಾಯಿತ್,

ಅಯಿಂಗಕ್ ವೀರಪರಂಪರೆ ಉಂಡ್. ವೀರ ಕ್ಷತ್ರಿಯಡಲ್ಲಿ ಕಾಂಬಂತ ಕ್ರೂರತನ, ಬಲತ್ಕಾರ, ಶಕ್ತಿಯೇ ಮುಕ್ತಿ ಎಣ್ಣುವ ಪರಂಪರೆ ಕೊಡವಡಲ್ಲಿ ಇಲ್ಲೆ. ಉದಾರಿಯ ಪಿಂಞ ಕ್ರೀಡೆಲ್ ಪೆದ ಪೋನ ಇಯುನ ಮೆಚ್ಚತೆ ಎನ್ನನೆ ಇಪ್ಪೊ?

ಎರೆಸ್ಕಿನ್ ಪೆರಿ:- ದಕ್ಷಿಣಭಾರತತ್‌ರ ಏದ್ ಜನಾಂಗಕೂ ಕೊಡವ ಹೋಲಿಕೆ ಇಲ್ಲೆ. ಆಯಿಂಗ ಪೊರ್‌ಮೆಂಜಿ ಬಂದಯಿಂಗ ಅಯಿತಿರಂಡು. ಹಿಂದೂದೇಶತ್ ನಾನ್ ನೋಟ್‌ನ ಜನಡ ಪೈಕಿ ಕೊಡವಳನ್ನತ ಕಪಟ ಇಲ್ಲತೆ ನೇರೆ ಸ್ವಭಾವ, ತಡಿ ಸಂಪತ್ತ್, ನಲ್ಲ ನಡಾವಳಿಕೆ ಉಳ್ಳ ಬೋರೆ ಜನಳ ನಾನ್ ಕಂಡಿತಿಲ್ಲೆ.

ಅನಾಮಿಕ:- ಕೊಡವಡ ಮನೆ ಪಡಿಮಿಂಞ ಇರ್‌ಲೂ ತೊರ್‌ಂದಿತೇ ಇಪ್ಪಯಿಂಜತ್. ಕ್ಡಿಕೆಲ್ ಕಚ್ಚಿರದಾಡ್, ಇರ್‌ಂಬ್‌ರದಾಡ್ ಬಾರ್ ಇಪ್ಪ ಇಂಜ್‌ಲೆ. ಕೂಳ್ ಬಟ್ಟೆ, ಇದ್ ದಂಡೇ ಅಯಿಂಡ ಅವಶ್ಯಕತೆ. ಗರೀಬತನ ಇಲ್ಲೆ. ಗ್ರಾಮ ಮುಖಂಡ ಎಣ್ಣನೆಕೆ ನಡ್‌ಪ. ಕೋಮುವಾರು ಭಾವನೆ ಅಯಿಂಡ ಪಕ್ಕ ಇಲ್ಲೆ.

ಎರೆಸ್ಕಿನ್ ಪೆರಿ:- ಕೊಡವಡ ಉಡ್‌ಪ್ ರಾಜ ಗೌರವ ಉಳ್ಳಂತದ್. ಪೆರ್ತ್ ಚಾಯುಳ್ಳ ಅಯಿಂಡಕುಪ್ಯ ಮೊಣ್ಣೆಕಾಲ್‌ಕ್‌ಂಜಿ ಚೆನ್ನ ಕ್‌ೕದಕಿಪ್ಪ. ಆಂಡ ಕ್‌ೕದಲ್ ಕಾಂಬ ಅಯಿಂಡ ಬೊರೀ ಕಾಲ್ ನೋಟಂಡಿಯದ್. ಕೆಲವು ಜನ ಎಕ್ಕಡ ಇಟ್ಟಕಲೂ ಶೂ ಇಡುವವು ಕಮ್ಮಿ. ಕೊಡವಡ ಬೋಳೆಲ್ ರುದ್ರಾಕ್ಷಿಮಾಲೆ, ಕೈಲ್ ಪೊನ್ನ್‌ರ ಕಟ್ಟಿ ಬಳೆ, ಕೆಮಿಲ್ ಕಡಕ್ ಸಾಮಾನ್ಯ ನಮ್ಮೆ-ನಾಳ್‌ಲ್ ಕೊಕ್ಕೆ ತಾತಿ ಇಡುವದ್ ಪದ್ಧತಿ. ಅಯಿಂಡ ಮಂಡೆತುಣಿ, ಚೇಲೆ, ಪೀಚೆಕತ್ತಿ ವಿಶೇಷಪಟ್ಟದಲ್ಲತೆ ಪೆರ್ತ್ ಚಾಯುಳ್ಳದ್.

ಅನಾಮಿಕ:- ಕೊಡವತಿಯ ಚಾಯಿಕರ್ತಿಯ ಅಯಿಂಡ ಎತ್ತರ, ಬೊಳ್‌ಪ್‌ರಂಗ್ ಪ್ರತ್ಯೇಕ ಮಾದರಿರ ಪೊಡಿಯ ಉಡ್‌ಪ್, ಮಾಲ್ ಮಟ ಇಟ್ಟದ್ ಪೆರ್ತ್ ಚಾಯಿ ಕಾಂಬ. ಅಯಿಂಗ ಮೈಲಿಗೆ ಬಟ್ಟೆ ಇಟ್ಟದೇ ಕಾಂಬ್‌ಲೆ.

ಎಡ್ಗರ್ ಥಾರ್‌ಸ್ಟನ್ :- ಮಂಗಲತ್ ಆಣ್ ಪೊಣ್ಣ್‌ರಲ್ಲಿಕ್ ಬಪ್ಪಕ ಬಾಳೆಕೆತ್ತುವ ಪೊಣ್ಣಾಳ ಅಕ್ಕಿನ ಕಲ್ಲ್‌ಪರತ್‌ರನೆಕೆ ಕನಿಪದ್ ಪಳೆಯ ಕ್ಷತ್ರಿಯ ಪದ್ದತಿರ ಬದಲಾನ ರೂಪ. ಮಂಗಲಕಾರ ಒರೇ ಕೆತ್ತ್‌ಕ್ ಬಾಳೆ ಕೆತ್ತಿ ತುಂಡ್ ಮಾಡುವದ್ ನೋಟ್‌ನಕ ಬೋರೆ ಜಾತಿಕಾರಡನೆಕೆ ಚೆರಿಯ ವಯಸ್ಸ್‌ಲ್ ಮಂಗಲಕ್ ಕೊಡವಡಲ್ಲಿ ಆಸ್ಪದ ಇಲ್ಲೆ.

ಹಿಲ್ಬರ್ ಬ್ರೋನ್:- ಅನಿರೀಕ್ಷಿತ ಬೆಂದ್‌ಕ ಬಂದ್‌ಟಕ ಕೊಡವ ಪೊಣ್ಣಾಳಕ್ ಚೆನ್ನ ಗಡಿಬಿಡಿ. ಓಡಿಪೋಯಿತ್ ಮೈಲಿಗೆ ಬಟ್ಟೆ ಉತ್ತಿತ್ ಮಡಿಬಟ್ಟೆ ಇಟ್ಟಂಡ್ ಚೊಂಬ್‌ಲ್ ನೀರ್ ಎಡ್‌ತ ಬಂದಿತ್ ಸ್ವಾಗತ ಮಾಡುವ. ಬೆಚ್ಚ ನೀರ್‌ನಾಡ್, ತಂದ ಕಾಫಿ ತಿಂಡಿನಾಡ್ ಎಡ್‌ತ್‌ಲೇಂಗಿ ಕೊಡವಡ ಅತಿಥ್ಯ ಪರಂಪರೆಕಾನ ಅವಮಾನಂದ್ ಅರ್‌ಂಜವ.

ರಾಬ್‌ಕೋಲ್:- ಕೊಡವ ಜನಾಂಗತ್‌ರ ನಂಬಿಕೆ, ವಿಶ್ವಾಸ ಉಳಿಚಿಟ್ಟವದ್ ಭಾರೀ ಅವಶ್ಯ ಉಂಡ್. ಅಯಿಂಡಲ್ಲಿ ಉಳ್ಳ ಈ ನಲ್ಲ ಗುಣ ನಂಗಡ ಪಾಶ್ಚಿಮಾತ್ಯ ನಾಗರೀಕತೆರ ಪ್ರಭಾವತ್ ಪಾಳಾಕತನೆಕೆ ನೋಟಿಯವಂಡು. ಕೂಟ್‌ಕ್ ಕೊಡವಡ ಮಾನಸಿಕ ವಿಕಾಸ ಪಿಂಞ ಪ್ರಪಂಚ ಜ್ಞಾನ ಬೊಳೆವನೆಕೆ ನೋಟಿಯವಂಡಿಯದ್ ನಂಗಡ ಆಡಳಿತಕೂ ಅವಶ್ಯ ಉಂಡ್.

ಮಿ. ಖೇರ್:- ನಾನೋರ್ ರೋಮನ್ ಕ್ಯಾಥೋಲಿಕ್. ನಂಗಡ ಪಾದ್ರಿಯ ಪಿಂಞ ನಂಗಡ ಚರ್ಚ್ ಕೊಡವಳ ನಂಗಡ ಮತಕ್ ಕೂಟುವಕ್ ಎಚ್ಚಕ್ ಪ್ರಯತ್ನಪಟ್ಟಿಕಲೂ, ಕ್ರಿಶ್ಚಿಯನ್ ಧರ್ಮ ಮೆಚ್ಚಿತ್ ಓರ್ ಕೊಡವನೂ ಮತಾಂತರ ಆಯಿತಿಲ್ಲೆ. ಆಂಡ ಬದ್‌ಲ್, ಚರ್ಚ್‌ರ ಆಶ್ರಯತುಳ್ಳ ಕ್ರಿಶ್ಚಿಯನ್ ಜನಾಂಗ ಚರ್ಚ್‌ರ ಪ್ರಭಾವಕ್ ಒಳಪಡತೆ ಕೊಡವ ಸಂಸ್ಕೃತಿ ಪದ್ಧತಿರ ಪ್ರಭಾವಕ್ ಒಳಪಡುವದ್ ಕಂಡ್ ಬಂದಿತ್.

ಇದೆಲ್ಲಾ ಪಾಶ್ಚಾತ್ಯ ಜನಡ ಅಭಿಪ್ರಾಯ. ಕೊಡವಳ ಪ್ರತ್ಯೇಕ ಜನಾಂಗಾಂದ್ ತಿರ್‌ಚಿ ಕಾಂಬಕ್ ಮೂಲ - ಕೊಡವಡ ಪೊರ್‌ಪಾಡ್, ತಕ್ಕ್ ಪಿಂಞ ಪೆದ. ಬಾಕಿ ಎಲ್ಲಾ ಸಂಗತಿ ಬೋರೆ ಜನಾಂಗತೂ ಇಕ್ಕು. ಇತಿಹಾಸ ಪೂರ್ವತ್ ಎನ್ನನೆ ಇಂಜಿತಿಕ್ಕೊಂದ್ ನಂಗಡ ಕಲ್ಪನೆಕ್ ಬುಟ್ಟ ವಿಚಾರ. ಭೌಗೋಳಿಕ ಪರಿಸರಕ್ ತಕ್ಕಂತ ಪೊರ್‌ಪಾಡ್ ಪ್ರಪಂಚತ್ ಕಂಡ್ ಬಪ್ಪ. ಕೊಡವ ಪೊರ್‌ಪಾಡ್‌ನ ಜನಾಂಗತ್‌ರ ಅಧಿಕೃತ ಉಡ್‌ಪ್‌ಂದ್ ಸ್ವೀಕಾರ ಮಾಡ್‌ಚಿ. ಪ್ರತಿ ಜನಾಂಗತೂ ಇದ್ ಕಟ್ಟ್‌ನಿಟ್ಟಾಯಿತ್ ಬಂದದ್. ಎಲ್ಲಾ ಜನಾಂಗಕೂ ಈ ಮಾದರಿ ಪ್ರತ್ಯೇಕತೆ ಉಂಡ್.

ಸುಮಾರ್ 150 ಕಾಲಕ್ ಬಯ್ಯ ಕೊಡವ ಪೊರ್‌ಪಾಡ್ ಎನ್ನನೆ ಇಂಜತ್‌ಂದ್ ನೋಟನ ಆಣ್‌ಕ್ ಮೂಳೆಲಿಂಜ ಕ್‌ದಕ್ ಕುಪ್ಯ, ನಡುಕೋರ್ ಚೇಲೆ, ಮಂಡೆ ತುಣಿ, ಕುಪ್ಯತ್‌ರೊಳ್‌ಲ್ ಕೂಡ್ ಬೋಳೆರ ಶರ್ಟ್, ನಡುಕೋರ್ ಕತ್ತಿ, ಅದ್‌ಂಡ ರಕ್ಷಣೆಕ್ ಕವಚ. ಇದೆಲ್ಲ ಇಂದೇತನ್ನಕೆ ಅಲಂಕಾರತ್ ಇಂಜ್‌ಲೆ. ಅದ್ ವಿವಿದೋದ್ದೇಶತ್ ಆಯಿತಿಂಜತ್.

ಪೊಣ್ಣಾಳ್‌ರ ಉಡ್‌ಪ್ -ಕೂಡ್‌ಬೋಳೆರ ಉದ್ದ ಕೈಕಳಕುಪ್ಯ, ಅರೆಕ್ ಬಯ್ಯಕ್ ನೆರಿ ಕಣಿಚ ಪೊಡಿಯ, ನೆರಿ ಜಾರತನೆಕೆ ಭದ್ರತೆಕ್ ಚಿಂಡ್ಯ ಚೇಲೆ, ಪೊಡಿಯ ಉತ್ತತನೆಕೆ ಭದ್ರವಾನ ಮೊಲಕೆಟ್ಟ್; ಮಂಡೆಕ್ ವಸ್ತ್ರ.

ಬ್ರಿಟಿಷ್ ಕಾಲತ್ ನಾಗರಿಕ ಜೀವನ ಸುರು ಆಚಿ. ಪುದಿಯ ಪೊಲ್ಲುವ ಯಂತ್ರ ಬಾತ್, ಸಂಸ್ಕೃತಿ, ಪರಂಪರೆ ಎಣ್ಣುವದ್ ನಿಂದ ನೀರಲ್ಲ. ಅದ್ ಒಕ್ಕುವ ಪೊಳೆ. ಕಾಲಕ್ ತಕ್ಕ ಬದಲಾವಣೆ ಬಾತ್, ಏದೇ ಬದಲಾವಣೆ ಬಂದಕಲೂ, ಉಡ್‌ಪ್-ತೊಡ್‌ಪ್‌ರ ಮೂಲ ರೂಪಕ ಮಾತ್ರ ಧಕ್ಕೆ ಬಂದ್‌ಲೆ. ಕುಪ್ಯತ್‌ರೊಳಿಯ ಸುರಾಲ್ ಇಡುವಕಾಚಿ. ಕಾಲರ್ ಶರ್ಟ್, ಮೊಲ ಕೆಟ್ಟ್‌ರ ಬದ್‌ಲ್ ಬ್ರೋಚ್, ಪಿನ್ನ್‌ಲ್ ಪೊಡಿಯ

ನಿಪ್ಪ್‌ಚಿಡುವಕಾಚಿ. ಇನ್ನತ ಚೆರಿಯ ಬದಲಾವಣೆ ಎಲ್ಲ ಜನಾಂಗತೂ ಉಳ್ಳದೆ.

1956 ಕೆತ್ತನೆ ಪೊರ್‌ಪಾಡ್‌ರ ಮೂಲ ರೂಪ ಬದ್‌ಲಾಗತೆ ಇಂಜತ್. ಪೊರ್‌ಮೆ ದೇಶಖ್ ಪೋನ ಪೊಣ್ಣಾಳ, ಮಿಲಿಟರಿಕಾರಡ ಕೂಡ ಪೋನ ಪೊಮ್ಮಕ್ಕ ಕನ್ನಡ ಪೊಡಿಯ ಸುರು ಮಾಡ್‌ಚಿ. ಇಪ್ಪರಿಪ್ಪರ, ಕೊಡಗ್‌ರ ಪೊರ್‌ಮೆ ನೆಲಸ್‌ನವ್ರು, ಪೊರ್‌ಮೆ ಕಾಲೇಜ್‌ಲ್ ಓದುವವು ಕನ್ನಡ ಪೊಡಿಯ ಸುರು ಮಾಡ್‌ಚಿ. ಆಚೇಂಗಿ, ಏದೇ ಸಭೆ - ಸಮಾರಂಭತ್ ಮಾತ್ರ ಸಂಪ್ರದಾಯಿಕ ಪೊರ್‌ಪಾಡ್‌ಕ್ ಧಕ್ಕೆ ಬಂದಿತಿಂಜ್‌ಲೆ.

ಇಕ್ಕ ಕೊಡವ, ಕ್ರಿಸ್ತಾನಿ ಪಿಂಞ ಮುಸಲ್ಮಾನ ಪೆದ ಇಟ್ಟವಲ್ಲಿಕ್ ಎತ್ತಿಪೋಚಿ. ಉಡ್‌ಪ್ ತೊಡ್‌ಪ್ ಮಿಶ್ರ ಆಯಿಪೋಚಿ. ನಾಲಾಳ್ ಕೂಡ್‌ನಲ್ಲಿ ಕೊಡವ ತಕ್ಕ್ ಪರ್‌ಂದಕ ಹೀನಂಗಾಂದ್ ಜನ ಲೆಕ್ಕ ಇಡೂಂದ್ ಬೊತ್ತುವಕಾಯಿಟಿತ್. ಈ ತರ ಬದಲಾವಣೆಕ್ ಕಾರಣ 1) ಅಭಿಮಾನ ಶೂನ್ಯತೆ 2) ಪಣಕಾರ, ಪ್ರಭಾವಶಾಲಿಯಡ ಅನುಕರಣೆ 3) ಕೊಡವಡ ಸಂಘಟನೆರ ದೋಷ.

ಕೊಡವಡಲ್ಲಿ ಅಲ್ಲತೆ ಬೋರೆ ಏದ್ ಜನಾಂಗತೂ ಸಂಗಳನೆಕೆ ಹದ್ದ್‌ಬಸ್ತ್ ಇಲ್ಲತಾನದ್ ಕಾಂಬ್‌ಲೆ. ಕಾಲಕ್ ತಕ್ಕ ಬದಲಾವಣೆ ಎಲ್ಲಡಲ್ಲಿಯೂ ಬಂದಕಲೂ, ಅದೆಲ್ಲ ಅಯಿಂಡ ಸಾಮಾಜಿಕ ಚೌಕಟ್ಟ್‌ರೊಳ್‌ಲುಂಡ್. ಕೊಡವ ಮಾತ್ರ ಈ ಚೌಕಟ್ಟ್‌ನ ದಾಟಿತ್ ಪೊರ್‌ಮೆ ಕಾಲ್‌ಟ್ಟಿದ್ ಕೊಡವ ಸಂಸ್ಕೃತಿರ ಸಾಶಕ್ ಮೊಳಿ ಅಚಿ.

ದೊಡ್ಡಿರ ಬೇಲಿ ಬಲ ಉಂಡೇಂಗಿ ಅತ್ತ ಒಳ್‌ಲಿಪ್ಪ. ಇಲ್ಲೇಂಗಿ ಓರಂದ್ ಕಾಳೆಯ-ಪೋಲಿಯ ಪೊರ್‌ಮೆ ದಾಟಿರುವ. ಅಕ್ಕ ಆ ಬಟ್ಟೆಲ್ ಬಾಕಿ ಉಳ್ಳವೂ ಪೊರ್‌ಮೆ ಕಡ್‌ಪದ್ ವಾಡಿಕ್. ಬೇಲಿ ಬಲಪಡ್‌ತತೆ ಒಳಕ್ ಕಾಕನಕ ಬಪ್ಪದುಂಡಾ? ಆಟಿಯ ಬಂದಿತೇ ಕೂಟಂಡು.

**ರಕ್ಷಣಾ ವಿಧಾನ:-** ಈ ಸಾಮಾಜಿಕ ಚೌಕಟ್ಟ್‌ನ ಬಲಪಡ್‌ತುವವು ದಾರ್? ಕಾತ್ ರಕ್ಷಣೆ ಮಾಡುವವು ದಾರ್?

ಪಂಡ್, ಎಲ್ಲಾ ಮನೆರ ಶಿಸ್ತ್, ಪುಡ್‌ತ ಯಜಮಾನಂಡ ಕೈಲ್; ಊರ್ ನಾಡ್‌ರ ಪುಡ್‌ತ ಊರ್‌ತಕ್ಕಂಗ, ನಾಡ್ ತಕ್ಕಂಗಡ ಕೈಲೂ; ಇಡೀ ಕೊಡವ ಜನಾಂಗತ್‌ರ ನೀತಿ-ನಿಯಮ, ಆಚಾರ-ವಿಚಾರ, ಪದ್ಧತಿ-ಪರಂಪರೆ ಇದೆಲ್ಲ ನಾಡ್‌ತಕ್ಕಂಗ, ದೇಶ ತಕ್ಕಂಗಡ ಪುಡ್‌ತತೂ ಇಪ್ಪಯಿಂಜತ್. ಅಂದ್ "ದೇಶತಕ್ಕ" ಎಣ್ಣುವ ಪೆದ ಬದಲಾವಣೆ ಆಯಿತ್ ಇಂದ್ "ಅಖಿಲ ಕೊಡವ ಸಮಾಜ ಅಧ್ಯಕ್ಷ"ಂದ್ ಪುದಿಯ ರೂಪ ಪಡ್‌ಂದಿತ್.

ಎಲ್ಲಾ ಕೊಡವ ಸಮಾಜವೂ ಅಖಿಲ ಕೊಡವ ಸಮಾಜತ್‌ರ ಅಧೀನತ್ ಇರಂಡು. ಕೊಡವಡ ನೀತಿ-ನಿಯಮ, ನಡ್‌ಪ್-ಕೊಡ್‌ಪ್, ಉಡ್‌ಪ್-ತೊಡ್‌ಪ್, ಪದ್ಧತಿ-ಪರಂಪರೆ ಇನ್ನತದ್ ಕಾಲಕ್ ಅವಶ್ಯ ಪಟ್ಟ ಪರಿವರ್ತನೆ ಮಾಡಿತ್, ಸೆರಿಯಾನ ಬಟ್ಟೆಲ್

ಕೊಂಡಪೋಪದ್ ಅಖಿಲ ಕೊಡವ ಸಮಾಜತ್‌ರ ಮುಖ್ಯ ಕರ್ತವ್ಯ ಆಕಂಡು.

ಪ್ರಪಂಚತ್‌ರ ಏದೇ ಜನಾಂಗ ಅಯಿಂಡಯಿಂಡ ಜಾತಿ ಧರ್ಮತ್‌ರ ನಿಯಮತ್‌ನ ಪಾಲನೆ ಮಾಡುವಲ್ಲಿ, ಮುಖಂಡಂಗ ಇಟ್ಟ್ ಗೆರೆನ ಕಡ್‌ಪ್‌ಲೆ. ಪ್ರಪಂಚತ್ ಮುಸ್ಲಿಂ ಜನಾಂಗ 15% ಉಂಡ್. ಇಚ್ಚಕ್ ಬಲ್ಯ ಜನಾಂಗತ್ ಒಬ್ಬನೂ ಅಯಿಂಡ ಧರ್ಮ ಗುರು ಇಟ್ಟ ಗೆರೆನ ದಾಟ್‌ನ ದಾಖಲೆ ಇಲ್ಲೆ. ಎಚ್ಚಕೇ ಆಧುನಿಕತೆ ಬರಡ್, ಸಂಪ್ರದಾಯ ಆಡ್, ರೀತಿ-ನೀತಿಲ್ ಅವು ಬದ್‌ಲಾನದಿಲ್ಲೆ. ಅನ್ನನಿಪ್ಪಕ, ವಿದ್ಯಾವಂತಂಗ, ಬುದ್ಧಿವಂತಂಗ, ನಾಗರೀಕಂಗ, ಅಲ್ಲತೆ ಇಡೀ ಪ್ರಪಂಚತ್‌ರ ಜನಳಗುಂಡ್ ಮೆಚ್ಚಿಗೆ ಪಡ್‌ಂದ ಕೊಡವ ಜನಾಂಗ, ಕೊಡವತನ ಬುಡುವಕ್ ತಯಾರುಂಡಾ? ನಂಗಡಲ್ಲಿ ಚೆನ್ನ ಮಟ್ಟಿಗೆ ಬಟ್ಟೆಬೊಳಿರ (ಮಾರ್ಗದರ್ಶನ) ಕೊರತೆ ಕಾಂಬ. ಸರಿಯಾನ ಬಟ್ಟೆಬೊಳಿ ಕ್‌ಟ್ಟ್‌ನಕ ತಾರಾಮಾರ ಅಪ್ಪ ಬಟ್ಟೆ ಕ್‌ಳ್‌ಂಜ ನಂಗಡ ಜನಡ ಜೀವನ ಕ್ರಮತ್‌ನ ನೇರೆ ಬಟ್ಟೆಕ್ ಕೊಂಡ ಪೋಕಲು.

ಏದ್ ಒರ್ ನಿಯಮ ಪಾಲನೆಕ್ ದಂಡ್ ವಿಧಾನ ಉಂಡ್. ಶಿಕ್ಷಾ ವಿಧಾನ ಪಿಂಞ ಪ್ರಶಂಸಾ ವಿಧಾನ. ಇಂಗ್ಲಿಷ್‌ಲ್ -ಪನಿಶ್‌ಮೆಂಟ್ ಎಂಡ್ ಅಪ್ರಿಶಿಯೇಶನ್ ಎಣ್ಣುವ. ಇದ್‌ಂಗ್ ಇಂಞೊರ್ ಪೆದ ಪೋಸಿಟಿವ್ ಅಪ್ರೋಚ್ ಪಿಂಞ ನೆಗೆಟಿವ್ ಅಪ್ರೋಚ್! ಪಂಡ್, ನಂಗಡ ನಡ್‌ಪ್ -ತೊಡ್‌ಪ್‌ರ ವಿಚಾರತ್ ನೆಗೆಟಿವ್ ವಿಧಾನ, ಅಲ್ಲೇಂಗಿ ಶಿಕ್ಷಾವಿಧಾನ, ಪೆರ್ತ್ ಪ್ರಯೋಜನ ಮಾಡಿತ್, ಎಣ್ಣಕ, ನಿಯಮ ಪಾಲನೆಲ್ ದೋಷ ಕಂಡಲ್ಲಿ, ಸಮಾಜ ಮುಖಂಡಂಗ ಶಿಕ್ಷೆ ಪಿಂಞ ದಂಡ ಕೊಡ್‌ಪದಿಂಜತ್. ಉದಾರಣೆಕ್ - ಮಂಗಲತ್‌ರ ಊಟಪತ್ತಿಲ್ ಕುಪ್ಯಚೇಲೆ ಇಡತವು, ಮಂಡೆತುಣಿ, ಅಲ್ಲೇಂಗಿ ಒರ್ ಕೈ ಚೌಕೇಂಗಿ ಇಟ್ಟ್‌ಲೇಂಗಿ ಅನ್ನತಯಿನ ಆ ಪತ್ತಿಂಜ ಒಪ್ಪುವಂತ ಕಟ್ಟ್-ನಿಟ್ಟ್ ಇಂಜತ್. ಅದ್‌ಂಗ್ ಬೊತ್ತಿತ್ ಖಡ್ಡಾಯ ನಿಯಮ ಪಾಲನೆ ಮಾಡುವಯಿಂಜತ್. ಆಚೇಂಗಿ, ಇಂದ್ ಈ ಶಿಕ್ಷಾ ವಿಧಾನ ಕಯ್ಯುಲೆ. ದೇಶತ್‌ರ ಸ್ವಾತಂತ್ರ್ಯ ಎಣ್ಣುವಾನ ನಂಗ ಬೋಂಡಿಯಾಂಗೂ, ಬೋಂಡತಲ್ಲಿಕೂ ಬಳಸಿಯಂಡ್ ಸಂಪ್ರದಾಯಕ್ ಧಕ್ಕೆ ಕೊಂಡ ಬಂದಂಡತ್.

ಆನಗುಂಡ್, ನಂಗಡ ಉಡ್‌ಪ್-ತೊಡ್‌ಪ್‌ರ ವಿಚಾರತ್ ಇಕ್ಕ ಉಳ್ಳ ಒರೇ ಬಟ್ಟೆ - ಅದ್ ಪ್ರಶಂಸಾ ವಿಧಾನ. ಅಲ್ಲೇಂಗಿ ಪೋಸಿಟಿವ್ ಅಪ್ರೋಚ್. ಅದೂ ಕೂಡ ಒರ್ ಲಿಮಿಟೆಡ್ ಬಳಕೆಕ್ ಕೊಡಬರಂಡು. ಈ ಮಿತಿ ಎನ್ನ್‌ಂಗೆಣ್ಣಕ, ಊರ್‌ನಾಡ್‌ಲ್ ನಡ್‌ಪ ನಮ್ಮೆ ನಾಳ್, ಅಂಬಲತ್‌ಲೆಲ್ಲ ಕೊಡವ ಮಾತ್ರ ಅಲ್ಲತೆ, ಬೋರೆ ಜನಾಂಗವೂ ಇಪ್ಪ. ಅನ್ನತಲ್ಲಿ ಈ ಮೆಚ್ಚಿಗೆ ವಿಧಾನ ಸಾಧ್ಯ ಇಲ್ಲೆಲ. ಕೊಡವ ಮಂಗಲ, ಕುಂಞಕ್ ಪೆದ ಇಡುವೊ - ಇನ್ನತಲ್ಲಿ ಮಾತ್ರ ಈ ಮೆಚ್ಚಿಗೆ ವಿಧಾನ ಬಳಸುವಕ್ ಸಾಧ್ಯ ಉಂಡ್. ಇದ್‌ಂಡ ಕ್ರಮ ಇನ್ನನೆ ಪಾಲನೆ ಮಾಡಲು.

1) ಮಂಗಲತ್‌ರ ಮನೆಲ್ ಸೆರಿಯಾನ ಕೊಡವ ಉಡ್‌ಪ್‌ಲ್ ಬಂದ ಆಣ್‌ಕೂ, ಪೊಣ್ಣ್‌ಕೂ ಪ್ರತ್ಯೇಕ ಜಾಗತ್ ಅಳ್‌ತ್‌ವಕುಳ್ಳ ವ್ಯವಸ್ಥೆ ಮಾಡಂಡು. (ವಿ.ಐ.ಪಿ. ಸೀಟ್‌ರನ್ನೆಕೆ)

2) ಇಕ್ಕ ಮಂಗಲ ಎಲ್ಲಾ ಸಮಾಜತ್‌ಲೇ ನಡ್‌ಪಾನಗುಂಡ್, ಬಲ್ಯ ಹಾಲ್ ಇಪ್ಪ. ಈ ತರ ವ್ಯವಸ್ಥೆ ಕಷ್ಟ ಅಲ್ಲ.

3) ಎಲ್ಲಾ ಮಂಗಲ ಮಂಟಪತೂ ಅಲ್ಲಿಯತ ಆಡಳಿತ ಮಂಡಳಿಕಾರ ಒರ್ ಪ್ರತ್ಯೇಕ ಜಾಗತ್ "ಸಂಪ್ರದಾಯ ಉಡ್‌ಪ್‌ಕಾರಕ್ ಮಾತ್ರ" ಎಣ್ಣುವ ಖಾಯಂ ಬೋರ್ಡ್ ತೂಕಿತ್ ಅಲ್ಲಿ ಚೆನ್ನಂಗೇಂಗಿ ಸೀಟ್‌ನ ಕೇರ್ ಕೆಟ್ಟಿತ್ ವಿಂಗಡನೆ ಮಾಡಿತ್ ಬೆಕ್ಕಂಡು. ಅಲ್ಲಿ ಶುದ್ಧ ಕೊಡವ ಉಡ್‌ಪ್ ಇಟ್ಟ್ ಬಂದ ಆಣ್, ಪೊಣ್ಣ್‌ಕ್ ಮಾತ್ರ ಅಳ್‌ಪ ಅವಕಾಶ ಇರಂಡು. ಕೊಡವ ಉಡ್‌ಪ್‌ಕಾರ ಬೋರೆ ಜನಡ ಕೂಡ ಮೇಂಗಲು. ಆಚೇಂಗಿ ಆ ಪ್ರತ್ಯೇಕ ವ್ಯವಸ್ಥೆ ಉಳ್ಳಲ್ಲಿ ಮಾತ್ರ ಸಂಪ್ರದಾಯ ಉಡ್‌ಪ್ ಇಲ್ಲತವು ಬಪ್ಪಕಯ್ಯ.

4) ಆ ಪ್ರತ್ಯೇಕ ವ್ಯವಸ್ಥೆ ಉಳ್ಳಲ್ಲಿ ಒರ್ ಪ್ಲೇಟ್‌ಲ್ ಬಿಸ್ಕೇಟ್ ಕಾಫಿ ಬೆಚ್ಚಿತಿರಂಡು. ಅದ್ ಅಯಿಂಗಕೋರ್ ಪ್ರತ್ಯೇಕ ಗೌರವ.

5) ಲಗ್ನ ಪತ್ರಿಕೆಲ್ ಆಡಿಲೋರ್‌ಗೆರೆ- "ಪದ್ಧತಿರ ಉಡ್‌ಪುಕಾರಕ್ ಪ್ರತ್ಯೇಕ ಏರ್ಪಾಡ್ ಮಾಡಿತ್" (Reserved Seats for Customary dresses arranged)- ಇನ್ನನೆ ಪ್ರಿಂಟ್ ಮಾಡ್‌ಚಿಡಂಡು.

6) ಉಂಬಕಳ್‌ಪಲ್ಲಿಯೂ ದಂಡ್, ಮೂಂದ್ ಬೆಂಚಿನ ಚೆನ್ನ ಮರೆ ಕೆಟ್ಟಿರುವಂಜಿ ತಿರ್‌ಚಿ ಬೆಚ್ಚಿತ್ ಕೊಡವ ಉಡ್‌ಪಕಾರ ಮಾತ್ರ ಅಳ್‌ಪನೆಕೆ ಮಾಡಂಡು.

7) ಪ್ರತ್ಯೇಕ ಕಂಪಾರ್ಟ್‌ಮೆಂಟ್‌ಲ್ ಬೊಳಂಬುವಯಿಂಗಳೂ ಮಂಡೆಕ್ ಚೌಕ ಕೆಟ್ಟಿತ್ ಪದ್ಧತಿ ಪೋಲೆ ಬೊಳಂಬಂಡು.

8) "ಬಫೆ"ಲ್ ಮೇಲೆ ಬುದ್ದಂಡ್ ಬೋಟೆ ನಾಯಿಯಳೆನಕೆ ನುಗ್ಗುವದೂ ಅಯಿಂಗಕ್ ತಪ್ಪುವ.

9) ಆ ಪ್ರತ್ಯೇಕ ವ್ಯವಸ್ಥೆ ಮಾಡ್‌ನಲ್ಲಿ, ಮನೆರ ಕೊರವಕಾರ ಕೊರವಕರತಿ ಬಂದಿತ್ ತಕ್ಕ್ ಪರಚಿಟ್ಟಿತ್ ವಿಶೇಷ ತಕ್ಕಾರ ಮಾಡಂಡು. ಅಕ್ಕ ನಾನ್ ಕುಪ್ಯಚೇಲೆಲ್ ಬಂದದ್ ಸಾರ್ಥಕ ಆಚೇಂದ್ ಬಂದವಂಡ ಗೌರವ ಜಾಸ್ತಿ ಆಪ.

10) ವೀಡಿಯೊ ಕವರೇಜ್ ಉಳ್ಳಲ್ಲಿ ಕೊರವಕಾರ ಕೊರವಕರ್ತಿ ಎಲ್ಲ ಈ ಸಂಪ್ರದಾಯ ಉಡ್‌ಪ್‌ಕಾರಡ ಸಭೆಲ್ ನಿಂದಿತ್ ವೀಡಿಯೋ ಕವರ್ ಮಾಡಂಡು.

11) ಕುಪ್ಯಚೇಲೆಕಾರ ಬೋರೆ ಉಂಬಕ್ಕಳಕಲು, ಬೋಂಡಿಕೆ ಬಫೆಕೂ ನುಗ್ಗಲು. ಆಚೇಂಗಿ ಅಯಿಂಗಡ ಪ್ರತ್ಯೇಕ ವ್ಯವಸ್ಥೆಲ್ ಮಾತ್ರ ಬೋರೆ ಜನ ನುಗ್ಗುವಕಾಗ. ಇದ್ ಅಯಿಂಗಕೋರ್ ವಿ.ಐ.ಪಿ. ಸತ್ಕಾರ ಕ್‌ಟ್ಟ್‌ನೆನೆಕೆ.

12) ಇನ್ನನೆ, ಬೋರ್ಡ್ ಎಳ್‌ದುವ ಜವಾಬ್ದಾರಿನ ಕಲ್ಯಾಣಮಂಟಪಕಾರ ಕೊಡವಡ ಹಿತದೃಷ್ಟಿಲ್ ಮಾಡಂಡು. ಈ ಜವಾಬ್ದಾರಿ ಮಂಗಲ ಕಯಿಪಯಿಂಗಕ್ ಬುಟ್ಟ್‌ರ ನಲ್ಲದಲ್ಲ.

13) ಮಂಗಲ ಕಾಗದತ್ ಮಾತ್ರ ಪ್ರತ್ಯೇಕ ವ್ಯವಸ್ಥೆಂದ್ ಕಾಟಡ್ -"ಭಟ್ಟಿ ಮರ್ಯಾದಿ ಇಲ್ಲೆ" "ಊರ್ ಕೂಡುವದ್ ಇಲ್ಲೆ" ಇನ್ನನೆಲ್ಲ ಇಕ್ಕ ಎಳ್‌ದುವದೇ ಉಂಡಲ್ಲಾ....?

14) ಇನ್ನನೆ ವ್ಯವಸ್ಥೆ ಮಾಡಂಡೂಂದ್ ಅಖಿಲ ಕೊಡವ ಸಮಾಜಕಾರ ಎಲ್ಲಾ ಕಲ್ಯಾಣ ಮಂಟಪಕಾರಕೂ ಓರಂದ್ ವಿನಂತಿ ಅಯೆಕಂಡು.

15) ಸುರೂಲ್ ಪ್ರತಿ ಮಂಟಪತ್ ನಡ್‌ಪ ನಾಲಂಜಿ ಮಂಗಲತ್ ಆಯಾ ಕೊಡವ ಸಮಾಜತ್‌ರ ಮೂಂದ್ ನಾಲ್ ಆಡಳಿತ ಮಂಡಳಿಕಾರಳೇ ಮಿಂಞಕ್ ನಿಂದಿತ್ ವ್ಯವಸ್ಥೆ ಕಾಟಿ ಕೊಡ್‌ಕಂಡು. ಮಂಗಲ ಮನೆರ ಕೊರವಕಾರಂಗೇ ಇದ್‌ನ ಬುಟ್ಟ್‌ರುವಕಯ್ಯ. ನಾಲಂಜಿ ಮಂಗಲ ಆನ. ಪಿಂಞ ಈ ವ್ಯವಸ್ಥೆ ತನ್ನಾಲೆ ಪ್ರಚಾರ ಆಪ.

16) ಇನ್ನನೆ ಸಂಪ್ರದಾಯವಾದಿಯಕ್ ಕಾಟ್‌ನ ಗೌರವತ್‌ರ ವರದಿನ ಸಮಾಜ ಮುಖಂಡಂಗ ಕೊಡವ ಪತ್ರಿಕೆಲ್ ಪ್ರಕಟಪಡ್‌ತಂಡು, ಅಕ್ಕ ಪ್ರಚಾರ ಆಪ.

ಚಾವ್ ಮಾದತ್‌ಲೆಲ್ಲ ಕೊಡವ ಸಂಪ್ರದಾಯ ದಾರೂ ಬುಟ್ಟಿತಿಲ್ಲೆ. ಮಂಗಲತ್ ಮಾತ್ರ ಮಾರ್ಗದರ್ಶನತ್‌ರ ಕೊರತೆಲ್ ಬುಟ್ಟಂಡ್ ಬಂದಿತ್.

ಬಲ್ಯ ಬಲ್ಯ ಮೂಪಂಗ ಸೂಟ್ ಬೂಟ್‌ಲ್ ಬಂದಿತ್ ವಿ.ಐ.ಪಿ. ಸತ್ಕಾರ ಪಡ್‌ಂದ್‌ರುವ. ಅಕ್ಕ ಸಾಧಾರಣ ತೋಯಂಗ ಕುಪ್ಯಚೇಲೆಲ್ ಬಂದವನ ತಕ್ಕಾರ ಮಾಡುವವನೇ ಇಪ್ಪ್‌ಲೆ. ಅದ್‌ಂಗ್ ಮಡ್‌ಚಿತೂ ಸಂಪ್ರದಾಯ ಉಡ್‌ಪ್‌ನ ಇಡುವಕ್ ಮಡಿಪವು ಪೆರ್ತ್ ಉಂಡ್. ಆನಗುಂಡ್, ಸಂಪ್ರದಾಯ ಉಡ್‌ಪ್‌ಕ್ ಗೌರವ ಕೊಡ್‌ಪಂಥ ವಿಶೇಷ ವ್ಯವಸ್ಥೆ ಮಾಡುವದೊಂದೇ ಸೆರಿಯಾನ ಬಟ್ಟೆ.

ನಾಕ್ ಕಾಂಬನೆಕೆ ನಂಗಡ ಪೊರ್‌ಪಾಡ್‌ನ ಕಾತ್ ರಕ್ಷಣೆ ಮಾಡುವಕ್ ಇದ್ ಒರೇ ವಿಧಾನ ಅಲ್ಲತೆ, ಏದೇ ವಿಧತ್‌ರ ಬಲತ್ಕಾರ ಏರುವದ್ ಇಂದೇತ ಪರಿಸ್ಥಿತಿಲ್ ನಲ್ಲ ಫಲಿತಾಂಶ ಕ್‌ಟ್ಟುವಕಿಲ್ಲೆ.

❖ ❖ ❖

# ಕೊಡವ ಸಂಸ್ಕೃತಿ ಬೊಳಚೆಕ್ ಪೊಣ್ಣಾಳಡ ಪಾತ್ರ

ಕೊಡವ ಸಂಸ್ಕೃತಿ ಜಗತ್ತ್‌ಲೇ ಕೇಳಿ ಪೋನದ್. 18ನೇ ಶತಮಾನತ್‌ಂಜಿ ಇಪ್ಪರ ಭಾರತಕ್ ಬಂದ ಪ್ರಪಂಚತ್‌ರ ಬೋರೆ ಬೋರೆ ಜನಾಂಗಕಾರ ಕೊಡವಡ ಆಚಾರ-ವಿಚಾರ, ತಕ್ಕ್‌ಬಾಕ್, ಬೆಂದು ತಕ್ಕಾರ, ಸತ್ಯನೀತಿ ಧರ್ಮತ್‌ರ ಜೀವನ, ವಿಧಾನ, ಸಮಾಜತ್‌ರ ಹಿಡಕಟ್ಟ್‌ಲ್ ಒಂದಾಯಿ ಬಾವ ಕ್ರಮತ್‌ನೆಲ್ಲ ನೋಟಿತ್ "ಇನ್ನತೋರ್ ಮೇಲ್ಮಟ್ಟತ್‌ರ ಸುಸಂಸ್ಕೃತ ಜನಾಂಗ ಬೋರೆ ಎಲ್ಲಿಯೂ ಕಾಂಬಕ್ ಕ್‌ಟ್ಟುಲೆ"ಂದ್ ಎಳ್‌ದಿ ಬೆಚ್ಚ ದಾಖಲೆ ಇಂದೇಕೂ ಉಂಡ್.

ಕೊಡವ ಸಂಸ್ಕೃತಿನ ಪ್ರತಿಬಿಂಬ್‌ಚಿಡುವ ಮೂಂದ್ ಅಂಶ ಎಣ್ಣ್‌ನಕ - ಕೊಡವ ಪೆದ, ಕೊಡವ ತಕ್ಕ್ ಫಿಂಞ ಕೊಡವ ಪೊರಪಾಡ್. ಕೊಡವ ತಂಗಡ ಮನೆ ಪೆದತ್‌ನ ಮಾತುವಕ್ ಕಯ್ಯತಾನ ಗುಂಡ್ ಅನ್ನನೇ ಬೆಚ್ಚಂಡಿತ್. ಆಚೇಂಗಿ ಕೊಡವ ಆಳ್ ಪೆದ ಇಂದ್ ಕ್ರಿಸ್ತಾನಿ ಪೆದ, ಮುಸಲ್ಮಾನ ಪೆದ ಅಲ್ಲತೆ ಇಕ್ಕಿಕ್ಕ ಟಿಬೇಟಿ ಪೆದ ಇಟ್ಟವಲ್ಲಿಕ್ ಎತ್ತಿಪೋಯಿತ್. ಅನ್ನನೆ ಕೊಡವ ಮಕ್ಕಕ್ ಕೊಡವ ತಕ್ಕ್ ಪಡ್‌ಪ್‌ಚಿಡುವದೇ ಇಞಣ ಕೇಡ್‌ಂದ್ ಗೇನ ಮಾಡಿತ್, ತಾಂಡ ಊರ್‌ನಾಡ್‌ಕಾಡ್, ಬೆಂದು ಚಾಚೆರಲ್ಲಿಕಾಡ್ ಚೆರಿಯ ಮಕ್ಕಳ ಅಯಿಕತೆ ಇಂಗ್ಲಿಷ್ ಸಮಾಜತ್‌ರ ಸಂಪರ್ಕತ್‌ಲೇ ತಾಂಡ ಮಕ್ಕ ಬೊಳೆಯಂಡು ಎಣ್ಣುವ ದುರಭಿಮಾನ ಕೊಡವಡಲ್ಲಿ ಬಂದದೋರ್ ದುರಂತ. ಅನ್ನನೆ ಕೊಡವ ಪೊರಪಾಡೂ ಮರೆಯಾಯಂಡುಂಡ್.

ಎಕ್ಕ ನಂಗಡ ಜನಾಂಗತ್‌ರ ಮಕ್ಕ ನಂಗಡ ಜನಡ ಕೂಡ ಕೂಡುವ ಅವಕಾಶ ತಪ್ಪಿ ಪೋಪ ಅಕ್ಕ ಕೊಡವ ಸಂಸ್ಕೃತಿ ನಾಶ ಆಪ. ಈ ತರ ಸಂಸ್ಕೃತಿ ನಾಶ ಮಾಡಿಯವನ್ನತ ಜನ ಪ್ರಪಂಚತ್‌ಲ್ ಕೊಡವಳಲ್ಲತೆ ಬೋರೆ ಏದ್ ಜನಾಂಗತ್‌ಲೂ ಕಾಂಬ್‌ಲೆ. ಇದ್ ಕೊಡವಡ ಅಭಿಮಾನ ಶೂನ್ಯತೆ.

ಈ ಸಂಸ್ಕೃತಿ ಪಥನ ಆಪಾನ ಇನ್ನನೆ ಬುಟ್ಟ್‌ಟಿಕ ಚೆನ್ನಂಗೇ ಕಾಲತ್‌ಲ್ ಈ ಚೆರಿಯ ಜನಾಂಗತ್‌ರ ಪೆದವೇ ಇಲ್ಲತಾಯಿ ಪೋಪ.

ಕೊಡವ ಸಂಸ್ಕೃತಿನ ಕಾತ್ ರಕ್ಷಣೆ ಮಾಡುವಲ್ಲಿ ಪೊಮ್ಮಕ್ಕಡ ಪಾತ್ರ ದುಂಬಾ ಪ್ರಧಾನವಾನದ್. ಏದ್ ಓರ್ ಸಾಮಾಜಿಕ ಕ್ರಾಂತಿಯಾಡ್ ಅದ್ ಪೊಣ್ಣಾಳಗುಂಡ್ ಬೆರಿಯ ಬೆರಿಯ ಕಾರ್ಯ ರೂಪಕ್ ಬಪ್ಪಾಂದೆಣ್ಣುವಾಂಗ್ ಪೆರ್ತ್ ಉದಾಹರಣೆ ಉಂಡ್. ನಂಗಡ ಪಂಡೇತ ಸಂಸ್ಕೃತಿ ಪರಂಪರೆನ ಪೊಣ್ಣಾಳ್ ದಂಡ್ ತರತ್‌ಲ್ ಕಾತ್ ರಕ್ಷಣೆ

ಮಾಡಲು. ಒಂದ್ ತಾಂಡ ವೈಯಕ್ತಿಕ ಸಾಮರ್ಥ್ಯತ್‌ಲ್ ದಂಡನೆ ಪೊಣ್ಣಾಳಡ ಸಂಘಟನೆರ ಮೂಲಕ.

ಇಂದ್ ಪ್ರತಿ ಊರ್‌ಲ್ ಕೊಡವ ಸಮಾಜ ಸ್ಥಾಪನೆ ಆಯಿತ್. ಪ್ರತಿ ಕೊಡವ ಸಮಾಜತ್‌ರ ಆಶ್ರಯತ್‌ಲ್ ಓರಂದ್ ಪೊಮ್ಮಕ್ಕಡ ಸಂಘಟನೆ ಅವಶ್ಯ ಉಂಡ್. ಈ ಪೊಣ್ಣಾಳಡ ಸಂಘಟನೆರ ಉದ್ದೇಶ ನಂಗಡ ಮರೆಯಾಯಿಯಂಡುಳ್ಳ ಸಂಸ್ಕೃತಿನ ಕಾಪಾಡುವದಾಂಡು. ಏದೇ ಜನಾಂಗ ಆಕಡ್, ಅಯಿಂಡ ಧಾರ್ಮಿಕ ಪರಂಪರೆನ ಬುಟ್ಟಕ ಆ ಜನಾಂಗ ಬೇರಿಲ್ಲತೆ ಮರ ಆಯಿಪೋಪ. ಆನಗುಂಡ್ ಕೊಡವತಿಯ ತಂಗಡ ಮಕ್ಕಕ್ ಕೊಡವಡ ಧರ್ಮ ಎಣ್ಣ್‌ನಕ, ಗುರು ಕಾರಣಂಡ ಭಕ್ತಿ, ಕಾರಣಂಗ್ ಕೊಡ್‌ಪ. ಊರ್‌ರ ನಮ್ಮೆನಾಳ್, ಇಂತಾಂಗ್ ಕೂಟಿಯ ಪೋಯಿತ್ ಮಕ್ಕಕ್ ಸ್ವಜಾತಿ ಪ್ರೇಮ ಪುಟ್ಟುವನ್ನಕೆ ಮಾಡಂಡಿಯದ್ ಇಂದೇತ್‌ರ ಅವಶ್ಯಕತೆ.

ಕೊಡವ ಪೊಣ್ಣಾಳ್ ಸಂಸ್ಕೃತಿ ಬೊಳಚೆಕ್ ಎನ್ನೆಲ್ಲ ಮಾಡಂಡು? (1) ಪೊಣ್ಣಾಳ ಪ್ರತಿ ಊರ್‌ಲ್ ಕೊಡವೋದ್ಧಾರ ಸಂಘ ಮಾಡಿಯವಂಡು. (2) ಕೊಡವಡ ನಮ್ಮೆನಾಳ್, ಮಂಗಲ ಮುಂಜಿಲೆಲ್ಲ ಕೊಡವಡ ಸಾಂಪ್ರದಾಯಿಕ ಪುಟ್ಟ್‌ಕರಿಕೇ ಪ್ರಾಧಾನ್ಯತೆ ಕೊಡ್‌ಪಕ್ ಪೊಣ್ಣಾಳಡ ಮನಸ್‌ನ ತಿರ್‌ಕಂಡು. (3) ಪೆತ್ತವಳ ನೋಟುವಕ್ ಏದ್ ಮನೆ ಕೇಪೋಡ್ ಅಲ್ಲಿ ಕುಂಞಿಕ್ ಇಕ್ಕತಜನಳೆನ್ನಕೆ ಪಿರಾಂದ್ ಪೆದ ಇಟ್ಟ್‌ರತಿ. ಕೊಡವ ಪೆದೇ ಇಡೀಂದ್ ಮನಸ್ ತಿರ್‌ಕಂಡು. ಕೆಲವು ಹೇಸಿಕೆ ಪೆದತ್‌ರ ಕೆಟ್ಟ ಪರಿಣಾಮತ್‌ನ ಎಣ್ಣಂಡು. (4) ಕುಂಞಿಕ್ ಪೆದ ಇಡುವ ಸಮಾರಂಭತ್‌ಲ್ ಕೊಡವ ಪೆದೇ ಎಲ್ಲಾರು ಇಡಂಡುಂದ್ ಚೆರಿಯ ಬೋರ್ಡ್ ತೂಕಂಡು. ಅನ್ನನೇ ಆ ಕುಂಞಿ ಪೆದ ಎಂತದ್ ಎಲ್ಲಾಕು ಗೊತ್ತಾಪನ್ನಕೆ ಜೋರ್‌ಲ್ ಎಣ್ಣಂಡು. (5) ತಾಂಡ ಮಕ್ಕ ಮರಿ, ಸಾಲ್ ಸಂತಾನಗಾರಳೆಲ್ಲ ಕೊಡವ ಪೊರಪಾಡ್‌ಲೇ ಪೋಪನ್ನಕೆ ಮನೆರ ಯಜಮಾನಿ ನೋಟಿಯವಂಡು. (6) ಕೊಡವ ಸಾಮಾಜಿಕ ಸಮಾರಂಭತ್‌ಲ್ ಇಂಗ್ಲಿಷ್ ಕಳಿ ಕಳಿಕತೆ, ಇಂಗ್ಲಿಷ್ ಪರೆಯತಿ. ಎಲ್ಲಾರೂ ಕೊಡವ ತಕ್ಕ್‌ಲೇ ಪರೆಯನಾಂದ್ ಇಂಗ್ಲಿಷ್ ಪಿರಾಂದಿಯಕ್ ಗುಟ್ಟ್‌ಲ್ ಎಣ್ಣಂಡು. (7) ಮನೆಕ್ ಬಂದ ಪೆರಿಯ ಕೊಡವಂಡ ಕಾಲ್ ಪುಡಿಪಕ್ ಪೊಣ್ಣಾಳ್ ಕಡ್ಡಾಯ ಪಡ್‌ಪ್‌ಚಿರಂಡು. (8) ಕೊಡವ ಮಹಾ ಪುರುಷಂಗಡ ಕಥೆನ ಚೆರಿಯ ಮಕ್ಕಕ್ ಎಕ್ಕೋಲು ಎಣ್ಣಿ ಕೊಡ್‌ಕಂಡು. (9) ಕೊಡವಡ ಬಾಳೊಪಾಟ್‌ರ ಕೇಸೆಟ್ಸ್‌ನ ಕೊಡವಡ ಮನೆ ಮನೆಕ್ ಎತ್ತ್‌ಚಿಟ್ಟಿತ್, ಕೊಡವ ಪಾಟ್‌ನ ಮಕ್ಕ ಕೇಟಿತ್ ಅದ್‌ಂಡ ಚೋದರಿವನ್ನಕೆ ಮಾಡಂಡು. (10) ಪಂಡೇತ ಕೊಡವಡ ಸಾಧನೆ ಸಾಮರ್ಥ್ಯ - ಇಕ್ಕತ್‌ರ ಕೊಡಗ್‌ರ ಪಿಂಞ ಕೊಡವ ಸಮಸ್ಯೆ ಎಂತಂದ್ ಪ್ರತಿಯೋರ್ ಅವ್ವ ತಾಂಡ ಕುಂಞಿಕ್ ಎಣ್ಣಿ ಕೊಡಕಂಡು. ಅಕ್ಕ ಆ ಕುಂಞಿಕ್ ನಂಗಡ ಪರಂಪರೆಲ್ ಅಭಿಮಾನ ಪುಟ್ಟುವ. (11) ಕೊಡವ ಸಾಹಿತ್ಯ ಪಿಂಞ ಸಂಸ್ಕೃತಿ ಬೋರೆ ಬೋರೆ ಅಲ್ಲ. ಅದ್‌ನಗುಂಡ್ ಮಕ್ಕಕ್

ಕೊಡವ ಸಾಹಿತ್ಯ ಸಂಗ್ರಹ ಮಾಡಿ ಕೊಡ್‌ಪದ್ ಅವ್ವಂಗಡ ಆದ್ಯ ಕರ್ತವ್ಯ ಆಂಡು. (12) ಕೊಡವ ಮಕ್ಕಳ ಕೊಡಗ್‌ರ ಮೂಲೆ ಮುಟ್ಟ್‌ಲ್ ನಡಪಂತ ನಮ್ಮ ನಾಳ್‌ಕ್ ಅಯಿಪದ್ ಅವ್ವಂಗಡ ಕರ್ತವ್ಯ ಆಂಡು. ಅನ್ನನೆ ಅಯಿಪಾನಗುಂಡ್ ಮಕ್ಕಡ ಬುದ್ಧಿ ಪಾಳಾಪಾಂದೆಣ್ಣುವ ಅವ್ವಂಗಕ್ ಮಕ್ಕಡ ಮನೋವಿಜ್ಞಾನ ಗೊತ್ತೇ ಇಲ್ಲೇಂದ್ ಒತ್ತವಂಡು. (13) ಎಲ್ಲೆಲ್ಲಿ ಸಂದರ್ಭ ಉಂಡೊ ಅಲ್ಲಿ ಎಲ್ಲ ಕಾಲತ್‌ಲ್ ಒಮ್ಮೇಂಗಿ ತಾಂಡ ಮಕ್ಕಳ ಕೂಡ್ ಕುಟುಂಬತ್ (Joint family)ಲುಳ್ಳ ಬೆಂದ್‌ಕಡಲ್ಲಿ ಬುಡಂಡು. ಇದ್ ಅವ್ವಂಗಡ ಕರ್ತವ್ಯ. (14) ಪೇಟೆ ಪಟ್ಟಣತ್‌ಲೇ ಇರಡ್, ನಾಡ್‌ಲೇ ಇರಡ್ ಮನೆಕ್ ಓರ್ ಕೊಡವ ಬಪ್ಪಕ ಚೆಂಬುಲ್ ನೀರ್ ಬೆಪ್ಪ ಪದ್ಧತಿ ಕೊಡವತಿಯ ಸುರುಮಾಡಂಡು.  ಎನ್ನ್‌ಂಗ್‌ಂದೆಣ್ಣ್‌ನಕ ತಂಗಡ ಮಕ್ಕಕ್ ಆ ಪದ್ಧತಿರ ಪ್ರತ್ಯಕ್ಷ ಅನುಭವ ಕೊಡ್‌ಪಕ್. (15) ಇಂದ್ ಮನೆಕ್ ಬಂದಂವನ ಬಂದಿರಾಂದ್ ಕೇಪದಾಡ್, ಪೋಪಕ ನಾ ಪೋಯಿತ್ ಬಪ್ಪೀಂದ್ ಎಣ್ಣುವದಾಡ್ ಕಣ್ಣ್‌ಕೇ ಕಾಂಬ್‌ಲೆ. ಬಪ್ಪಕ 'ಹಾಯ್‌'ಂದೂ ಪೋಪಕ 'ಬಾಯ್‌'ಂದೂ ಆಯಿ ಪೋಯಿತ್. ಇದ್‌ನೆಲ್ಲ ಪಡ್‌ಪ್‌ಚಿರುವದ್ ಪೊಣ್ಣಾಳಡ ಕರ್ತವ್ಯ. (16) ಮಂಗಲತ್‌ಲ್ ನೀರೆಡ್‌ಪಲ್ಲಿ ಇಕ್ಕ ನಡಂದಂಡುಳ್ಳ ಪಿರಾದ್ ಕಳಿನ ನಿಪ್ಪ್‌ಚಿರುವಕ್ ಪೊಣ್ಣಾಳ್‌ನಗುಂಡ್ ಸಾಧ್ಯ ಉಂಡ್. ಅಲ್ಲಿ ಆಣಾಳ್ ಎಡೆಕ್‌ಳ್‌ಂಜಕ ಜಗಳ ಬಕ್ಕಣ ಆಪ.

ಅರೆಗಂಟೆ ಮೂಡಿನ ತಡ್‌ತಂಡ್ ಆಡಿ ತಾನ್ ಪಿಂಞ ಸುತ್ತು ಮುತ್ತು ಬೋರೆ ಪೊಣ್ಣಾಳ್ ಮೂಡಿಯಳ ಜಾಗ ಕಾಲಿ ಮಾಡ್‌ಚಿರಂಡು. ಪೊಣ್ಣಾಳ್ ಮೂಡಿಯ ನೋಟ್‌ಲೆಂಗಿ ಈ ಹೆಂಡಕುಡ್‌ಕ ಆಟ್‌ಕಾರಕ್ ಆಟ್ ಬಪ್ಪದುಂಡ? ಇದ್‌ನೆಲ್ಲ ಪೊಣ್ಣಾಳಡ ಸಂಘಟನೆಲ್ ಮಾಡಂಡು. ಇಕ್ಕತ ಬಫೆ ಊಟ ನಿಪ್ಪ್‌ಚಿಟ್ಟಿತ್ ಪತ್ತಿಲ್ ಅಳ್‌ಪ್‌ಚಿಟ್ಟಿತ್ ಬಳಂಬುವ ಏರ್ಪಾಡ್‌ನ ಕೊಂಡ ಬಪ್ಪಕ್ ಪೊಣ್ಣಾಳ್ ಮಿಂಞಕ್‌ಳಿಯಂಡು.

ಇನ್ನನೆ ನಾಶತ್‌ರ ಬಟ್ಟೆ ಪುಡ್‌ಚ ಕೊಡವ ಸಂಸ್ಕೃತಿನ ಬೊಳತುವಕ್ ಪೊಣ್ಣಾಳ್ ಮಿಂಞಕ್‌ಳಿಯಂಡು. ಕೊಡವಡ ನೇರಾನ ಮೂಂದ್ ಪೂಜೆ, ಕೊಡವ ಪೆದ ಇಟ್ಟವೊ, ಕೊಡವ ತಕ್ಕೇ ಪರೆವೊ ಪಿಂಞ ಕೊಡವ ಪೊರಪಾಡ್‌ಲಿಪ್ಪೊ. ಇದ್‌ಂಡ ಪೂಜಾರಿಯ ಕೊಡವತಿಯಳಾನಕ ನಂಗಡ ಸಂಸ್ಕೃತಿ ಮುಂಡೆನೇತಲು.

❖ ❖ ❖

# ಕಾರ್ಯಪ್ಪಂಜ್ಜಂಡ ಮನೆಲ್...

1980ನೇ ಇಸವಿಲ್ ನಡ್‌ಂದದ್. ಡಾ| ಐ.ಮಾ. ಮುತ್ತಣ್ಣ ನಾಕ್ ಕಾಗದ ಎಳ್‌ದಿತ್ ಕಾರ್ಯಪ್ಪಜ್ಜನ ಕಂಡಿತ್ ಓರ್ ಕಾರ್ಬಾರ್ ತ್ ತಂಡ್ ಬಪ್ಪಕ್ ಕೆಲಸ ವಹಿಸ್‌ಚಿ. ಅಕ್ಕಣೆ ನಾಕ್ ಅಜ್ಜ ದಂಡ್ ಕಾಗದ ಎಳ್‌ದಿತಿಂಜತ್. ಆ ದಂಡ್ ಕಾಗದತ್‌ನೇ "ಪಾಸ್‌ಪೋರ್ಟ್- ವೀಸಾ"ಂದೆಲ್ಲ ಗೇನ ಮಾಡಿಯಂಡ್, 5-10-1980ಲ್ ಮಡಿಕೇರಿ "ರೋಷನಾರ"ಕ್ ಎತ್ತ್‌ನ. ಓರ್ ತಮಿಳ್‌ಕಾರ ಪೊರ್‌ಮೆ ಇಂಜತ್. ಓರ್ ಸ್ಲೇಟ್ ಪಿಂಞ ಕಡ್ಡಿ ತಾತ್. ಆ ಸ್ಲೇಟ್‌ಲ್ ನಾಡ ಅಡ್ರೆಸ್ ಎಳ್‌ದ್‌ಚಿಟ್ಟಿತ್ ಒಳ್‌ಕ್ ಕೊಂಡ ಪೋಚಿ. ಕೂಡೆನ್ನೆ ಅಜ್ಜ ಪೊರ್‌ಮೆ ಬಾತ್. ಮೂಂದ್ ಕುರಿ ಕಾಲ್ ಪುಡ್‌ಚ. ಪರಿಚಯ ಮಾಡುವಕ್ ಅಯಿಂಗ ನಾಕ್ ಎಳ್‌ದ್‌ನ ಕಾಗದತ್‌ನೇ ಕಾಟ್‌ನ.

ಅಜ್ಜ ನನ್ನೊಮ್ಮ ಕಣ್ಣ್ ಮೊಟ್ಟ್‌ಚಿಟ್ಟಂಡ್ ನೋಟ್‌ಚಿ. ಆ ನೋಟಲ್‌ಕೇ ನಾಡ ಅಷ್ಟಗಂಧ ಅಳ್‌ನನ್ನಕೆ ಆಚಿ. "ಇದೆನ್ನ್ ನಾಡ ಮನೆ ಹೋಟೇಲ್‌ಂದ್ ಗೇನ ಮಾಡಿತುಳ್ಳಿಯಾ...? ಇಚ್ಚ ನೇರಕ್ ಬಪ್ಪಕ್ ನೀಕ್ ಪರ್ಮಿಷನ್ ದಾರ್ ತಂದಿಯೆ...? ಇನ್ನನೆ ನನ್ನ ಬಾಯಿ ಎಡ್‌ಪಕ್ ಬುಡತೆ ಜೋರ್ ಮಾಡ್‌ಚಿ.

ನಾಕ್ ಪೊಡಿಯೂ ಆಚಿ. ಚೆಡಿಯೂ ಬಾತ್. ಬಯ್ಯಕೇ ಪೋಯಿರಡಾಂದ್ ಗೇನ ಮಾಡ್‌ನ. ಅದ್‌ಂಗೂ ಧೈರ್ಯ ಬಂದ್‌ಲೆ. ಕಯ್ಯುವಚ್ಚಕ್ ಬಜ್ಜ್‌ರುವಂಜಿ "ಒಳ್‌ಕ್ ಬಾ"ಂದ್ ಕೂಟಿಯಂಡ್ ಪೋಯಿತ್ ಅಳ್‌ಪ್‌ಚಿಟ್ಟಿತ್. "ಟೀ ಕುಡಿಪಿಯಾ, ಕಾಫಿ ಕುಡಿಪಿಯಾ"ಂದ್ ಕೇಟತ್. ನೀಡ ಬೈಗಳೇ ಮದಿ, ಇಂಞೊಂದು ಬೋಂಡಾಂದ್ ಮನಸ್ಸ್‌ಲೇ ಗೊಣಗಿಯಂಡ್, "ಟೀ ಕುಡಿಪಿ"ಂದೆಣ್ಣ್‌ನ.

ಅರೆಬೊಡಿಯಾನ ನರಿನನ್ನಕೆ ಕಳ್‌ಚ ಅಜ್ಜ, ಸಾಧು ಪಯ್ಯ್‌ರನ್ನೆಕೆ ಬದ್‌ಲಾಯಿರ್‌ತ್. "ನೋಟಪ್ಪ... ನಾಡಲ್ಲಿಕ್ ಬೋರೆ ಬೋರೆ ಜನ ಬಂದಂಡಿಪ್ಪ. ಇಂದ್ ಬಪ್ಪಿಂದೆಣ್ಣ್‌ನಯಿಂಗ ಬಪ್ಪ್‌ಲೇಂದ್ ಇಕ್ಕ ಟೆಲಿಗ್ರಾಂ ಬಾತ್. ಅಯಿಂಗ ಬಂದಿತಿಂಜಕ.... ನೀನ್ ಪೊರ್‌ಮೆ ನಿಪ್ಪಕಿಂಜಿಯಾ? ನೀಡ ನೇರೋ ಪಾಳ್. ಮನೆರ ಪಾರಗಾರನೆನ್ನಕೆ ಪೊರಮೆ ನಿಂದಕ ನೀಡ ಬೆಲೆಯೂ ಪಾಳ್. ಇಂಟರ್‌ವ್ಯೂ ತಂದ್‌ಲೇಂದ್ ನನ್ನ ಬಜ್ಜಂಡೂ ಪೋಪಕಿಂಜಿಯ. ಆನಗುಂಡ್, ಮಿಂಞಲೇ ಕಾಗದ ಎಳ್‌ದಿತ್ ಎಚ್ಚ ನೇರಕ್ ಕಾಂಗಲೂಂದ್ ತೀರ್ಮಾನ ಮಾಡಿಯವಂಡು" ಎಣ್ಣ್‌ಚಿ. ಪೆರ್ತ್ ಆತ್ಮೀಯತೆಲ್ ಅರೆಗಂಟೆ ತಕ್ಕ್ ಪರ್‌ಂದತ್.

ಆರ್ ತಿಂಗಕ್ ಬಯ್ಯ ಆ ಮಾದ್‌ರಿ ಜೋರ್ ಮಾಡ್‌ನ ಜನರಲ್, ಇದೇ ದೇವತಾ ಸ್ವರೂಪಿ ಮನ್‌ಷ್ಯನಾಂದ್ ನಾಕೇ ನಂಬುವಕ್ ಕಯಿಂಜ್‌ಲೆ. ಪೊರಮೆ ಪಟ್ಟಿಕ್ ನನ್ನ ಕೂಟೆಯ ಬಂದಿತ್, ದೂರತ್‌ಲ್ ಕಾಂಬ ಕಾಡ್‌ನ ಕಾಟಿತ್, "ನೋಟ್ ಆ ಕುಂದ್‌ರ ಬರಿಲೆಲ್ಲ ಬಲ್ಯ ಕಾಡ್ ಕಾಂಬಲ್ಲಾ, ಅದ್‌ನೆಲ್ಲ ನೋಟುವಕ್ ನಾನ್ ಪೋಯೆ. ದೂರಕ್ ಕಾಡ್‌ರ ಮಾದ್‌ರಿ ಕಾಂಬ. ಅದ್‌ಂಡ ಒಳ್‌ಲೆಲ್ಲ ಬಾಣೆ ಮಾಡಿಟಿತ್. ಅದಲ್ಲೆ ಕೇರಳಕಾರಡ ಸ್ವಾಧೀನ ಉಂಡ್. ಕೊಡವ ಎಲ್ಲ ಮಾರಿತ್ ಪೋಯಿಟಿತ್. ನೀನ್ ಅನ್ನನೆ ಮಾಡಿರ್‌ತೆ", ಎಣ್ಣ್‌ಚಿ.

ಮೂಂದ್ ಕುರಿ ಕಾಲ್ ಪುಡ್‌ಚಿತ್, ಹಿಮಾಲಯಕ್ ಸೆರಿಯಾನ ವ್ಯಕ್ತಿತ್ವವುಳ್ಳ ಅಜ್ಜಂಡ ಶಿಸ್ತ್‌ನೋ, ಗುಣತ್‌ನೋ ಗೇನ ಮಾಡಿಯಂಡ್ ಪೊರ್‌ಟ!

❖ ❖ ❖

# ನಾನ್ ಕೊಡವತಿ ಮೂಡಿ,
# ಕೊಡವ ಬೈಂಬನೇ ಮಂಗಲಾಪಿ....

ಪೊಣ್ಣ್ ನಂದೇಂಗಿ ಆಣ್ ನಂದ್, ಮನ ನಂದೇಂಗೀ ಮನೆ ನಂದ್, ಲೋಕತ್ ಗೆದ್ದ ಬಾಲಂಗಡ ಬೆಂಬರಿಲೋರ್ ಪೊಣ್ಣ್‌ರ ನೈಪು ಇಂಜಿತೇ ಇರೊಂಡು!

ನಾಡ ಪೆದ ಪೂವಮ್ಮ. ನಾಡ ಮನಸ್ಸೂ ಪೂವ್‌ರನ್ನಕೆ ಪವಿತ್ರ ಪಿಞ್ಞ ತೇನ್ ದುಂಬಿತುಂಡ್! ನಾನೋರ್ ಕೊಡವತಿ. ಕೊಡಗ್‌ರ, ಕೊಡವಡ ನಲ್ಲಾಮೆಕಾಯಿತೇ ನಾಕ್ ದೇವ ಈ ಪೊಮ್ಮಾಲೆ ಕೊಡಗ್‌ಲ್ ಜನ್‌ಮ ತಂದಿಯೆ. ಅದಲ್ಲೇಂಗಿ ಮೂಡ್‌ಸೀಮೆಲ್ ಬಡವತಿಯೋ, ತಮಿಳ್‌ನಾಡ್‌ಲ್ ಕೊಂಗತಿಯೋ ಆಯಿತ್ ಪುಟ್ಟ್‌ತಿಪ್ಪಕಿಂಜ. ಸೃಷ್ಟಿಕರ್ತ ಪರಮಾತ್ಮ ಗೊತ್ತ್‌ಗುರಿ ಇಲ್ಲತೆ ಜೀವರಾಶಿನ ಸೃಷ್ಟಿ ಮಾಡಿತಿಲ್ಲೆ. ಎಲ್ಲಾ ಸೃಷ್ಟಿಕೂ ಓರ್ ಅರ್ಥ, ಗುರಿ ಬೆಚ್ಚಿತ್ ಸೃಷ್ಟಿ ಕಾರ್ಯ ಮಾಡಿತ್. ಅನ್ನನೆ ಇಪ್ಪಕ ಪ್ರಕೃತಿರ ನೇಮತ್ ಬಾಳೊಂಡು. ಇಲ್ಲೇಂಗಿ ವಿರೋಧ ಆಪ.

ಪೂಞಿ ನಾಯಿ ವಡಿಯ ಪೊಣ್ಣ್ ಆಪಾ....? ಕಾಕೆ ಪದ್ದ್‌ಕೂ ತಂದ್ ಬೆಂದೂರ್ಥ ಆಪಾ? ಕೋಡಂಗೂ ಕೊರಿಯಂಗೂ ಮಂಗಲಾನಕ ಎನ್ನನೆ? ಕೊಡವತಿ ಕೊಡಗ್‌ಲ್ ಪುಟ್ಟಿಯೆ ಕಂಡವನೆ ಮಂಗಲಾಪಕಾಯಿತ್. ಪಾಲ್ ನೀರ್‌ಕ್‌ಂಜ ಮೇಲ್. ಆಚೇಂಗಿ ಮೀನ್ ಪಾಲ್‌ಲ್ ಬದ್‌ಕುವಾ? ಅದ್‌ಂಗ್ ನೀರೆ ಬೋಂಡುವಲ್ಲಾ? ಮಂಗಲಾಯಿತ್ ಕೊಡವ ಸಂತತಿ ಬೊಳ್‌ತಿತ್. ಕೊಡವಳ ಉದ್ಧಾರ ಮಾಡೊಂಡು ಎಣ್ಣುವ ವಿಶಾಲ ಅರ್ಥತ್‌ರ ಮೀದ, ನಾನ್ ಕೊಡವನ ಮಂಗಲಾಪಕ್ ನಿರ್ಧಾರ ಮಾಡ್‌ನಾಂಗ್ ಆಳವಾನ ಗುರಿ ಉದ್ದೇಶ ಉಂಡ್.

ಕೊಡವತಿ ಮೂಡಿಯ, ಕೊರ್‌ಮನೋ, ಕೊಂಗನೋ ಕೆಟ್ಟಿಯಂಡ್ ಓಡಿ ಪೋನಕ ಕೊಡವ ಬಂಬಂಗಕ್ ಪೊಣ್ಣಾಂಡುವಲ್ಲಾ... ಅಯಂಗ ಪಾಳ್ ಪರದೇಶಿಯಳ ಕೂಟಿಯ ಬಂದಿತ್ ಸಂಸಾರ ಮಾಡುವ. ಈ ಮಿಶ್ರತಳಿನಗುಂಡ್ ಯುಗಯುಗತ್‌ಂಜ ಪವಿತ್ರವಾಯಿತ್ ಬಾಳಿ ಬದ್‌ಕ್‌ನ ವೀರ ಧೀರಂಗಡ ಸಂತಾನ ಪುಳು ಮುಯಿತ ಮಾಂಗೆರನ್ನಕೆ ಆಯಿಪೋಯಿತ್.

ಇಂತಾನೆಲ್ಲಾ ತಡ್‌ತಿತ್ ಕೊಡವಳ ಕಾಪಾಡಿಯವ. ಓರ್ ಆದರ್ಶ ಜನಾಂಗ ಆಯಿತ್ ಕಾಪಾಡಿಯವ ಉದ್ದೇಶಕಾಯಿತ್ ನಾನ್ ಕೊಡವನೇ ಮಂಗಲಾಪ. ನಾನೋರ್ ಕೊಡವಂಡ ಪೊಣ್ಣಾಂಡು. ನಾನೋರ್ ಕೊಡವತಿ ಅವ್ವನಾಂಡು. ಅಪ್ಪಟ ಕೊಡವತಿ

ಮಾಂವಿ, ತಾಯಿಯಾಯಿತ್ ಕೊಡವಾಮೆನ ಪೋತೊಂಡು. ಕೊಡಗ್‌ರ ಕೇಳಿನ ಲೋಕಕ್ ಪಬ್ಬ್‌ಚ್‌ಡೊಂಡು.

ಕೊಡವ ಬಾಲೆಕಾರ ಅಪ್ಪ ನೇಡ್‌ನಾನ ತಿಂದಂಡ್ ಕಾರ್‌ಲ್ ಸುತ್ತಿಯಂಡ್, ಬಾರ್‌ಲ್ ಕಳ್ಳ್‌ಕುಡ್‌ಚಂಡ್ ಕ್ಲಬ್‌ಲ್ ಇಸ್ಪೇಟ್ ತಟ್ಟಿಯಂಡ್, ಬೆಂಗಳೂರ್, ಮೈಸೂರ್‌ಲ್ ಸುತ್ತಿಯಂಡ್ ದಿನಕಯಿಪಂತ ಬಟ್ಟೆ ತಪ್ಪ್‌ನಯಿಂಗ ಆಯಿತ್‌ಂದ್ ಜನ ಪರಿಯುವ. ಕೊಡವ ಬಾಲೆಕಾರಡ ಬದ್‌ಕ್, ನೂಲ್ ತುಂಡ್‌ನ ಗಾಳಿಪಟತ್‌ರನ್ನಕೆ ಗೊತ್ತ್‌ಗುರಿ ಇಲ್ಲತಾಯಿತ್‌ಂದ್ ಎಣ್ಣುವ. ಕೊಡವ ಬಾಲೆಕಾರಕ್ ಶಿಸ್ತ್, ನೀತಿ, ನೇಮ ಇಲ್ಲತೆ ಪಾಳಾಯಂಡ್ ಉಂಡ್‌ಂದ್ ನಂಗಡ ಪೆರಿಯವುಪ ಎಣ್ಣುವಾನ ಕೇಟಿಯೆ. ಆಚೇಂಗೂ ಈ ಕೊಡವ ಬೈಬಂಗ ಎನ್ನಂಗ್ ಇನ್ನನೆ ಆಚೇಂದ್ ಕಾರಣ ಕಂಡ್‌ಪುಡ್‌ಚವು ಇಲ್ಲೆ! ಬಟ್ಟೆ ತಪ್ಪ್‌ನಯಿಂಗಳ ಎನ್ನನೆ ನಲ್ಲ ಬಟ್ಟೆಕ್ ಕೂಟುವೋಂದ್ ಪ್ರಯತ್ನಪಟ್ಟವು ಇಲ್ಲೆ. ಅದ್‌ಂಗಾಯಿತೇ ನಾನ್ ಕೊಡವ ಕ್‌ಣ್ಣನೇ ಬಾಕೆ ಕೂಡುವಿ. ಅದತೂ ಬಾಳ್ ಬದ್‌ಕ್‌ರ ಅಡ್ಡ ಬಟ್ಟೆಲುಳ್ಳಂವನೇ ಕೂಡುವಿ! ಅಂವನ ಸೆರಿ ಬಟ್ಟೆಕ್ ಕೂಟೊಂಡು.

ಬಾಲೆಕಾರಕ್ ಅಪ್ಪವ್ವಂಗಡ ಸೆರಿಯಾನ ಮಾರ್ಗದರ್ಶನ ಇಪ್ಪುಲೆ. ಅಂಥಾ ಬಾಲೆಕಾರಡ ಮನಸ್ಸ್‌ನ ಅರ್‌ಂಜಿತ್ ಅಂವಂಡ ಸಮಸ್ಯೆಕ್ ಪರಿಹಾರ ಕೊಡ್‌ಪುಲೆ. ಅಂಥ ಮಕ್ಕ ಕಳ್ಳ್‌ಕುಡಿ, ಇಸ್ಪೇಟ್‌ಲ್ ತೃಪ್ತಿಪಡುವ. ಇದೆಲ್ಲಾಂಗ್‌ಂಜಿ ಮೀತ ತೃಪ್ತಿನ ಪೊಣ್ಣಾನಯಿಂಗಕ್ ಕೊಡ್‌ತಿತ್ ನಲ್ಲ ಬಟ್ಟೆ ಕಾಟುವಕಯ್ಯುಲಿಯಾ? ಇಂತಾ ಪ್ರಯೋಗಕಾಯಿತೇ ನಾನ್ ಕೊಡವನೇ ಕೂಡುವೋ.

ನಾನ್ ಕೈ ಪುಡ್‌ಚ ವಡಿಯ, ಚಾಂದ್, ಬೂಟಿ ಮರ ಕಪ್ಪಂವನೇ ಆಯಿತಿರಡ್! ನಾನ್ ನೋಟುವಿ, ಅಂವೊ ಎನ್ನನೆ ಇಂಥಾ ಚಾಲ್‌ಕ್ ಇಳಿಯುವಾಂದ್! ಕಳ್ಳ್ ಕುಡಿಯನೋ, ಕುದ್‌ರೆ ಜೂಜ್‌ಕಾರನೋ ಆಯಿತಿರಡ್ ನೋಟನ, ಅಂವೊ ಎನ್ನನೆ ಇನ್ನತಾಲೆಲ್ಲಾ ದಿನ ಕಯಿಪಾಂದ್. ನಾಡ ವಡಿಯಂಡ ನಳತ್‌ರನ್ನಕೆ ಇಂಜಂಡ್ ಅಂವಂಡ ತಡಿರ, ಮನಸ್ಸ್‌ರ ಆರೈಕೆ ಮಾಡಿತ್ ಪ್ರೀತಿ ಪ್ರೇಮತ್ ಗೆಲ್ಲುವಿ, ಅಂವಂಡ ಜವಾಬ್ದಾರಿಕೆರ ಪಾದಿನ ನಾನ್ ಪೊರ್‌ಪಿ!

ಪೇಟೆ, ಬಾರ್, ಕ್ಲಬ್‌ಲ್ ಕ್‌ಟ್ಟುವ ತಾತ್ಕಾಲಿಕ ಸುಖಕ್‌ಂಜ ಮೀತ ಸುಖ ಶಾಂತಿ ತೃಪ್ತಿನ ಮನೆಲ್ ಕೊಡ್‌ತಕ ಅದೆನ್ನನೆ ಪೊರ್‌ಮೆ ಪೋಪಾ ನೋಟುವಿ!

ಬೇಲ್‌ನ ಇಂಜಿಕ್ ಕೊಡ್‌ತಂಡ್ ಎನ್ನನೆ ಪೇಟೆ ಸುತ್ತುವಾ, ನೋಟುವಿ, ಜಮ್ಮಾ ಜಾಗ ಮಾರಿತ್ ಎನ್ನನೆ ಮೈಸೂರ್ ಬೆಂಗಳೂರ್ ನಗರತ್‌ರ ಬಾಳ್‌ಕೆತ್ತುವಾ ನೋಟುವಿ! ಜಮ್ಮಾ ಮಾರುವೇಂಗಿ ಮಿಞ್ಞಾ ಅಪ್ಪನವ್ವನ ಪಿಞ್ಞಾ ಪೊಣ್ಣ್‌ನ ಮಾರ್, ಅಲ್ಲಿಂಜ ಮಕ್ಕಳ್ ಮಾರ್‌ಂದ್ ಹಠಪುಡಿಪಿ. ಏದ್‌ಂಗೂ ಬಗ್ಗತ ಪೋಚೇಂಗಿ, ಸಾಮ, ದಾನ, ಭೇದ,

ದಂಡ, ನಾಲ್ ತಂತ್ರತ್‌ನೋ ಬಳಸುವಕ್ ಮಾತ್ರ ನಾನ್ ಬಯ್ಯಕ್ ನಿಪ್ಪವಳಲ್ಲ!

ನಾನ್ ಕೈಪುಡ್‌ಚ ವಡಿಯನ ಓರ್ ಆದರ್ಶ ಕೊಡವನಾಯಿತ್ ಮಾಡೊಂಡು. ಓರ್ ಕ್‌ಣ್ಣ, ಓರ್ ಮೂಡಿ ಕುಂಞಿನ ಪೆತ್ತಿತ್, ಆ ಕುಂಞ್ನಿಯಳ ಆದರ್ಶ ಕೊಡವನಾಯಿತೂ, ಕೊಡವತಿಯಾಯಿತೂ ಬೊಳ್‌ತೊಂಡು. ನಾಡ ಮನೆನ ಓರ್ ಆದರ್ಶ ಕೊಡವ ಸಾಂಸ್ಕೃತಿಕ ಕೇಂದ್ರ ಮಾಡೊಂಡು. ನಾಡ ಮಾಂವ, ಮಾಂವಿನ, ಬಾವ, ಮಚ್ಚಿಣಂಗಳೆಲ್ಲಾ ಪ್ರೀತಿ, ವಿಶ್ವಾಸತ್ ಗೆದ್ದಿತ್ ಪಂಡೇತ ಕೊಡವ ಪದ್ಧತಿ ಪರಂಪರೆಕ್ ಪುನರ್ಜೀವ ಕೊಡ್‌ಕೊಂಡು. ನಾಡ ವಡಿಯನ ನೋಟಿತ್ ಜನ ಗೌರವತ್ ಮಂಡೆ ತಾತೊಂಡು. ನಾಡ ಮಕ್ಕಡ ಏಳಿಗೆ ನೋಟಿತ್ ಊರ್ ಕೇರಿರ ಕೊಡವ ಮಕ್ಕ ಆಯಿನ ಅನುಕರಣೆ ಮಾಡೊಂಡು. ಬಾಯಿ ತೊರ್‌ಂದವೆಲ್ಲಾ ಪೂವಮ್ಮಂಡ ಸಂಸಾರ ಎನ್ನನೆ ಉಂಡ್ ನೋಟಿ, ಅವಡ ಬೇಲ್‌ಲ್ ಬೊಳೆ, ಜಮ್ಮ ಬಾಣೆಲ್ ಮಾಡ್‌ನ ಕಾಫಿತೋಟತ್‌ನ ನೋಟಿ, ವಡಿಯನೂ ಪೊಣ್ಣೂ ಬೇಲ್, ತೋಟತ್ ಒಂದಾಯಿ ನೈಪಾನ ನೋಟಿ, ಆ ಮನೆಲ್ ಬೆಂದು ತಕ್ಕಾರ ನೋಟಿ, ಮನೆರ ಮಕ್ಕಡ ವಿದ್ಯಾಭ್ಯಾಸತ್‌ರ ಮಟ್ಟ ನೋಟಿ, ಒಟ್ಟಾರೆ ಪೂವಮ್ಮಂಡ ಮನೆಲ್ ಲಕ್ಷ್ಮೀ ಸರಸ್ವತಿ ದಂಡಾಳೂ ಪಡ್‌ಬುದ್ದಿತ್‌ಂದ್ ಪರೆಯೊಂಡು! ಪರ್‌ಂದಕ ಪೋರ, ನಾಡ ವಡಿಯನ ನೋಟಿತ್ ಬೋರೆ ಕೊಡವ ತಂಗಡ ಪರಾವಲಂಬನೆ, ಸಮಾಜ ದ್ರೋಹ ಚಟುವಟಿಕೆ, ಬೋಂಡತ ಒಣ ಜಂಬತ್‌ನೆಲ್ಲಾ ಬುಟ್ಟಿತ್ ಆದರ್ಶ ಕೊಡವಳಾಂಡು. ಅನ್ನನೆ ಮಾಡುವಕಾಯಿತೇ ನಾನ್ ಕೊಡವನೇ ಕೂಡುವೀಂದೆಣ್ಣುವ ಉದ್ದೇಶ.

ಕೊಡವಡಲ್ಲಿ ಇಕ್ಕಿಕ್ಕ ದುಂಬಿಪೋನ ಅನಿಷ್ಟ ಪದ್ಧತಿನ ನೀಕುವಿ. ಪಂಡೇತ ಪದ್ಧತಿಪೋಲೆ ನಾಡ ಮಂಗಲ ಕೈಪ್‌ಚಿಡುವಿ, ಊರ್‌ಕೂಡುವಲ್ಲಿಂಜ ಮಂಗಲ ಇಳಿಯಣೆ ದುಡಿಕೊಟ್ಟ್ ಪಾಟ್‌ಕೇ ಮುಂಬ್! ಬಾರ್ ಬಥೆಲ್ ತೆರ್ತೆ ಇಗ್ಗಿರುವಂಜಿ, ಕಾರಿಯಂಡ್, ತೂರಿಯಂಡ್ ಪೋಪಂತ ನೀತಿಕೆಟ್ಟ ಕೊಡವಕೆಲ್ಲಾ ನಾಡ ಮಂಗಲತ್ ಜಾಗ ಇಲ್ಲೆ! ಬಥೆ ಬೆಚ್ಚಿತ್ ಜಡ್ಡ್‌ಕ್ ಪದ್ದ್ ಬೂವನ್ನಕೆ ಮಾಡುಲೆ! ನೀರೆಡ್‌ಪಲ್ಲಿ ಪದ್ಧತಿಪೋಲೆ ಆಡುವ ಬಾವ ಮಚ್ಚಿಣಂಗ ಆಡಡ್, ಕುಶಿಪಡಡ್, ಕಳ್ಳ್ ಕುಡಚಂಡ್, ಕೀಜಂಡ ಆಡುವಯಿನ ಪಡನೆಟ್ಟಿ ಪುಡ್‌ಚಿ ತಳ್ಳ್‌ವಕುಳುಳ್ಳ ಪತ್ತ್ ಮರ್ಯಾದಸ್ಥ ಕೊಡವ ಬಾಲೆಕಾರಡ ಪಡೆನ ತಯಾರ್ ಮಾಡಿ ಬೆಚ್ಚಿತಿಪ್ಪಿ! ಪಂಡ್ ಇಲ್ಲತಿಂಜ ಬೆಂದೂಟಂದೆಣ್ಣುವ ಊಟತ್‌ರ ಚೊಲ್ಲ್ ಇಲ್ಲತ ಮಾಡುವಿ! ಇಲ್ಲತ ನಡ್‌ಪು, ಬೋಂಡತ ಕಳಿ ಕಳಿಪವು ನಾಡ ಮಂಗಲಕ್ ಬಪ್ಪಕ್ ಬೇರ್‌ಚ್‌ಡೊಂಡು. ತಪ್ಪಿ ನಡ್‌ಂದಕ ತಮ್ಮಾಂವ ನಾಚೇಂಗಿಯೂ ಬಂದ ಬಟ್ಟೆ ಕಾಟಿ ಕೊಡ್‌ಪ್‌ಚ್‌ಡುವಿ.

ವಡಿಯ ಕೈ ಪುಡ್‌ಚಿತ್ ಒಪ್ಪಿತ್ ಸಮ್ಮಂಧ ಪರ್‌ಂದಿತ್ ತಾನೂ ನೇರೆ ಕಟ್ಟೊಳೆ ಕಡ್‌ಂದಪಿಣ್ಣ್ ಬಾವನೆಲ್ ಕೊಡವಡ ನೇರಾನ ಶಿಸ್ತ್ ನಡ್‌ಪುನ ಬೊಳ್‌ತುವಿ

ಇದ್ಂಗಾಯಿತೇ ನಾನ್ ಕೊಡವ ಬೈಂಬನೇ ಬಾಕೆ ಕೂಡುವಿ.

ಕೊಡವ ವೀರಂಗಳನ್ನೆ, ಅಕ್ಕ ಕೊಡವತಿಯ ಹೇಡಿಯಳಾ... ಅಲ್ಲಾ...! ಆಣ್‌ರನ್ನಕೇ ಪೊಣ್ಣೂ ವೀರವಾತೆ. ಅನ್ಯಾಯ, ಅನಾಚಾರ ಕಂಡಲ್ಲಿ ಕತ್ತಿ ಎಡ್‌ಕಂಡಿಯಲ್ಲಿ ಕತ್ತಿ, ತೋಕ್ ಎಡ್‌ಪಲ್ಲಿ ತೋಕ್ ಎಡ್‌ಪಕೊಂದೂ ನಾನ್ ಬಯ್ಯಕ್ ನಿಪ್ಪವಳಲ್ಲ!

ಓರ್ ಕೊಡವ ಬೈಂಬನ ಕೈಪುಡ್‌ಚಕ ಮಾತ್ರ ನಾಡ ಈ ಗುರಿ ಸಾಧನೆ ಮಾಡೊಲು. ಅದ್ ಬುಟ್ಟಿತ್ ಬೋರೆ ಜಾತಿಕಾರಡ ಬಯ್ಯ ಓಡಿಪೋನ ಕೊಡವತಿ ಮೂಡಿಯಕ್ ಇನ್ನನೆ ಬಾಳ್‌ರ ಗುರಿ ಸಾಧನೆ ಮಾಡುವಕ್ ಕಯ್ಯುವಾ? ಅದ್ಂಗಾಯಿತೇ, ಬಡವನಾಚೇಂಗಿಯೂ ನಾನ್ ಕೊಡವ ಬೈಂಬನೇ ಬಾಕೆ ಕೂಡುವಿ!!

❖ ❖ ❖

# ಕೊಡಗ್‌ರ ಜಾನಪದ ನೃತ್ಯ - ಉಮ್ಮತ್ತಾಟ್

(ಉಮ್ಮತ್ತಾಟ್‌ನ "ನಕಲಿ ನೃತ್ಯಾ"ಂದ್ ಪೆರ್ತ್‌ಪೆರ್ತ್ ಜನ ಪರೆಯುವ. ಉಮ್ಮತ್ತಾಟ್‌ನ ಪೇಟೆ ಕೋಟೆಲ್ ತುಳ್ಪೈಚಿಟ್ಟ್‌ಟಕ ಪೋರ. ಅದ್‌ಂಡ ವಿಷಯತ್ ದಾರೇಂಗಿ ಕೇಟಕ ಉತ್ತರ ಕೊಡ್‌ಪ ತಾಕತ್ತ್ ನಂಗಕ್ ಇರೊಂಡು. ನಿವೃತ್ತ ಉಪನ್ಯಾಸಕ ಕೊಡವ ಸಾಹಿತಿ ಶ್ರೀ ಬಾಚರಣಿಯಂಡ ಪಿ. ಅಪ್ಪಣ್ಣ ಕುಶಾಲನಗರ ಇವು ಕೇಟರ್‌ಂಜ ಮಟ್ಟಿಕೆ ಅಯಿಂಗಡ ಅಭಿಪ್ರಾಯ ಇಲ್ಲಿ ಉಂಡ್.)

ಉಮ್ಮತ್ತಾಟ್ ಕೊಡಗ್‌ರ ಓರ್ ಜನಪದ ನೃತ್ಯ. "ಕೊಡವತಿಯ ಶುಭ ಸಮಾರಂಭತ್ ಆಡುವ ಆಟ್"ಂದ್ ಜನ ಅರ್‌ಂಜಿತ್. ಈ ಆಟ್‌ಕ್ ಕಯಿಂಜ ಇರುವದ್ ಇರುವತ್ತಂಜಿ ಕಾಲತ್‌ಂಜ ದುಂಬಾ ಪ್ರಚಾರ ಕ್‌ಟ್ಟಿತ್. ನಾಡ್‌ಲ್ ಪೊಮ್ಮಕ್ಕಕೂ, ಸ್ಕೂಲ್ ಕಾಲೇಜ್ ಮೂಡಿಯಕೂ ಉಮ್ಮತ್ತಾಟ್‌ಲ್ ತರಬೇತಿ ಕೊಡ್‌ತಿತ್ ಪೇಟೆ-ಪಟ್ಟಣತ್‌ರ ಸಭೆ-ಸಮಾರಂಭತ್‌ಲೆಲ್ಲ ಪ್ರದರ್ಶನ ಕೊಡ್‌ಪಕ್ ಸುರುವಾಚಿ. ಹಳ್ಳಿಂಜ ಡೆಲ್ಲಿಕೆತ್ತಣೆ ಪೋಯಿತ್ ಆಡಿತ್, ಜನಮೆಚ್ಚುಗೆ ಪಡ್‌ಂದಿತ್ ಕೇಳಿ ನೇಡ್‌ನದ್ ನೇರ್.

ಆಚೇಂಗಿ, ಉಮ್ಮತ್ತಾಟ್‌ರ ವಿಚಾರತ್ ಅದ್‌ಂಡ ಸಾಂಸ್ಕೃತಿಕ ಹಿನ್ನೆಲೆ ಎಂತ, ಪೌರಾಣಿಕ, ಹಿನ್ನೆಲೆ ಎಂತಾಂದ್ ಇಂದಾಕಣೆ ದಾರೂ ಆಳವಾನ ಅಧ್ಯಯನ ಮಾಡಿತೇ ಇಲ್ಲೆ. ಉಮ್ಮತ್ತಾಟ್‌ರ ವಿಚಾರತ್ ದಾರೇಂಗೊಬ್ಬ ಓರ್ ಕೊಡವನಾಡ್, ಕೊಡವತಿಯಾಡ್ ವಿವರ ಕೇಟಕ ಉತ್ತರ ಕೊಡ್‌ಪವು ದಾರೂ ಇಲ್ಲೆ. "ಅನ್ನನೆಲೋ ಇನ್ನನನೆಲೋ"ಂದ್ ಬೊರೀ "ಕಲ್ಪನೆರ ಉತ್ತರ" ಮಾತ್ರ ಕೊಡ್‌ತಿತ್ ಜಾಗ ಖಾಲಿ ಮಾಡಿರುವದ್ ಮಾಮೂಲ್ ದೃಶ್ಯ.

ಚೆನ್ನ ಕಾಲಕ್ ಬಯ್ಯ ಉಮ್ಮತ್ತಾಟ್‌ರ ಟೀಮ್‌ನ ರಷ್ಯಾ ದೇಶಕ್ ಕೂಟಿಯಂಡ್ ಪೋಪಾಂದೆಣ್ಣುವಕ ಒರೇ ಓರ್ ಕೊಡವತಿ ಭಾರತತ್‌ರ ಪ್ರೆಸಿಡೆಂಟ್‌ಕೂ, ಭಾರತ ಸರಕಾರಕೂ ಟೆಲಿಗ್ರಾಂ ಆಯೆಚಿತ್, "ಉಮ್ಮತ್ತಾಟ್ ಎಣ್ಣುವದ್ ಕೊಡಗ್‌ರ ಜಾನಪದ ನೃತ್ಯ ಅಲ್ಲಾ"ಂದ್ ಬೆಲ್‌ಕಿತ್ ರಷ್ಯಕ್ ಪೋಪ ತಂಡತ್‌ನ ಕುಂಬ್‌ಟ್ಟಂಡ ಅಳ್‌ಪಕ್ ಮಾಡ್‌ಚಿ.

ವೀರಾಜಪೇಟೆಲೋರ್ ಸಮಾರಂಭತ್‌ಲ್, "ಉಮ್ಮತ್ತಾಟ್ ಎಣ್ಣುವ ಆಟ್ ಕೊಡ್‌ಗ್‌ಲ್ ಇಂಜಿತೇ ಇಲ್ಲೆ. "ಉಮ್ಮಚ್ಚಿ ಕಳೀ"ಂದ್ ಪಡೆಲ್ ವಡಿಯ ಚಾವಕ,

ಪೊಣ್ಣ್ ಕುಞ್ಞಿನ ಎಡ್‌ತಂಡ್ ಆಡುವದೋರ್ ಆಟ್ ಮಾತ್ರ ಇಂಜತ್"ಂದ್ ಅದೇ ಕೊಡವತಿ ಆಡಿತೂ ಕಾಟಿತ್ ಪೊರ್‌ಮೆಂಜಿ ಬಂದಯಿಂಗಳುಂಡ್ ಬೆನ್ನ್ ತಟ್ಟ್‌ಚಿಟ್ಟಂಡ್ ಇಡೀ ಕೊಡವ ಸಾಂಸ್ಕೃತಿಕ ಕೋವುಕೇ ಅವಮಾನ ಮಾಡ್‌ಚಿ. ಈ ಸಂಗತಿನ ಪತ್ರಿಕೆಲ್ ಎಳ್‌ದ್‌ನಕಲೂ ಏದ್ ಕೊಡವರೂ ಮಂಡೆ ಕೆಡ್‌ತಿಯವಕ್ ಪೋಯಿಲೆ!

ಉಮ್ಮತ್ತಾಟ್ ಕರ್ತಿಯಳಾಡ್, ಉಮ್ಮತ್ತಾಟ್ ತಂಡತ್‌ನ ಪ್ರದರ್ಶನಕ್ ಕೂಟಿಯಂಡ್ ಪೋಪಯಿಂಗಳಾಡ್, ಕೊಡವ ಅಕಾಡೆಮಿಕಾರಳಾಡ್, ಕೊಡಗ್‌ರ ಜಾನಪದ ಸಂಶೋಧಕಂಗಳಾಡ್ ಈ ವಿಚಾರತ್‌ಲ್ ಅಧ್ಯಯನ ಮಾಡುವಕೇ ಪೋಯಿಲೆ. ಮಿಞ್ಞಾಕ್ ಕೊಡವಡ ಬೊಳಕಾಟ್, ಪೀಲಿಯಾಟ್ ನಂತಾನ ಕೂಡ ಅದೆಲ್ಲಾ ನಕಲಿ ನೃತ್ಯಾಂದ್ ಪ್ರಚಾರ ಮಾಡ್‌ನಕ ಮಂಡೆ ಕುಂಬ್‌ಟ್ಟಂಡ್ ಮುಂಡತಿಪ್ಪದಾ? ಕೊಡವ ಅಕಾಡೆಮಿಕಾರ ಕೂಡೆನ್ನೆ ಉಮ್ಮತ್ತಾಟ್‌ರ ಆಳ ಅರಿಯುವಕ್ ಪ್ರಯತ್ನ ಪಡೊಂಡು. "ಉಮ್ಮತ್ತಾಟ್, ಎಣ್ಣುವದ್ ಪಂಡ್ ಇಂಜಿತೇ ಇಲ್ಲೇ"ಂದ್ ಪ್ರಚಾರ ಮಾಡುವಯಿಂಗಕ್ ಉತ್ತರ ಕೊಡ್‌ಪ ಸಾಮರ್ಥ್ಯ ಪ್ರತಿಯೋರ್ ಉಮ್ಮತ್ತಾಟ್‌ಕರ್ತಿಯಕೂ ಇರೊಂಡು. ಅಕಾಡೆಮಿರ ಪ್ರತಿಯೋರ್ ಸದಸ್ಯಂಗೂ ಈ ವಿಚಾರತ್‌ರ ಮಾಹಿತಿ ಇರೊಂಡು.

### ನಾನ್ ಅರ್‌ಂಜ ಮಟ್ಟ್‌ಕೆ ಉಮ್ಮತ್ತಾಟ್

ಪಂಡ್ ಬಲ್ಲತ್ ಭದ್ರಕಾಳಿರ ತಿರ್‌ಕೆಲ್ ನಮ್ಮೆ ಕೆಟ್ಟ್‌ಬುದ್ದ ಪಿಞ್ಞಾ ಒಯಿಂಬದ್ ದಿನ ಪೊಲ್‌ಂಜೆತಿಕ್ ಕಾಕೆ ಪಕ್ಷಿರ ಕೂತ್ ಕೇಪಾಂಗ್ ಮಿಞ್ಞಾ ಒಕ್ಕಕೋರ್ ಪೊಣ್ಣಾಳ್ ಪಚ್ಚೆ ನೀರ್‌ಲ್ ಕುಳ್‌ಚಿತ್ ಬೆತ್ತಲೆ ಮೇಲ್‌ಲ್ ಬಂದಿತ್ ದೇವಡ ನಡೆಯತ್‌ಲ್ ಕಚ್ಚಿ ತಾಳ ಕೊಟ್ಟಿಯಂಡ್ ಆಡಿತ್ ಪೋಪಯಿಂಜತ್‌ಲೊ. ಉಮ್ಮತ್ತಾಟ್‌ಕರ್ತಿಯ ಮನೆಕ್ ಎತ್ತಣೆಕ್ ಮನೆರ ಆಣಾಳ್ ಎದ್ದಿರ್ ಕಿಡಿಕೆ ಪಡಿ ತೊರ್‌ಪ ಕಯ್ಯಾಂದ್ ನೇಮ ಇಂಜತ್‌ಲೊ. ಆಟ್‌ಕರ್ತಿಯ ಅಲ್ಲತೆ ಬೋರೆ ಪೊಣ್ಣಾಳ ಕೂಡ ಕಟ್ಟೋಳೆ ಕಡ್‌ಪಕಯ್ಯಾಂದ್ ಕೆಟ್ಟ್ ಇಂಜತ್‌ಲೊ.

ಪೊಣ್ಣಾಳ ಬೆತ್ತಲೆ ಆಡುವ ಪಳಮೆನ ಕೇಟರ್‌ಂಜ ನೆರೆ ಊರ್‌ರ ಮೂಂದ್ ಪೋಕರಿ ಮಕ್ಕ ಇರ್‌ಲ್ ದಾರ್‌ಕೂ ಅರಿಯತನ್ನಕೆ ಬಂದಿತ್ ದೇವಸ್ಥಾನತ್‌ರ ಪಕ್ಕ ಓರ್ ಮರ ಪತ್ತಿತ್ ಅಳತಂಡ್ ಪೊಣ್ಣಾಳಡ ಬೆತ್ತಲೆ ಆಟ್‌ನ ನೋಟಿರ್‌ತ್‌ಲೊ. ಈ ತರ ಅನಾಚಾರ ಮಾಡ್‌ನ ಆ ಮೂಂದ್ ಬಾಲೆಕಾರಡ ಕಣ್ಣ್‌ರ ದೃಷ್ಟಿ ಪೋಯಿರ್‌ತ್‌ಲೊ. ಈ ಪಳಮೆ ಬಾಯಿಂಜ ಬಾಯಿಕ್ ಪಬ್ಬಿತ್ ಪೊಲ್‌ಂಜೆತಿಕ್ ಆಡವಯಿಂಜ ಉಮ್ಮತ್ತಾಟ್‌ನ ನಿಪ್ಪ್‌ಚಿಟ್ಟ್‌ರ್‌ತ್‌ಲೊ...........(ಕೇಟದ್)

ನಾಪೋಕ್ಲ್ ಭಗವತಿ ದೇವಸ್ಥಾನತ್‌ಲ್ ನಮ್ಮೆ ಕುರ್‌ಚ ಪಿಞ್ಞಾ ಎಕ್ಕೊಲೂ ಪೊಣ್ಣಾಳ ಉಮ್ಮತ್ತಾಟ್ ಆಡುವ ಇಂಜತ್‌ಲೊ. ಕೊಡಗ್‌ರ ರಾಜನ ಬೊಳ್ಳೆ ದೊರೆಯ

ಪುಡ್‌ಚಿತ್ ಕಾಶಿಕ್ ಅಯೆಪಕ ರಾಜಂಡ ಕೂಡೆ ಪೆಬ್ಬಟ್ಟೀರ ಒಕ್ಕಡ ಅರ್ಜುನ ಪಿಞ್ಞ "ದಂಡಾಪಣಿ" (ದಂಡ ಪಾಣೀ"ಂದ್ ಆಯಿತಿಕ್ಕು) ಎಣ್ಣುವಯಿಂಗ ದಂಡಾಳ್ ಪೋಚಿಲೊ. ಅಯಿಂಗ ಪೊರ್‌ಟಂದ್ ನಾಪೋಕ್ಲ್ ಭಗವತಿ ದೇವಸ್ಥಾನತ್‌ಲ್ ಉಮ್ಮತ್ತಾಟ್ ನೋಟಿತ್ ಪೋಚಿಲೊ. ಕಾಶಿಂಜ ವಾಪಾಸ್ ಬಂದಂದೂ ಉಮ್ಮತ್ತಾಟ್ ನಡ್‌ಂದಂಡಿಂಜಾನ ನೋಟಿತ್ ಮನೆಕೆತ್ತ್‌ಚಿಲೊ. ಅಕ್ಕ ಅವು ಕಾಶಿಂಜ ಬಪ್ಪಕ ಓರ್ ಕಾಲ ಇಲ್ಲೇಂಗಿ ದಂಡ್ ಕಾಲ ಆಯಿತಿಕ್ಕೂಂದ್ ಪಂಡೇತ ಲೆಕ್ಕ. ಪೆಬ್ಬಟ್ಟೀರ ಆ ದಂಡ್ ಮೋಲಿಯ ಚಾವಣೆಕೂ ಅಯಿಂಗ ಕಾಶಿಕ್ ಪೋಪಕ ಕೊಂಡಪೋನ ತಂಡ್‌ನ ಬೆಚ್ಚಂಡಿಂಜತ್ ಅಯಿಂಗಡ ಚಾವು ಚುಡುವಕ ಆ ದೊಣ್ಣೆನೋ ಚುಟ್ಟತ್‌ಲೊ. ದೇವಡ ಉಮ್ಮತ್ತಾಟ್ ನೋಟಿತ್ ಪೋನಾನಗುಂಡ್ ಜಿಂವತ್‌ಲ್ ಬಂದೆತ್ತ್‌ಚಿಂದ್ ಆ ದಂಡ್ ಮೋಲಿಯ ಎಣ್ಣುವಯಿಂಜತ್‌ಲೊ. (ಸುಮಾರು 60 ಕಾಲಕ್ ಬಯ್ಯ ಕೇಟದ್)

ನಾನ್ ಕಂಡದ್- 1940ನೆ ಇಸವಿ. ಓರ್ ಮಾದಕಯಿಂಜಂದ್ ಬೈಟ್ ಪೊಲ್‌ಚಿ ಪಾಡುವಕ ಮೂಂದ್ ನಾಲ್ ಪೊಣ್ಣಾಳ ಬಾಡೆಲ್ ಉಮ್ಮಾತ್ತಾಟ್‌ಕ್ ಇಳ್‌ಂಜತ್. ಒಲ್‌ಪ್‌ಚಿರ ಮನೆಲ್ ವಡಿಯ ಚತ್ತಿತ್ (ಇಕ್ಕ ಒಲ್‌ಪ್‌ಚಿರ ಒಕ್ಕತ್ ದಾರೂ ಇಲ್ಲೆಲೊ) ಕೋಪಟ್ಟಿ ಕೇಕಡ ಜೋಯಪ್ಪಂದೆಣ್ಣುವಯಿಂಗಡ ದಂಡನೆ ಬಾಕೆ ಕೂಡ್‌ನ ಪೂವವ್ವ ಎಣ್ಣುವವ ಉಮ್ಮತ್ತಾಟ್ ಕಾಟಿಕೊಡ್‌ತಂಡ್ ಆಡ್‌ಚಿ. ಆ ಪೂವವ್ವ ತಾಯಿ ದುಂಬಾ ಪೊಣ್ಣಾಳಕ್ ಉಮ್ಮತ್ತಾಟ್ ಪಡಿಪ್ ಚಿಟ್ಟದುಂಡ್.

1963ನೆ ಇಸವಿಲ್ ಓರ್ ಮಾದತ್ ಮನೆಲ್ ಸೂರ್ಲಬ್ಬಿ ನಾಡ್‌ರ ಶಾಂತೆಯಂಡ ಓರ್ ಪೊಣ್ಣಾಳ್ ಚೆನ್ನ ಮೂಡಿಯಳ ಕೂಟಿಯಂಡ್ ಆಡ್‌ಚಿ.

**ಶ್ರೀ ಬೊಳ್ಳಚಿಟ್ಟೀರ ಕುಶಾಲಪ್ಪ ಮಾಸ್ಟರ್ ಎಣ್ಣ್‌ನದ್:**

1952ನೆ ಇಸವಿಲ್ ಶ್ರೀ ಬಿ.ಎ. ಕುಶಾಲಪ್ಪ ಓರ್ ಮಂಗಲತ್‌ರ ಕೂಡೆ ಸೂರ್ಲಬ್ಬಿಕ್ ಪೋಯಿತಿಂಜತ್‌ಲೊ. ಆ ಮಂಗಲತ್ ಮನೆಲ್ ಉಮ್ಮತ್ತಾಟ್ ಕಾರ್ಯಕ್ರಮತ್‌ನ ಅಯಿಂಗ ನೋಟಿತ್ ಬಂದಿತ್.

ಇನ್ನನೆ ಉಮ್ಮತ್ತಾಟ್ ಕೊಡಗ್‌ಲ್ ಪಂಡ್‌ಂಜೇ ಉಂಡ್. ಇದ್, ವಿಷಯ ಗೊತ್ತಿಲ್ಲತ ಜನ ಆರ್‌ಂಜಂಡನ್ನಕೆ ನಕಲಿ ಜನಪದ ನೃತ್ಯ ಖಂಡಿತಾ ಅಲ್ಲ. ಬೋರೆ ಬೋರೆ ನಾಡ್‌ಲ್ ಪೆರಿಯಯಿನ ಕೇಟರ್‌ಂಜಕ ಬೋಂಡಿಯಚ್ಚಕ್ ಆಧಾರ ಕ್‌ಟ್ಟು. ಅಕಾಡೆಮಿಕಾರ ಈ ನ್‌ಟ್ಟ್‌ಲ್ ಚೆನ್ನ ಕಾರ್ಬಾರ್ ಮಾಡಿತ್, ಉಮ್ಮತ್ತಾಟ್‌ನ ತೊಟ್ಟಿತ್ ತಾರಾಮಾರ ಪರಿಯುವಯಿಂಗಡ ಬಾಯಿಕ್ ಬೀಗ ಇಡುವಕ್ ಮಿಞ್ಞಕ್‌ಳಿರಿ.

"ಉಮ್ಮತ್ತಾಟ್" ನಕಲಿ ಜನಪದ ನೃತ್ಯ ಖಂಡಿತಾ ಅಲ್ಲ.

❖ ❖ ❖

## ಪಂಡ್ ಪೋಲೆ ತಕ್ಕಾಮೆಲೆ ಇರೊಂಡು

ಲೋಕತ್‌ಲ್ ಓರ್ ಗುರು ಅಥವಾ ಸಮಾಜ ಮುಕ್ರಿ ಇಲ್ಲೇಂಗಿ, ಸಮಾಜಕ್ ಮಾರ್ಗದರ್ಶಿ ಎಣ್ಣುವಯಿಂಗ ಇಲ್ಲತ ಜನಾಂಗ ಎಣ್ಣಕ ಅದ್ ಕೊಡವ ಮಾತ್ರ. ಇದ್‌ನುಂಡ್ ಕೊಡವ ಜನಾಂಗ ಓರ್ ಬೋಟಿ ಇಲ್ಲತ ಕಳತ್‌ರ ಪೋಲೆ. ಬೋರೆಲ್ಲಾ ಜಾತಿ ಜನಾಂಗ, ಧರ್ಮಕಾರಕೂ ತಂಗಡ ಜನಾಂಗಕ್ ಅಡ್‌ಂಗ್‌ನ ಮುಕ್ರಿಯ, ಗುರುವ ಉಂಡ್. ಅಲ್ಲಿ ಪ್ರಜಾಪ್ರಭುತ್ವಕ್ ಎಡೆಯಿಲ್ಲೆ. ಅನ್ನನಾಯಿತ್ ನಲ್ಲರಿಕೆರ ಬಾಳ್ ಬರ್ಕತ್ ಅಯಿಂಗಡಲ್ಲಿ ಉಂಡ್.

ಕೊಡವ ಚೆರಿಯ ಸಂಖ್ಯೆರ ಜನ. ಚೆರಿಯ ಪ್ರದೇಶತ್ ಉಳ್ಳ ಇಯಂಗಡ ಪವಿತ್ರ ಭೂಮಿಲ್ ಪಂಡ್‌ಂಜೇ ಊರ್ ತಕ್ಕ, ನಾಡ್ ತಕ್ಕ, ದೇವ ತಕ್ಕ, ದೇಶ ತಕ್ಕ ಎಣ್ಣುವ ಪದ್ಧತಿ ಉಂಡ್. ಇದ್ ಒರ್ ಧಾರ್ಮಿಕ ಪಿಣ್ಣ ನೈತಿಕ ನೆಲೆಕಟ್ಟ್‌ರ ಮೀದ ನಿಂದ ಪದ್ಧತಿ. ಕೊಡಗ್‌ರ ಇತಿಹಾಸತ್‌ಲ್ ಈ ತಕ್ಕಂಗ ತಪ್ಪಿ ನಡ್‌ಂದ ದಾಖಲೆ ಇಲ್ಲೆ. ಚಾರಿತ್ರಿಕ ಕಾರಣತ್‌ನಗುಂಡ್ ಕುತ್ತಿ ನಾಶ ಆಯಂಡುಂಡ್. ಆಚೇಂಗಿ ಅಧಿಕಾರ ದುರುಪಯೋಗ ಆನದಿಲ್ಲೆ.

ಈ "ತಕ್ಕ" ಎಣ್ಣುವಯಿಂಗಕ್ ಓರ್ ನೇರಾನ ನೈತಿಕ ಹೊಣೆ ಉಂಡ್. ತಾಂಡ ಒಕ್ಕಡ, ಊರ್‌ರ ಜನಾಂಗತ್‌ರ ಸ್ಥಾನ ಮಾನ, ಗೌರವ, ಘನತೆನ ಕಾಪಾಡೊಂಡು ಎಣ್ಣುವ ಪವಿತ್ರ ಭಾವನೆ ಉಂಡ್. ಇನ್ನತ ತಕ್ಕಾಮೆರ ಅವಧಿ ಇಚ್ಚಕೇಂದೆಣ್ಣಿತ್ ನಿರ್‌ಕ್ ಮಾಡಿತಿಲ್ಲೆ. ಓರ್ ವ್ಯಕ್ತಿ ತಾಂಡ ಬದ್‌ಕ್‌ರ ಅವಧಿಲ್ ನಾಪದ್ ಐಂಬದ್ ಕಾಲ ತಕ್ಕಾಮೆರ ಜವಾಬ್ದಾರಿ ನಡ್‌ತುವಕೂ ಮದಿ. ಈ ಅವಧಿಲ್ ಅಂವ ತರಾವರಿ ಯೋಜನೆ ಇಟ್ಟಂಡ್ ಅಂತ ಯೋಜನೆನ ಕಾರ್ಯರೂಪಕ್ ಕೊಂಡ ಬಪ್ಪಕೂ ಅವಕಾಶ ಇಪ್ಪ. ರಾಜಕೀಯ ವಿರೋಧಿಯಡ ತಂಟೆ ತಕರಾರ್, ಕುತ್ತ ಪರೆಯಲ್ ಇಲ್ಲತಲ್ಲಿ ನೇಮತ್‌ಲೂ ನೆಮ್ಮದಿಲೂ ತೊಟ್ಟ ಕಾರ್ಬಾರ್‌ನ ಗುರಿ ಮುಟ್ಟ್‌ಚಿಡೊಲು.

"ಪುಂಡ, ಪೋಲಿ ಪೊರ್ಕಿಯಡ ಆಖೀರಿ ಆಶ್ರಯ ರಾಜಕೀಯಾ"ಂದ್ ಪ್ರಪಂಚತ್‌ರ ದಾರ್ಶನಿಕಂಗ ಪರ್‌ಂದ್ ಕಾಟಿತ್, ಅನ್ನತ ರಾಜಕೀಯತ್‌ಂಜಿ ಪವಿತ್ರವಾನ ಅಖಿಲ ಕೊಡವ ಸಮಾಜತ್‌ನ ದೂರ ಬೆಚ್ಚವಂಡಿಯ ಅವಶ್ಯ ಕಾಂಬ. ಅಧ್ಯಕ್ಷ ಅಸಮರ್ಥ ಆನ ಕಾಲಕ್‌ಪರಿಹಾರ ಕಾರ್ಯ ತೇಡೊಲು. ಇಂದಿಕ್ಕ ಸಮರ್ಥ ಅಧ್ಯಕ್ಷ ಇಪ್ಪಕಾಪಕ

ಪ್ರಜಾಪ್ರಭುತ್ವ ಪೋಲೆ ಆಡಳಿತತ್‌ರ ಚೊಲ್ಲೆಡ್‌ಪದ್ ಬೋಂಡಿತಿಲ್ಲೆ.

ಆಚೇಂಗಿ ಇಂದಿಕ್ಕ ತಕ್ಕೊಂದ್ ಉಳ್ಳನ್ನಕೆ, "ಕ್‌ರ್‌ಕೊಟ್ಟಂಡ ಕಣ್ಣೆಲ್ಲ ಕೋಳಿ ಕುಞ್ಞಿರ ಮೇಲೆ, ನಾಗರೀಕಂದೆಣ್ಣುವಯಿಂಗಡ ಕಣ್ಣೆಲ್ಲ ಪ್ರತಿಷ್ಠಿತ ಸ್ಥಾನ ಪಿಞ್ಞ ಕುರ್ಚಿರ ಮೇಲೆ"ಆಯಿತ್. ಇದ್‌ನಗುಂಡ್ ಕುರ್ಚಿಕ್ ಪುಡ್‌ಚಿಬರಿ. ಅಲ್ಲಿಕ್, "ರಾಜಕೀಯ" ಎಣ್ಣುವ ಕ್ಯಾನ್ಸರ್ ಆಚೀಂದ್ ಲೆಕ್ಕ. ಇದ್ ಸಮಾಜತ್ ನೀತಿ, ನಲ್ಲರಿಕೆ ಮರ್ಯಾದೆನ ಇಲ್ಲತೆ ಮಾಡುವಕುಳ್ಳ ಬಟ್ಟೆ.

"ಪ್ರಜಾಪ್ರಭುತ್ವ", ಪೆದ ಎನ್ನೋ ಕೇಪಕ ಪೆರ್ತ್ ಚಾಯಿ. ಆಚೇಂಗದ್ ಪುಸ್ತಕತ್‌ಲ್ ಉಳ್ಳಪೋಲೆ ನಡಪ್‌ಲೆ. ಜಾತಿ, ಮತ, ಪ್ರಾದೇಶಿಕತೆರ ಮೀದ ನಿಂದಿತುಳ್ಳ ಈ ಪ್ರಜಾಪ್ರಭುತ್ವತ್ ನಲ್ಲರಿಕೆಕ್ ಕಾಲ ಇಲ್ಲೆ.

ದೇಶತ್‌ಲೂ, ಊರ್ ನಾಡ್‌ಲೂ ಪಾರ್ಟಿ ಪಂಗಡ ಇಂಜದ್ ಇಂದ್ ಮನೆ ಮನೆಕ್ ಎತ್ತಿತ್. ಒಬ್ಬನ ಕಂಡಕ ಒಬ್ಬಂಗ್ ಆಕತ ಕಾಲ ಬಂದ್‌ಪೋಯಿತ್. ನಲ್ಲ ಕಾರ್ಬಾರ್ ಮಾಡೊಂಡೂಂದ್ ಮನಸ್ಸ್ ಉಳ್ಳಂವನ ಕೂಡಿ ಮಿಞ್ಞಕ್ ಮೊಟ್ಟ್ ಎಡ್‌ಪಕ್ ಬುಡತೆ ತಡ್‌ತ್‌ಟ್ಟ್ ಕುತ್ತ ಪರ್‌ಂದ್ ಕ್‌ದಕುಳ್‌ಪುವದೇ ಪಾರ್ಟಿ ರಾಜಕೀಯತ್‌ರ ಗುಣ.

ಇಂದ್ ಕೊಡವ ಸಮಾಜತ್‌ಲೆಲ್ಲ ನಡ್‌ಂದಂಡುಳ್ಳ ಪಾರ್ಟಿ ರಾಜಕೀಯತ್‌ರ ಹಣೆಬರ ಕಂಡಂಡುಂಡ್. ಕೋರ್ಟ್ ಕಛೇರಿ, ತಲ್ಲ್‌ಂಬುಡಿ, ಗೂಂಡಾಗಿರಿ, ಒಳಸಂಚ್, ಪಿತ್‌ಲಾಟತ್‌ನಗುಂಡ್ ಕೊಡವಡ ಮನೆ ಮನೆಲೂ ಒಡಕ್, ಮನಮನತೂ ಬಿರ್‌ಕ್. ಇದೇ ಪ್ರಜಾಪ್ರಭುತ್ವತ್‌ರ ಕೊಡುಗೆ.

ಈ ಎಲ್ಲಾ ಕಾರಣತ್‌ನುಂಡ್ ಅಖಿಲ ಕೊಡವ ಸಮಾಜತ್ ತಕ್ಕಾಮೆ ಅಲ್ಲತೆ ಬೋರೆ ಒರೂ ಆಡಳಿತ ವ್ಯವಸ್ಥೆಕ್ ಮೊಟ್ಟ್‌ಡುವದ್ ಖಂಡಿತಾ ಬೋಂಡ.

❖ ❖ ❖

# ಕೊಡವ ಉಪಜನಾಂಗತ್‌ನ ಕೊಡವಳಾಕಿಯವಂಡು

ಕೊಡವತಕ್ಕ್ ಪರೆಯುವ ಎಲ್ಲಾ ಉಪಜನಾಂಗತ್‌ನ ಕೊಡವಳಾಯಿತ್ ಮಾಡಿಯವದ್ ಪೆರ್ತ್ ತರ್ಕ ಮಾಡಂಡಿಯ ವಿಷಯ. ಕೊಡವಡ ಜನಸಂಖ್ಯೆನ ಜಾಸ್ತಿ ಮಾಡುವದ್ ಒಂದೇ ದೃಷ್ಟಿ ಅಲ್ಲ. ತರಾವರಿ ಗುರಿ ಉದ್ದೇಶ, ಸಾಧನೆಕಾಯಿತ್ ಕೊಡವ ತಕ್ಕ್ ಪರ್‌ಂದಂಡ್, ಕೊಡವ ಪದ್ಧತಿನೇ ನಡ್‌ತಿಯಂಡ್ ಬಂದಂಡುಳ್ಳ ಎಲ್ಲಾ ಉಪಜನಾಂಗತ್‌ನೋ ಕೊಡವಳಾಕಿಯವಂಡಿಯ ಅವಶ್ಯಕತೆ ಇಂದೇತ ಪರಿಸ್ಥಿತಿಲ್ ಪೆರ್ತ್ ಅವಶ್ಯ ಉಂಡ್. ಆಚೇಂಗಿ ಅದ್ ಸುಲಭತ್‌ರ ಕಾರ್ಬಾರ್ ಅಲ್ಲ. ದುಂಬಾ ಸಮಸ್ಯೆಯೂ ಉಂಡ್. ಅದ್‌ಂಗಾಯಿತ್ ಚೆನ್ನ ವಿವರೋಡೆ ಚರ್ಚೆ ಮಾಡನ.

**ಎನ್ನಂಗಾಯಿತ್ ಕೊಡವಳಾಕಿಯವಂಡು - ಕಾರಣ**

1. ಭೂಲೋಕತ್ ಫಲತರ ಕಾರಣತ್‌ನುಂಡ್ ಮಾನವಕುಲತ್‌ರ ಎಚ್ಚಕೋ ಜಾತಿಯಡ ಸಂಖ್ಯೆ ಒಡ್‌ಂಗಿಯಂಡುಂಡ್. ಇದತ್ ಕೊಡವಳೂ ಕೂಡಿತುಂಡ್. ಅದ್‌ಂಗಾಯಿತ್ ಕೊಡವ ಎಚ್ಚರಾಂಡು.

2. ಪ್ರಜಾಪ್ರಭುತ್ವ ರಾಷ್ಟ್ರತ್ ಜನಬಲವೇ ಮೂಲಾಧಾರ.

3. ಕೊಡಗ್‌ರ ಮಟ್ಟಿಕೆ ಎಣ್ಣುವದಾಚೇಂಗಿ ಭೌಗೋಳಿಕ ಪ್ರದೇಶ ರಕ್ಷಣೆ, ಪ್ರಕೃತಿ ಪರಿಸರ ಸಂರಕ್ಷಣೆ, ಕಲೆ, ಸಾಹಿತ್ಯ, ಸಂಸ್ಕೃತಿ ಪಿಞ್ಞಾ ತಕ್ಕ್‌ರ ಸಂರಕ್ಷಣೆಕಾಯಿತ್ ಜನಸಂಖ್ಯೆ ಜಾಸ್ತಿ ಆಂಡು.

4. ಜಾತಿ, ಮತ, ಭೇದ ಏದೇ ಓರ್ ದೇಶತ್‌ರ ಒಂದನೆ ಶತ್ರು. ಇದ್ ಇಲ್ಲೇಂದಾನಕ ಅನ್ನತ ದೇಶ. ಪ್ರದೇಶತ್ ಶಾಂತಿ ಇಪ್ಪ. ಇದ್ ಇಲ್ಲೇಂದಾನಕ ಜನಾಂಗ ದ್ವೇಷಕ್ ಎಡೆಯಾಪ. ಅಕ್ಕಣೆಕ್ ಇಞ್‌ಞ್ಞೀರ್ ಜನಾಂಗ ಇಯುಂಗಡೊಳಿಯು ನುಗ್ಗಿಯಂಡ್ ಬೋಂಡತ ರೀತಿಲ್ ತಾಂಡ ಲಾಭಕ್ ಪೇಚಾಡುವ. ಇಂದ್ ಕೊಡಗ್‌ಲ್ ಆಯಂಡುಳ್ಳದೇ ಇದ್. ಅದ್‌ನಗುಂಡ್ ನಂಗಡ ಉಪ ಜಾತಿಕಾರಳ ಕೊಡವಳಾಕಿಯವಂಡು.

5. ಕೊಡಗ್‌ರ ತೆರಿಭಾಗ ಎಲ್ಲಾ ಪೊರ ರಾಜ್ಯಕಾರಡ ಪಾಲಾಯಂಡ್ ಉಂಡ್. ಇನ್ನನಿಪ್ಪಕ ನಂಗಡದೇ ಆನ ಉಪಜಾತಿಕಾರ, ಏಪ್ಪಕ್ ನೆಲೆ ಇಲ್ಲತಯಿಂಗಕ್ ಅನ್ನತ ಜಾಗತ್ ಜಾಗ ಕೊಡ್‌ತಿತ್ ಮಿಞ್ಞಾಕ್ ಕೊಂಡ ಬರೊಲು.

**ಸಮಸ್ಯೆ:-**

ಕೊಡವ ಉಪಜನಾಂಗತ್‌ನ ಕೊಡವಳಾಕಿಯುವ ಪ್ರಕ್ರಿಯೆಲ್ ಕಡ್‌ಪತ್‌ರ ಸಮಸ್ಯೆಯೂ ಉಂಡ್.

1. ಕೊಡವ ಸಮುದಾಯ ಒಂದಾಯಿ ಒತ್ತಿತ್ ಬಾಕಿ ಉಳ್ಳಯಿನ ಕಾಕಿ ಕೂಟೆಯಂಡಕಲೂ ಉಪ ಜನಾಂಗಕಾರಡಲ್ಲಿ ಚೆನ್ನಂಗ್ ಪಂಗಡಕಾರ ಕೂಡುವಕ್ ಇಷ್ಟಪಡುಲೆ ಎಣ್ಣುವದ್ ಸತ್ಯ. ಎನ್ನಂಗೆಣ್ಣಕ ಅಕ್ಕಣೆಕ್ ಚೆನ್ನಂಗ್ ಕೊಡವ ವಿರೋಧಿ ಬಣ ಒಂದು ಕೂಡಿತ್ ತಂಗಡ ಬೇಳೆ ಬೇವುಚಿಟ್ಟವಕ್ ಕಾರ್ಯತಂತ್ರ ರೂಪ್‌ಚಿಡುವ.
2. ಇಞ್ಞಿ ಕೊಡವಡ ಕೂಡೆ ಕೂಡ್‌ನಕ ಎಲ್ಲಾರೂ ಸೆರಿ ಸಮನಾಂದ್ ಆಪದುಂಡಾಂದ್ ಅಗ್ಗೇನ ಪಡುವಯಿಂಗಳೇ ಜಾಸ್ತಿ. ಇದ್‌ಂಗ್ ಪಂಡ್‌ಂಜೇ ನಡ್‌ಂದ್ ಬಂದ ಸುಮಾರ್ ಸಾಮಾಜಿಕ ಕಾರಣವೂ ಉಂಡ್.
3. ಮನೆಪೆದತ್‌ರ ಆಧಾರತ್ ಕೊಡವಡೊಳ್‌ಲ್ ನಾಲಂಜಿ ಅಂತಸ್ತ್ ಉಳ್ಳದ್ ಎಲ್ಲಾರ್‌ಕೂ ಗೊತ್ತುಳ್ಳ ಸತ್ಯ. ಇಂದ್ ಪಣಕಾಸ್, ವಿದ್ಯ ಬುದ್ಧಿರ ಬೊಳ್‌ಚೆನುಂಡ್ ಶೇಕಡ ಪತ್ತಾಂಡಚ್ಚಕ್ ಬದಲಾವಣೆ ಆಯಿತಚ್ಚಿಕೇ. ಇನ್ನನಿಪ್ಪಕ ಉಪಜಾತಿಕಾರಳ ಕೊಡವಳಾಕಿಯಂಡಕ ಅಯಿಂಗಳ ಏದ್ ತರ ನಂಗ ಕಾಂಗೂಂದೆಣ್ಣುವ ಬೇರ ಅಯಿಂಗಕ್ ಉಂಡ್.
4. ಚೆನ್ನಂಗ್ ಉಪಜನಾಂಗಕಾರಕ್, "ಬಯ್ಯಲುಳ್ಳಯಿಂಗಕ್ ಕ್‌ಟ್ಟುವ ಸರ್ಕಾರಿ ಸೌಲಭ್ಯ ಕೊಡವಳಾಯಿಟಕ ಕ್‌ಟ್ಟುಲೆ" ಎಣ್ಣು ಕಾರಣಕ್ ಅವು ಕೊಡವಳಾಪಕ್ ತಯಾರಾಪಕಿಲ್ಲೆ.
5. ಪದ್ಧತಿ ಪಿಞ್ಞಾ ತಕ್ಕ್ ಒಂದೇ ಆನಕಲೂ ಉಪಜನಾಂಗಕಾರಡ ಪಣಕಾಸ್‌ರ ಸ್ಥಿತಿ, ಸಾಮಾಜಿಕ ಬದ್‌ಕಾಟ ಕೊಡವಡ ಮಟ್ಟತ್ ಇಲ್ಲತಾನುಂಡ್ ಓರ್ ತರ ಕ್‌ಳರಿಮೆ ಬಪ್ಪದ್ ಮಾಮೂಲ್.
6. ಎಲ್ಲಾ ಉಪ ಜನಾಂಗಕಾರಕ್ ಮನೆಪೆದ ಇಲ್ಲೆ. ಚೆನ್ನಂಗ್ ಜಾತಿಯಳ ತಂಗಡ ಜಾತಿರ ಪೆದತ್‌ಲೇ ಕಾಕಂಡಿಯಾಪ. ಇದ್, "ಮೂಸೆ ಕಾಕ ಪೆದ ಮಾತುವಕ್ ಊಟ ಕೊಡ್‌ತ ಕತೆ"ನನ್ನಕೆ ಆಯಿಪೋಪ!
7. ತಲೆ ತಲಾಂತರತ್‌ಂಜಿ ಕೊಡವಡ ಜಮ್ಮತ್ ಕುಡಿಯಾಯಂಡ್ ಉಳ್ಳಂತ ಜಾತಿಕಾರ ಆ ಕೊಡವ ಒಕ್ಕಡ ಮನೆ ಪೆದತ್‌ನೋ ಬಳಸಿಯವಡ್‌ಂದ್ ಒತ್ತವಂತ ಬಲ್ಯ ಮನಸ್ಸ್‌ರ ಕೊಡವ ಇಕ್ಕುವಾ? ಇಲ್ಲೇಂಗಿ ಆ ಜಮ್ಮತ್ತಾಳ

ಕೊಡವ ಎಣ್ಣ್‌ಚಿಟ್ಟಂಡಕ ಎನ್ನ್ ಪ್ರಯೋಜನ?

8. ತಂದ್ ಬೆಂದೂರ್ತ ಅಪ್ಪರಿಪ್ಪರ ಆಗತ ಪಿಞ್ಞ ಒರೇ ಜಾತಿಂದೂ ಡಂಗೂರ ಸಾರಿಟಕ ಏದ್ ತರತೂ ಪ್ರಯೋಜನ ಆಪುಲೆ.

**ಪರಿಹಾರ ಎಂಥ:-**

1. ಕ್ರಾಂತಿಕಾರಿ ಬದಲಾವಣೆ ಆಂಡು. ಕೊಡವ ಬಲ್ಯ ತ್ಯಾಗಕ್ ಇಳಿಯೊಂಡು. ಕ್ರಿಸ್ತಾನಿ ಮಿಷನರಿಯಳನ್ನಕೆ ಪ್ರತೀ ಕೊಡವ ಕುಟುಂಬ ಉಪ ಜನಾಂಗಕಾರಡ ಬರುಕ್ ಪಡಿ ತೊರ್‌ಂದಿತ್ ಕಾಕಿಕೂಟಿಯವಂಡು. ಬೊರೀ ಕೊಡವ ಸಮಾಜಕಾರ ತೀರ್ಮಾನ ಮಾಡಿಟಕ ಪೋರ.

2. ಮನೆಪೆದ ಇಲ್ಲಾತ ಪ್ರತಿಯೋರ್ ಕುಟುಂಬಕೂ ಪುದಿಯ ಮನೆಪೆದ ಕೊಡ್‌ಕೊಂಡು. ಜಮ್ಮಾತಾಳಕ್ ಆಯಿಂಗ ಉಳ್ಳ ಮನೆಕಾರಡ ಮನೆ ಪೆದ ಕೊಡ್‌ಕೊಂಡು.

3. ಪ್ರತಿಯೋರ್ ಕೊಡವ ಕುಟುಂಬ ಓರ್ ಉಪಜಾತಿ ಸಂಸಾರತ್‌ನ ದತ್ತು ಎಡ್‌ತವಂಡು. ದತ್ತ್ ಎಡ್‌ತಂಡ್ ತಾಂಡ ಸಂಸಾರತ್‌ರ ಕೂಡೇ ತಂಗಡನ್ನಕೇ ಬಾಳಿ ಬದ್‌ಕೊಂಡು.

**ಇದೆಲ್ಲಾ ಆಪಕುಳ್ಳದಾ?**

ಈ ಪ್ರಶ್ನೆ ಬಪ್ಪದ್ ಮಾಮೂಲ್. ಆಚೇಂಗಿ ಇದ್ ಕ್ರಿಸ್ತಾನಿಯಳುಂಡ್ ಆಪ. ಮುಸಲ್ಮಾನಳುಂಡ್ ಆಪ. ಬೋಲೆ ಎಲ್ಲಾ ಜಾತಿಯಳುಂಡ್ ಆಪ. ಇಂದ್ ದಾರ್‌ಕೂ ಬೋಂಡತ ಹರಿಜನಳ, ನಾಳೆಕ್ ಕ್ರಿಸ್ತಾನಿಯಳಾಕಿಯಂಡಕ ಅವು ಅಯಿಂಗಕ್ ಸರಿಸಮಾನ. ಅನ್ನನಿಪ್ಪಕ ಕೊಡವಡಲ್ಲಿ ಸಾಧ್ಯ ಆಪುಲೆ ಎಣ್ಣುವದ್ ಅರ್ಥ ಇಲ್ಲಾತದ್.

ಪಂಡ್ 1940ತ್‌ಂಜ 1960 ಂಗೆತ್ತಣೆ ಕೊಡಗ್‌ರ ಒಟ್ಟು 12 ಬೋರೆ ಜಾತಿರ ಒಕ್ಕಕಾರ ಕೊಡವ ಮನೆಪೆದ ಇಟ್ಟಂಡ್ ತಂಗಡ ಇಷ್ಟತ್ ಕೊಡವಳಾಚಿ. ಕಾಲ ಪೋನನ್ನಕೇ ಅವು ಕೊಡವಡೊಳ್‌ಲೇ ಮಂಗಲ ಆಯಂಡ್ ಎಲ್ಲಾ ತರತ್‌ಲೂ ಕೊಡವಡ ಸರಿ ಸಮಾನತೆಕ್ ಬಾತ್. ಇಂದ್ ಅದ್‌ನೆಲ್ಲ ಮರ್‌ಂದ್ ಪೋಯಿತ್. ಅನ್ನನೇ ಕಾಲ ಐಂಬದ್ ಕಯಿಂಜಿತ್. ಇನ್ನನಿಪ್ಪಕ ಕೊಡವ ತಕ್ಕ್ ಕೊಡವ ಪದ್ಧತಿ, ಸಂಸ್ಕೃತಿಲೇ ಬೊಳ್‌ಂದಯಿನ ಕೊಡವಳಾಕಿಯವದ್ ಕಯ್ಯಿತ ಸಂಗತಿಯಾ....?

❖ ❖ ❖

# ಕೊಡಗ್‌ರ ವೀರ ಪರಂಪರೆ

ಕೊಡಗ್ ಕುಡುಮಲೆನಾಡ್, ಅಗಸ್ತ್ಯಂಡ ತಪೋವನ ಕಾವೇರಮ್ಮೆನ ತಾಮನೆ. ಬ್ರಹ್ಮಾದಿ ದೇವತೆಯಳೇ ಪ್ರಕೃತಿರ ಚಾಯಿನ ಕಂಡಿತ್, ಮನ ಚೋತಿತ್, ನೆಲೆ ನಿಂದಿತ್, ತಪಸ್ಸ್ ಮಾಡ್‌ನ ಭೂಲೋಕತ್‌ರ ಸ್ವರ್ಗ. ಪಶ್ಚಿಮ ಘಟ್ಟಸಾಲ್‌ಲ್ ಜನವಸತಿವುಳ್ಳ ಓರ್ ಚೆರಿಯ ಪ್ರತ್ಯೇಕ ಪ್ರದೇಶ. ಪ್ರಪಂಚತ್‌ರ ಏದೇ ದೇಶತ್‌ಂಜಿ ಜನ ಭಾರತಕ್ ಬರಡ್, ಅಯಿಂಗಕ್ ಈ ಕೊಡಗ್ ಸೀಮೆರ ಕೇಳಿ ಗೊತ್ತಾಯಿ ಪೋಪ. ಅನ್ನನೆ ಕೊಡಗ್‌ಕ್ ಬಂದವು ಈ ಕೊಡಗ್ ಎಲ್ಲಾ ತರತ್‌ಲೂ ಭಾರತತ್‌ರ ಬೋರೆಲ್ಲಾ ಪ್ರದೇಶಕ್‌ಂಜಿ ವಿಶೇಷವಾನದ್‌ಂದ್ ಅರ್‌ಂಜಿತ್ ಪರ್‌ಂದಿತ್. ಎಳ್‌ದಿ ಬೆಚ್ಚಿತ್ ಪೋಪದುಳ್ಳದ್.

ಕೊಡಗ್‌ರ ಮೂಲನಿವಾಸಿಯು ಕೊಡವ. ಇದ್‌ಲ್ ಬೋರೆ ಬೋರೆ ಮೂಲನಿವಾಸಿಯ ಅಡ್‌ಂಗಿತುಂಡ್. ಕೊಡವ ಓರ್ ವಿಶೇಷಕ ಜನಾಂಗ. ಈ ಕೊಡವ ಎಲ್ಲ್‌ಂಜಿ ಬಂದ್ ಕೂಡ್‌ನವೂಂದ್ ಮಂಡೆ ಮಾಂದಿಯಂಡವು ಉಂಡ್. ಕೊಡವಡ ಮೂಲ ಕಂಡ್ ಪುಡಿಪಕ್ ವ್ಯರ್ಥ ಪ್ರಯತ್ನಪಟ್ಟವು ಉಂಡ್. ಅನರ್ಥ ಸಿದ್ಧಾಂತ ರೂಪ್‌ಚಿಟ್ಟವು ಉಂಡ್. ಇಲ್ಲಾತ ಕರ್ತ ಪೂಂಞ್‌ನ, ಇರ್‌ಟ್ ಕೋಂಬರೆಲ್, ಮುಟ್ಟಿರ್‌ಟ್ ನೇರತ್‌ಲ್ ತೇಡ್‌ನನ್ನೆಕೆ ಈ ಪ್ರಯತ್ನ.

**ಕೊಡವ ದಾರ್:-** ಕೊಡವ ಆಚಾರ ಪದ್ಧತಿ-ಪರಂಪರೆಲ್ ಹಿಂದೂಜನ ಆಚೇಂಗಿ, ನೇರಾಯಿತೂ ಅಲ್ಲ. ಕೊಡವ ಬೋರೆ ಏದ್ ಜಾತಿಕೂ ಅಡ್‌ಂಗತೆ, ಏದ್ ಮತಕೂ ಒಳಪಡತೆ, ಕುಂದ್ ಸೀಮೆರ ಓರ್ ಪಳಿಯ ಚೆರಿಯ ವಿಶಿಷ್ಟ ಮೂಲ ನಿವಾಸಿಯ. ಆ ಧರ್ಮ, ಈ ಧರ್ಮ ಎಣ್ಣುವ ನೆತ್ತಿ ಪಟ್ಟಿ ಬೆಚ್ಚವತೆ, ತಂಗಡದೇ ಪ್ರತ್ಯೇಕ ಸಂಸ್ಕೃತಿನ ದೃಢವಾಯಿತೂ, ಉತ್ಸಾಹತ್‌ಲೂ ಪೋತಿಯಂಡ್ ಬಂದ ಚೆರಿಯ ಜನಾಂಗ ಪಟ್ಟಮಡ ಸಂಸ್ಕೃತಿ ಪಿಂಞ ಸಾಹಿತ್ಯಕ್ ಇಕ್ಕಿಕ್ಕ ಕೊಡವ ಸಂಸ್ಕೃತಿ ಹೋಲಿಕೆ ಉಳ್ಳನ್ನಕೆ ಕಂಡ್ ಬಂದಕಲೂ, ಮೂಲತ್ ಕೊಡವ ಮಣ್ಣ್‌ಲ್ ಉತ್ತ್ ಕಳತ್ ನಯಿಪವು. ಕಾಡ್‌ಜಾತಿಯಳ ಬೋಟೆ ಆಡುವವು ಪಿಂಞ ಪಡೆಯಾಳಿಯ. ಅನ್ನನೆ ಕೊಡವ ಓರ್ ಗತ್ತ್‌ರ ಜನಾಂಗ.

ಕೊಡವ ತಂಗಡ ಬಾಳ್‌ಲ್ ಎಚ್ಚಕೋ ಪಟ್ಟಮಡ ಸಾಹಿತ್ಯ ಹಿಂದೂ ಪುರಾಣ, ಭಗವದ್ಗೀತೆ ಇನ್ನತಾನೆಲ್ಲ ಓದಿ ಪಡ್‌ಚಕಲೂ ಅಯಿಂಗಡ ನೇರಾನ ಜೀವನ ಕ್ರಮಕ್ ಇದ್ ಒಂದೂ ಬೋಂಡೂಂದ್ ಇಲ್ಲೆ. ಕೊಡವಕ್ ಅಯಿಂಗಡದೇ ಆನ ಪದ್ಧತಿ, ಆಯಿಮೆ ಕೋಯಿಮೆ ಉಳ್ಳದ್ ಎಚ್ಚಕೋ ಕಾಲತ್‌ಂಜಿ ಪೊರಮೆ ಜನಡ ಪ್ರಭಾವಕ್ ಒಳಪಡತೆ

ಬೋರೇ ಆಯಿತ್ ಬೊಳ್‌ಂದಿತ್ ಬಂದಿತ್.

ಕೊಡವ ಎಲ್ಲ್‌ಂಜಿ ಬಂದವು ಎಣ್ಣುವಾಂಗ್ ಓರೇ ಉತ್ತರ ಉಳ್ಳೋ - ಅದೇ, ಕೊಡವ ಬೋರೆ ಎಲ್ಲಿಂಜೂ ಬಂದವು ಅಲ್ಲ. ಅವು ಈ ಕೊಡಗ್‌ರ ಮಣ್ಣ್‌ರ ಮಕ್ಕ. ಕ್‌ರ್‌ಮಕ್ಕ, ಮರ್‌ಮಕ್ಕ. ಅವು ಲೆಕ್ಕ ಇಲ್ಲತಚ್ಚಕ್ ಕಾಲತ್‌ಂಜಿ ಇಲ್ಲಿಯತ್‌ರ ಕುಂದ್ ಕಾಡ್ ತಟ್ಟ್ ಸೀಮೆಲ್ ಎಣ್ಣ್‌ನಕ ಕಾವೇರಿಪೊಳೆರ ದಂಡ್ ಬರಿಲೂ ಪುಟ್ಟಿಬದ್‌ಕಿ ಬಾಳ್‌ನವು. ಅಯಿಂಡ ಮಾನವೀಯ ಲಕ್ಷಣ ಹೋಲಿಕೆ ಕ್ರಮೇಣ ರೂಪ್ ಎಡ್‌ತದ್. ಮೂಲತ್ ಅವು ಈ ಮಣ್ಣ್‌ರ ಮುತ್ತಜ್ಜ ಮೂಲಜ್ಜಂಗಡ ಮಕ್ಕಳೆ.

**ವೀರ ಪರಂಪರೆ:-** ಈ ಚೆರಿಯ ಸಂಖ್ಯೆರ ಜನಾಂಗಕ್ ಓರ್ ವಿಶೇಷ ವೀರ ಪರಂಪರೆ ಉಂಡ್. ಅಯಿಂಗ ಪುಟ್ಟಿತ್ ಚಾವಲ್ಲಿಕೆತ್ತಣೆ ಅಯಿಂಗಡ ಜೀವನ ಕ್ರಮತ್‌ಲೇ ನೆಜ್ಜಂಡ್ ಬಂದ್ ಪೋನ ವೀರ ಪರಂಪರೆ ಎನ್ನ್‌ಂಗ್ ಬಾತ್, ಎನ್ನನೆ ಬಾತ್, ಎಕ್ಕ ಬಾತ್ ಎಣ್ಣುವಾಂಗೆಲ್ಲ ಉತ್ತರ ಸುಲಭ. ಪ್ರಕೃತಿರ ಕೂಡ ಬಾವಕ ತಾಂಡ ಪರಿಸರಕ್ ತಕ್ಕಂತ ಪರಿಸ್ಥಿತಿ ರೂಪ್ ಎಡ್‌ಪದೆ ಪ್ರಕೃತಿ ಧರ್ಮ. ಪ್ರಾಣಿಯ ಅಯಿಂಡಯಿಂಡ ಜೀವರಕ್ಷಣೆ ಮಾಡಿಯವಕೂ, ಆಹಾರ ಸಂಪಾದನೆಕೂ ಬೋಂಡಿಯಾನ ಹುಟ್ಟು ಗುಣ ಇಪ್ಪ. ಅನ್ನನೇ ಕೊಡವಡ ಜೀವನ ಕ್ರಮವೂ ಪ್ರಕೃತಿಕ್ ಒತ್ತಾಯಿತ್ ವಿಕಾಸ ಆಯಿತ್. ಅನ್ನನೆ ಮಾನವ ಸಹಜವಾನ ಬುದ್ಧಿ ಕೊಡವಂಗೂ ಇಂಜತ್. ಅದ್‌ಂಗ್ ಸೆರಿಯಾಯಿತ್ ಅಂವೊ ತಾಂಡ ಜೀವನ ಕ್ರಮತ್‌ನ ರೂಪ್‌ಚಿಟ್ಟಂಡತ್.

**ಕುಂಞಿ ಪುಟ್ಟುವಕ:-** ವೀರಪರಂಪರೆಲ್ ಪುಟ್ಟಿತ್ ಚಾವಲ್ಲಿಕೆತ್ತಣೆ ಮೊಟ್ಟ್ ಮೊಟ್ಟ್‌ಲೂ ಕಂಡ್ ಬಪ್ಪ. ಕುಂಞಿನ ಪೆತ್ತಿತಾಪಕ ಅದ್ ಕ್‌ಣ್ಣ ಕುಂಞೀಂದಾನಕ ವೀರನೊಬ್ಬ ಪುಟ್ಟ್‌ಚೀಂದ್ ಬೊಡಿ ಬೆಚ್ಚಿತ್ ಲೋಕಕ್ ಸಾರುವ. ಓರ್ ನಕಲಿ ಅಂಬ್‌ಬಿಲ್ಲ್ ಮಾಡಿತ್ ಈ ಕುಂಞಿರ ಕೈಕ್ ಪುಡ್‌ಪ್‌ಚಿಡುವ. ತಾಂಡ ಆಹಾರ ಸಂಪಾದನೆಕೂ, ದೇಹರಕ್ಷಣೆಕೂ, ದೇಶರಕ್ಷಣೆಕೂ ಕತ್ತಿ-ತೋಕ್, ಬಿಲ್ಲ್ ಬಾಣತ್‌ರನ್ನತ ಆಯುಧ ಅನಿವಾರ್ಯಂದ್ ಎಣ್ಣುವ ಸತ್ಯತ್‌ನ ಸಾರುವಕಾಯಿತ್ ಈ ತರ ಪದ್ಧತಿ ಬಂದಿತ್. ಕುಂಞಿರ ಬಾಯಿಕ್ ಬೆಲ್ಲ, ನೆಯ್ಯ್, ತೀತುವ. "ಬೆಲ್ಲ ಅಲಿವೆನ್ನಕೆ ಅಲಿ ನೆಯ್ಯಿ, ಉರುವನ್ನಕೆ ಉರ್"ಂದ್ ಅಶೀರ್ವಾದ ಮಾಡುವ. ಅದ್‌ಂಡ ಅರ್ಥ - ಜೀವನತ್‌ಲ್ ಬಪ್ಪ ಕಷ್ಟತ್‌ನೆಲ್ಲ ಸಹಿಸ್. ಮಳೆಲ್ ಅಯಿಂಜಿತೂ ತೊಯಿಂಜಿತೂ ಬದ್‌ಕ್. ಬೆದ್‌ಲ್ (ಬೊದ್) ಬಾಡಿತೂ, ಉರಿತೂ ಬದ್‌ಕ್‌ಂದೂ ಎಣ್ಣುವ.

**ಕಳಿ ತೆಳಿ:-** ಕುಂಞಿ ಬೊಳ್‌ಂದಂಡ್ ಬಪ್ಪಕಲೂ ತಡಿನ ಗಟ್ಟಿ ಮುಟ್ಟಾಯಿತ್ ಬೊಳತುವಕುಳ್ಳಂತ, ನೊಂಬಲ ಸಹಿಸುವಕ್ ಉಳ್ಳಂತ, ಗರ್ವ, ಪುಟ್ಟುವಕುಳ್ಳಂತ, ಶತ್ರುನ ಅಡುಕುವಕ್ ಉಳ್ಳಂತ ಕಳಿಯೇ ಚೆರ್‌ಪತ್‌ಂಜಿ ಈ ಕೊಡಗ್‌ರ ಮಕ್ಕಕ್ ತಂಗಡ

ಚೋರೆಲೇ ಬಂದ್ ಪೋಯಿತ್.

ಕೊಡಗ್‌ರ ಮಕ್ಕಡ ಕೈಲ್ ಚೆರ್‌ಪತ್‌ಂಜೇ ತಟ್ಟೆ, ಬಿಲ್ಲ್, ಕವಣೆ, ಕಲ್ಲ್, ರಬ್ಬರ್ ಬಿಲ್ಲ್‌ನಂತ ಆಯುಧ ಇಪ್ಪ. ಚೆನ್ನ ಬಲ್ಯಾದಾಯಂಡ್ ಬಂದನ್ನಕೆ ಕತ್ತಿ ತೋಕ್‌ಲೇ ಮಕ್ಕಡ ಕಳಿ. ಇದ್ ಅಪ್ಪವ್ವ ಎಣ್ಣೆ ಕೊಡ್‌ಪದಲ್ಲ. ದೈವ ದತ್ತವಾಯಿತ್ ಬಂದ ಗುಣ. ಅದ್.. ಪ್ರಾಣಿ ಪಕ್ಷಿಯಳ ತಾಂಡ ಆಹಾರಕಾಯಿತ್ ಕೊಲ್ಲುವಕ್ ಆ ಕುಂಞಿಕ್ "ಅಯ್ಯೋ"ಂದ್ ಕನಿಕರ ಬಪ್ಪ್‌ಲೆ. ಚೋರೆ ಕಂಡಕ ನೆಟ್ಟುಲೆ. ತಾನ್ ಮಾಡ್‌ನ ಪರಾಕ್ರಮಕ್ ಕುಶಿಪಡುವ.

**ನರಿಮಂಗಲ:-** ಇದ್ ಕೊಡಗಲ್ ಮಾತ್ರ ಉಳ್ಳಂತ ಓರ್ ವೀರ ಪರಂಪರೆ ಆಚರಣೆ. ಕುಸ್ತಿ, ಪರಿಯಕಳಿ, ಸೂರ್ತಿಕಳಿ, ತೆಂಗೆಪೋರ್ - ಇದೆಲ್ಲ ಕೊಡವ ಮಕ್ಕಡ ಚೆರ್‌ಪತ್‌ರ ಕಳಿ. ಈ ತರತ್‌ರ ಕಳಿರ ಪೈಕಿ, ಕುಸ್ತಿ ಮಾತ್ರ ಬೋರೆಲ್ಲಾ ಜಾಗತ್‌ಲೂ ಕಾಂಬ. ಆಚೇಂಗಿ ಬಾಕಿ ಉಳ್ಳ ಕಳಿಯೆಲ್ಲ ಕೊಡಗ್ ಅಲ್ಲತೆ ಬೋರೆಲ್ಲಿಯೂ ಕಾಂಬ್‌ಲೆ. ಇನ್ನತ ಕಳಿ ಅಯಿಂಗಡ ವೀರ ಪರಂಪರೆಕ್ ಸೆರಿಯಾನದ್. ಮಕ್ಕ ಬೊಳಂದಂಡ್ ಬಂದನ್ನಕೆ ಊರ್‌ಕೇರಿಲ್ ಸಭೆ ಸಮಾರಂಭತ್ ಕೂಡ್‌ನಲ್ಲಿಯೂ ಅಯಿಂಗಡ ಕಳಿಯೇ ಬೋರೆ.

**ಶಕ್ತಿಕೋಲ್:-** ಸಮಶಕ್ತಿರ ದಂಡ್ ಬಾಲೆಕಾರ ನೆಲತ್‌ಲ್ ಕಾಲ್ ನ್‌ಟಿ ಅಳ್‌ತಂಡ್ ಅಪ್ಪರಿಪ್ಪರ ಅಂಗಾಲ್‌ಕ್ ತಾಕ ಕೊಡತಿತ್, ಓರ್ ತಂಡ್‌ನ ದಂಡಾಳು ಬಲಿಕಂಡು. ಅಳತಲ್ಲ್‌ಂಜಿ ನೇಂದ್ ಪೋನಂವೊ ಚೋತನ್ನಕೆ.

**ಭಾರ ನೇತುಪೋ:-** ಇಕ್ಕಲೂ ಊರ್‌ರ ಅಂಬಲತ್‌ಲ್, ಮಂದ್‌ಲ್, ತಿರ್‌ಕೆಲ್ ಎಲ್ಲ ಬೋರೆ ಬೋರೆ ಸೈಜ್‌ರ ಉರ್‌ಟ್ ಪೊಳೆಕಲ್ಲ್ ಕಂಡ್ ಬಪ್ಪ. ಬಲ್ಯ ಕಲ್ಲ್‌ನೆಲ್ಲ ಇಕ್ಕ ನಾಲಾಳ್ ಕೆಟ್ಟಿ ಪೊರ್‌ಕಂಡು. ಪಂಡ್ ಏದೇದ್ ಕಲ್ಲ್‌ನ, ಏದೇದ್ ತರತ್‌ಲ್ ನೇತಿತ್ ಗಟ್ಟಿಗತನ ಕಾಟ್‌ನವು ದಾರ್‌ಂದ್ ಅಯಿಂಗಡ ಪೆದ ಎಲ್ಲ ಇಕ್ಕಲೂ ಜನಡ ನಾವುಲ್ ಉಂಡ್. ಅದ್‌ನ ಗೇನ ಮಾಡುವಕ ಅಂದೇತ ಜನ ಎಚ್ಚಕ್ ಶೂರಂಗಾಯಿತಿಂಜಿತಿಕ್ಕೂಂದ್ ಅರ್ಥ ಆಪ.

**ಒತ್ತೆ ಪೊಯ್ತ್:-** ಕೊಡವ ವೀರಂಗಡ ವೀರ ಪರಂಪರೆಕ್ ನಲ್ಲೋರ್ ಉದಾರಣೆ ಈ ವಿಚಿತ್ರ ಕಳಿ. ಇದ್ ಊರ್ ಊರ್‌ರೊಳ್‌ಲ್, ನಾಡ್ ನಾಡ್‌ಳ್‌ಲ್ ದಂಡ್ ವೀರಂಗಕ್ ನಡ್‌ಪ. ಪೈಪೋಟಿ. ಇದ್‌ಲ್ ಒಬ್ಬೊ ಅಂವಂಡ ಎದ್‌ಪಾಳ್‌ನ ಓರೇ ತಲ್ಲ್‌ಕ್ ಕೊಯಿಕಂಡು. ಕೊಂದಕಲೂ ಆಕು, ಸೊಯ ತಪ್ಪಿತ್ ಬುದ್ಧಕಲೂ ಆಕು. ದಂಡನೆ ಪೊಯ್ತ್ ಮಾತ್ರ ಪೊಜ್ಜಿರುವ ಕಯ್ಯ. ಇನ್ನತ ಗಟ್ಟಿಗಂಗಳ ಆಂಜಿತ್ ಓರ್ ಊರ್‌ಕಾರ ಇಂಞೋರ್ ಊರ್‌ಕಾರಕ್ ಸವಾಲ್ ಇಡುವಕ್ ಗೊತ್ತ್‌ಮಾಡ್‌ನ ದಿನ ಕೊಂಬ್ ಕೊಟ್ಟ್ ಓಲಗ ಆಯ್ತ್ ಒತ್ತೆ ಪೊಯ್ತ್‌ಕಾರನ ಕೂಟೆಯಂಡ್ ಪೋಪ. ಅಕ್ಕ ಆ ಊರ್‌ರ ವೀರನೂ ಕೊಂಬ್ ಕೊಟ್ಟಾಯಿತ್ ಪಾರ ಕಾತಂಡಿಪ್ಪ. ಅಪ್ಪರಿಪ್ಪರ ಬೆಂದುತಕ್ಕಾರ

ಆಪಯಿಂಜತ್. ಕೂಡ್‌ನ ಜನಡ ಮಿಂಞಲ್ ದಂಡ್ ವೀರಂಗ ಎಲ್ಲಾ ತರತ್‌ರ ಆಟ್ ಆಡಿಯಂಡ್ ಇರಂಡು. ಪೊದ ಕ್‌ಟ್ಟುವ ಏದೇಂಗೋರ್ ಕೆಣಿ ಪಾಯ್‌ಚಿಟ್ಟಿತ್, ಆಯ ನೋಟಿತ್ ಅಡ್ಡಿ ಬೆಕ್ಕಂಡು. ಅದ್ ಒರೇ ತಲ್ಲ್‌ಲ್ ಎದ್‌ಪಾಳ್ ಉರ್‌ಂಡಂಡು. ಒರ್ ಊರ್‌ಲ್ ಗೆದ್ದ ಚಾಂಪಿಯನ್‌ನ ಇಂಞ್‌ಓರ್ ಊರ್‌ಕ್ ಕಾಕ್‌ಚಿಟ್ಟವಯಿಂಜತ್. ಇಕ್ಕ ಇನ್ನತ ಕಳಿಕೆಲ್ಲ ಅವಕಾಶ ಇಲ್ಲೆ. ಪಂಡ್ ಎಲ್ಲಾ ನಾಡ್‌ಲ್ ಚಾಂಪಿಯನ್‌ಶಿಪ್ ಎಡ್‌ತಂಪೊ ಕೈಯಂದಿ ಅಪ್ಪಯ್ಯಂದ್ ಎಣ್ಣುವ ಜಾನಪದ ಕತೆ ಜನಡ ಬಾಯಿಲುಂಡ್.

**ಪರೆಯ ಕಳಿ:-** ಇದೂ ದಂಡ್ ಪಡೆಯಾಳಿಯಡ ಪೊಯ್ತ್ ಕಳಿರ ಪ್ರದರ್ಶನ.

**ಬಾಳೆ ಬಿರ್‌ದ್:-** ಮಂಗಲತ್‌ಲ್ ಬಾಳೆ ಕೆತ್ತಿತ್ ಶೌರ್ಯ ಪ್ರದರ್ಶನ ಮಾಡುವದೂ ವೀರ ಪರಂಪರೆನ ಪ್ರತಿಬಿಂಬ್‌ಚಿಡುವ ಒರ್ ಪ್ರದರ್ಶನ.

ಜಾನಪದ ಕತೆಯಾಡ್, ಜಾನಪದ ಪಾಟಾಡ್ ಪ್ರತಿಯೊಂದೂ ವೀರ ಪರಂಪರೆರದ್. ಕೊಡವಡ ಸಾಮಾಜಿಕ ಪಿಂಞ ಧಾರ್ಮಿಕ ಸಮಾರಂಭತ್‌ಲೆಲ್ಲ ತೋಕ್‌ಕತ್ತಿರ್ ಪ್ರಾಧಾನ್ಯತೆ. ಮಂಗಲಕಾರನ ಪೊರಡ್‌ಚಿಡಂಡಿಕ್, ಒಡಿಕತ್ತಿ, ಪೀಚೆಕತ್ತಿ, ಗೆಜ್ಜೆತಂಡ್ ಪಿಂಞ ಕತ್ತಿನ ಕೆಣ್‌ಚಿ ಬೆಚ್ಚವಕುಳ್ಳ ಅರೆತೊಡಂಗ್ ಇಕ್ಕಲೂ ಇಂಜಿತೇ ಇರಂಡು. ಈ ಕೊಡಗ್‌ರ ಜನ ವೀರಂಗಳೆನ್ನೋ ಸೆರಿ; ಆಚೇಂಗಿ, ಬೋರೆ ಜನಳೆನ್ನಕೆ ಕುರ್ಕಕಣಿ ಅರಿಯತೋರ್ ಜನಾಂಗ. ಇಂದೇಕೂ ಕೊಡವಡಲ್ಲಿ ಆ ತರ ಮುಗ್ಧತೆ ಎದ್ದ್ ಕಾಂಬ. ಪೊರಮೆರ ಜನಡ ಚದಿಕ್ ಬೆರಿಯ ಕೆಣೆಂಜವ. ವೀರತನಕ್ ಸರಿಸಮಾನತ್‌ರ ಕೆಣಿ ಇಂಜಿತಿಂಜಕ ಪಂಡ್ ಕೊಡಗ್‌ರ ಕೊಡವಳೆಲ್ಲ ಟಿಪ್ಪುರ ಕೆಣಿಕ್ ಕೆಣಿವಕಿಂಜ್‌ಲೆ. ಕೊಡಗ್‌ರ ಜನ ನಾಶ ಆಪಕಿಂಜ್‌ಲೆ.

ಕೊಡವತಕ್ಕ್‌ಲ್ ವೀರಂಗಡದೇ ಕತೆ ಉಳ್ಳನ್ನಕೆ ಪೆರ್ತ್ ಸಂಖ್ಯೆರ ಗಾದೆಯಳೂ ಉಂಡ್ - ಆಣ್ ಪೊತ್ತಿತ್ ಚಾವಂಡು ಪೊಣ್ಣ್ ಪೆತ್ತಿತ್ ಚಾವಂಡು; "ಆಣ್‌ಕ್ ಬೋರೆ ಇಲ್ಲೇಂಗಿ ಪೊಣ್ಣ್‌ಕ್ ವರ್ಕ ಇಲ್ಲೆ" ಇನ್ನತದ್.

**ವೀರಪರಂಪರೆಕ್ ಚಾರಿತ್ರಿಕ ಆಧಾರ:-** ಪಳೆಯ ಕನ್ನಡ ರೆಕಾರ್ಡ್‌ಲ್ ಕೊಡವ ಕೇಳಿಪಟ್ಟ ಪಡೆಯಾಳಿಯಾಂದ್ ಉಂಡ್. ಲಿಂಗಾಯತ ರಾಜಂಗಡ ಗಡಿ ರಕ್ಷಣೆ ಕೊಡವಳಗುಂಡೆ. 12ನೇ ಶತಮಾನತ್‌ಲ್ ಪಾಲ್ಪರೆ ಎಣ್ಣುವ ಪಡೆ, ಭೂಮಿಲ್ ವೀರ ಕೊಡವ ಶತ್ರುಪಡೆನ ದವುತ್‌ನ ದಾಖಲೆ ಉಂಡ್. 1760ನೇ ಇಸವಿಲ್ ಕೊಡಗ್‌ನ ಪುಡಿಪಕ್ ಬಂದ ಹೈದರಾಲಿರ ಬಲ್ಯ ಸೈನ್ಯತ್‌ರ ಪಂಡೇತ ಪಡೆಭೂಮಿ ಪಾಲ್ಪರೆಲ್ ಕೊಡವ ವೀರಂಗ ತಡ್‌ತಿತ್ ಪಡೆ ಪೊತ್ತಿತ್ ಬಯ್ಯಕ್ ದವುತ್‌ಚಿ. ಪುನಃ 1784ಲ್ ಟಿಪ್ಪುರ ಸೈನ್ಯ ಕೊಡಗ್‌ನ ನಾಶ ಮಾಡುವಕ, ಉತ್ತಯ್ಯ ನಾಯಕ ಎಣ್ಣುವವಂಡ ಕೂಡ ಕೊಡವ ಮುಖಂಡಂಗ ಶ್ರೀರಂಗಪಟ್ಟತ್‌ರ ಬ್ರಿಟಿಷ್ ರೆಸಿಡೆಂಟ್‌ನ ಕಂಡಿತ್ ಕೊಡಗ್‌ಕ್ ಸಹಾಯ ಮಾಡುವಕ್ ಕೇಟಂಡತ್. ಅನ್ನನೆ ತಲಚೇರಿಲಿಂಜ ಬ್ರಿಟಿಷಳೋ ಕಂಡಿತ್ ಸಹಾಯ

ಕೇಟತ್. ಅಕ್ಕ ಕೊಡಗ್‌ಕ್ ಬಂದ ದಂಡ್ ಬಾಲೆಕಾರ ಬ್ರಿಟಿಷ್ ರೆಸಿಡೆಂಟ್ಸ್‌ಲಿ ರಾಬರ್ಟ್ ಟೇಲರ್ ಪಿಂಞ ಕ್ಯಾಪ್ಟನ್ ಡೇನಿಸ್ ಮೊಹೊನಿ. ಈ ಡೇನಿಸ್ ಮೆಹೂನಿ ಕೊಡಗ್‌ರ ವೀರ ಪರಂಪರೆನ ಅರ್‌ಂಜಿತ್ ಕೊಡಗ್ ಚರಿತ್ರೆನ ಅಭ್ಯಾಸ ಮಾಡ್‌ಚಿ. ದೊಡ್ಡ ವೀರರಾಜಂಡ ಕೂಡ ನಾಲ್‌ನಾಡ್ ಅರಮನೆಲ್ ಇಂಜಂಡ್, ನಲ್ಲ ನಲ್ಲ ಪಡಿಪ್‌ಕಾರಳ ಕಾಕ್‌ಚಿಟ್ಟಂಡ್ ಅಭ್ಯಾಸ ಮಾಡ್‌ಚಿ. ಕೊಡಗ್ ಚರಿತ್ರೆನ ಎಳ್ತ್‌ರೂಪತ್‌ಲ್ ಪೊರಬೂಕ್‌ನ ಆದ್ಯ ಇತಿಹಾಸಕಾರನೆ ಡೇನಿಸ್ ಮೆಹೊನಿ. ಇಂವೊ "ಕೊಡವ ಓರ್ ವಿಶೇಷ ಜನಾಂಗ" "(Kodavas a distinct people") ಎಣ್ಣಿತ್ ಪ್ರಪಂಚಕ್ ಪರಿಚಯ ಮಾಡ್‌ಚಿ. ಇದೇ ಮೆಹೋನಿ ಇಡೀ ಕೊಡಗ್‌ರ ಚರಿತ್ರೆನ ಎಳ್‌ದಿತ್ ಕಲ್ಕತ್ತತ್‌ರ ಫೋರ್ಟ್ ವಿಲಿಯಂಲಿಂಜ ಇಂಡಿಯಾ ಸರಕಾರಕ್ 23.6.1798ಲ್ ಅಯೆಚಿ ಕೊಡತತ್. ಆರಿಪೋರ್ಟ್‌ಲ್ ಉಳ್ಳ ಚೆನ್ನಂಗ್ ವಿಚಾರ ಇನ್ನನೆ ಉಂಡ್-

"ಕೊಡಗ್‌ನ ಪುಡಿಪಕ್ ಕೇರಳತ್‌ರ ಕೋಟೆ ರಾಜನೂ, ಚೆರಕಲ್ ರಾಜನೂ, ವೈನಾಡ್‌ರ ಕಾಲ್ಪಟ್ಟಿ ರಾಜನೂ, ಪಡೆಪೊತ್ತತ್, ಕೊಡವ ವೀರಂಗ ಪಡೆಪೊತ್ತಿತ್ ಅಯಿಂಗಳ ದವುತಿರ್‌ತ್".

"ಕೊಡವ ಬೋಟೆಕಾರ ಪಿಂಞ ಪಡೆಯಾಳಿಯ. ಆಚೇಂಗಿ ಅವು ಪಡೆಪೊಪ್ಪ ಏದೋರ್ ಪ್ರತಿಫಲಕ್ ಅಲ್ಲ. ಅದ್ ದೇಶಕ್ಕಾಯಿತ್ ಓರ್ ತ್ಯಾಗಾಂದ್ ಅರ್‌ಂಜಂಡವು - 1837ನೇ ಇಸವಿರ ಕೆನರಾ ದಂಗೆಲ್ ಅವು ಕಾಟ್‌ನ ಶೌರ್ಯಕ್ಕಾಯಿತ್, ಅಯಿಂಗಕ್ ಬಹುಮಾನ ತಪ್ಪಾಂದ್ ಎಣ್ಣ್‌ಚಿ. ಆಚೇಂಗಿ ಕೊಡವ -"ನಂಗ ಕೊಡವಕ್ ನಿಂಗಡ ಸಂಬಳ ಬೋಂಡ. ನಂಗಡ ದೇಶತ್‌ಲ್ ಶಾಂತಿ ನೆಲೆಗೊಳ್ಳಡ್‌ಂದ್ ನಂಗಡ ಕರ್ತವ್ಯ ಮಾಡಿಯೆ"ಂದ್ ಬ್ರಿಟಿಷ್‌ಕಾರಕ್ ಉತ್ತರ ಕೊಡತತ್.

ಕೊಡವ ಕೆನರಾ ದಂಗೆನ ಅಡಕುವಕ್ ಮಾಡ್‌ನ ಸಹಾಯಕಾಯಿತ್ ಬ್ರಿಟಿಷ್ ಸರಕಾರ ಚೆನ್ನ ಪಣ ತಪ್ಪಾಂದ್ ಎಣ್ಣಿತ್ ಅಯೆಚತ್. ಕೊಡವಡ ಮುಖಂಡ ಮಂಗಳೂರ್‌ರ ಕಲೆಕ್ಟರ್ 'ಲೆವಿನ್' ಎಣ್ಣುವಂವಂಗ್ ಇನ್ನನೆ ಎಳ್‌ದಿತ್ 5 ಮೇ 1837ಲ್ ಅಯೆಚತ್ - "ದಯಬೆಚ್ಚಿತ್ ಮಾಪ್ ಮಾಡಿ, ನಿಂಗ ಅಯೆಚ ಪಣತ್‌ನ ನಂಗ ಕೇಟಂಡಕ ನಂಗಡ ನೈಪು ಬೆಲೆ ಕಳಂದವ. ನಂಗಡ ದೇಶತ್‌ರ ನಲ್ಲ ಪೆದ ಪಿಂಞ ನಂಗಕ್ ಬೋಂಡಿಯಾನಂತ ಗೌರವ ಎಲ್ಲ ಮುಳಿ ಪೋಪ".

ಕೊಡವ ಎಳ್‌ದಿತ್ ಅಯೆಚ ಪ್ರಕಾರ ಪ್ರತಿಯೋರ್ ಅಕ್ಷರತ್‌ನೋ ಪಾಲನೆ ಮಾಡಿತ್.

ಕ್ಯಾಪ್ಟನ್ ರಾಬರ್ಟ್‌ಕೋಲ್ ಈ ಘಟನೆನ ಅಂವಂಡ ಪುಸ್ತಕತ್‌ಲೂ "ಸೈಕ್ಲೊಪೀಡಿಯ ಆಫ್ ಇಂಡಿಯ" 1885ಲ್ ಇನ್ನನೆ ಎಳ್‌ದಿ ಬೆಚ್ಚಿತ್ - "1837

ಕೆನರಾ ಜಿಲ್ಲೆಲ್ ದಂಗೆ ಆಚಿ. ಒಡನೆ ಕೊಡವ ಅಲ್ಲಿಕ್ ಮಾರ್ಚ್ ಮಾಡಿತ್ ದಂಗೆನ ಅಡಕಿತ್, ದಂಗೆಕೋರಂಗ ಲೂಟಿ ಮಾಡಿತ್ ಪೊರ್‌ತಂಡ್ ಪೋಯಂಡಿಂಜ ಸಂಪತ್ತ್‌ನ ಪುಡ್‌ಚಿತ್ ಬಯ್ಯ್ಕ್ ತಾತ್. ಅದ್‌ಂಗ್ ಮೆಚ್ಚಿತ್ ಈ ಪಣತ್‌ನ ಅಯಿಂಗಳೆ ಹಂಚಿಯವಡ್‌ಂದ್ ಗವರ್ನರ್ ಜನರ್‌ಲ್ ಅಪ್ಪಣೆ ಮಾಡ್‌ಚಿ. ಅಕ್ಕ ಕೊಡವ, ನಂಗ ಪಣಕಾಯಿತ್ ಪಡೆಪೊತ್ತ್‌ವು ಅಲ್ಲಂದೆಣ್ಣಿತ್ ಬಯ್ಯ್‌ಕ್‌ಟ್ಟಿತ್. ಈ ಒರಟ್ ಪಡೆಯಾಳಿಯಡ ಗುಣ ಕಂಡಿತ್ ಬ್ರಿಟಿಷ್ ಸರಕಾರ ಎಚ್ಚರ ಆಯಿತ್ ಜಹಗೀರ್ ಪಿಂಞ ಉಂಬಳಿ ಕೊಡ್‌ತತ್. ಅಯಿಂಡ ಮುಖಂಡಂಗಕ್ ಕುದ್‌ರೆ, ರೈಫಲ್ ಎಲ್ಲಾ ಇನಾಂ ಕೊಡತತ್. ಬಯ್ಯ್ 1857 ಇಂಡಿಯತ್‌ರ ಅಡಿಪಾಯ ಅನ್‌ಂಗಿಯಂಡಿಪ್ಪಕ ಮಾರ್ಕ್ ಕಬ್ಬನ್ ಕೇಟಂಡ ಪೋಲೆ ಓರ್ ಕೊಡವ ಪಡೆ ಕತ್ತಿತೋಕಾಯಿತ್ ಪೆರಿಯಾಪಟ್ಟಣತ್‌ಲ್ ಬಂದ್‌ಗೂಡ್‌ಚಿ - ಈ ಸಂಗತಿನ ಕೇಟಿತಾಪದು ಶ್ರೀರಂಗಪಟ್ಟಣತ್‌ಲ್ ಗಲಾಟೆ ನಡತಿಯಂಡಿಂಜ ಮುಸ್ಲಿಂ ಜನಡ ಸದ್ದಡಂಗಿ ಪೋಚಿ."

ಇನ್ನನೆ ಏದೋರ್ ಪ್ರತಿಫಲಕ್ ಆಸೆ ಪಡತೆ ಪಡೆಪೊಪ್ಪದೇ ತಾಂಡ ಪುಟ್ಟ್‌ಗುಣಾಂದ್ ಆರ್‌ಂಜಿತ್ ತಾಂಡ ದೇಶ ರಕ್ಷಣೆಕಾಯಿತ್ ಪ್ರಾಣ ಕೊಡ್‌ಪ ವೀರಪರಂಪರೆ ಕೊಡವಡದ್.

ಬಲ್ಯ ವಿದ್ವಾಂಸ ಲೆವಿಸ್ ರೈಸ್ ಕೊಡವಳ ಇನ್ನನೆ ಎಳ್‌ದಿತ್ - "ನ್ಯಾಯವಾಯಿತ್ ಈ ನಾಡ್‌ರ ಮಣ್ಣ್ ಅಯಿಂಗಡದೇ. ಅದ್‌ಂಡ ಸ್ವಾಧೀನ ಅಯಿಂಡ ಕೈಂಜಿ ತಪ್ಪಿ ಪೋಚೇಂಗಿ, ಇವು ಸ್ವಾಭಿಮಾನ ಪಿಂಞ ಸ್ವಾತಂತ್ರ್ಯ ಕಳಂದವದೇ ಅಲ್ಲತೆ, ಬ್ರಿಟಿಷ್ ಸರಕಾರ ಇಂತೋರ್ ಪಡೆಯಾಳಿಯಡ ಸೇವೆನೊ ಕಳಂದವಂಡಿಯಾಪ (Should the ownership of the soil which rightly belongs to them (the coorgs or kodavas) as a nation, ever passes away from them, not only the independence and self respect of a race be sacrificed, but the British Government will be deprived of the services of nation of warriors.")

ಅಕ್ಕತ ಮೈಸೂರ್ ರಾಜ್ಯತ್‌ರ ಬೆಂಜಮಿನ್ ಎಲ್ ರೈಸ್ ಕೊಡಗ್‌ನ "ಪಡೆಯಾಳಿಯಡ ದೇಶ"ಂದ್ ಎಣ್ಣಿತ್. ಪುಟ್ಟ್‌ನ ಮಣ್ಣ್‌ನ ಬುಟ್ಟಿತ್ ಪೊರಮೆ ಪೋಪಕ್ ಇಚ್ಛೆ ಪಡುವಯಿಂಗಕ್ ಕೊಡ್‌ತ ಎಚ್ಚರ ಅದ್.

ಆಲಿವರ್ ಗೋಲ್ಡ್‌ಸ್ಮಿತ್ ಕವಿ ಇನ್ನನೆ ಎಣ್ಣಿತ್. - "ವೀರ ರೈತಂಗಳೆ ಓರ್ ದೇಶತ್‌ರ ಗತ್ತ್, ಅವು ನಾಶ ಆಯಿಟಕ ದೇಶಕೇ ಕುತ್ತ್" ಇದ್‌ನೇ ಬಿ.ಎಲ್.ರೈಸ್ ಕೊಡವಡ ವಿಚಾರತ್‌ಲೂ ಎಣ್ಣಿತ್.

1920ನೇ ಇಸವಿಲ್ ಕೊಡಗ್ ಕಮಿಷನ್‌ರ್ ಅಧಿಕಾರಿ ಆಯಿತಿಂಜ ಓರ್ ಬಲ್ಯ

ಎಳ್‌ತ್‌ಕಾರನೂ ಆನ ಹಿಲ್ಬನ್ ಬ್ರೌನ್ ಕೊಡವಡ ವಿಚಾರತ್‌ಲ್ ಸ್ಕಾಟಿಷ್ ಜರ್ನಲ್ (Scotish Journal)ಲ್ ಇನ್ನನೆ ಎಳ್‌ದ್‌ಚಿ -

"ಕೊಡವಡ ಸ್ಕಾಟ್‌ಲೇಂಡ್‌ರ ಹೈಲೇಂಡ್ ಜನಕ್ ಹೋಲ್‌ಚಿಟ್ಟ್‌ಕ, ಕೊಡವತಿಯ ಅಯಿಂಗಕ್ ಸೆರಿಯಾನ ಜೋಡಿಯು. ಅಯಿಂಡ ಪೊಡಿಯು ಪಿಂಞ ಜಾಕೀಟ್ ರಂಗ್‌ರಂಗಾಯಿತ್ ಇಪ್ಪ. ಮಂಡೆಕೋರ್ ವಸ್ತ್ರ ಕೆಟ್ಟ್‌ನದ್ ಏದ್ ಮಂಡೆಕೂ ಚಾಯಿನ ದುಂಬ್‌ಚಿಡುವ."

"ಕೊಡಗ್‌ನ ಸ್ಕಾಟ್‌ಲೇಂಡ್‌ಕ್ ಹೋಲ್‌ಚಿಡುವಾತ್ ದುಂಬ ಅರ್ಥ ಉಂಡ್. ದಂಡಾಲೂ ಶ್ರೇಷ್ಠವಾನ ಪಿಂಞ ರಾಜ ನಿಪ್ಪಕ್ ಯೋಗ್ಯವಾನ ಎತ್ತರ ಸೀಮೆ ಉಂಡ್. ಗಟ್ಟಿಮುಟ್ಟಾನ ಕುಂದ್ ಸೀಮೆರ ಪಡೆಯಾಳಿ ಜನ ಉಂಡ್. ದಂಡಾಲೂ ತಟ್ಟೊತ್ತ ಕುಂದ್‌ಕ್ ಬಟ್ಟೊತ್ತ ಬಯಲ್ ಜೊತೆ ಕೂಡಿತುಂಡ್. ದಂಡಾಲೂ (ಕೊಡಗ್ ಪಿಂಞ ಸ್ಕಾಟ್‌ಲೇಂಡ್) ಸಂಪತ್ಭರಿತ ಸಂಗೀತ, ಆಟ್, ಜಾನಪದ ಕಲೆ, ಜಾನಪದ ಪಾಟ್ ಉಂಡ್. ಅನ್ನನೆ ಜನಡ ಹೃದಯತ್‌ಲ್ ಬೆಂದು ತಕ್ಕಾರ ಗುಣ ಉಂಡ್. ಕೈಮಾತ್ರ ಖಡ್ಗ (ಬಾಳ್) ಎಡ್‌ಪಕ್ ಏಕ್ಕೊಲು ತಯಾರ್" - ಈ ಕೊಡಿಲ್ ಎಳ್‌ದ್‌ನ ಪೊರದೇಶಕಾರಡ ಅಭಿಪ್ರಾಯ ಎಲ್ಲ ಇಂದ್ ಸೆರೀಂದ್ ಕಾಂಬಕಿಲ್ಲೆ. ಎನ್ನ್‌ಂಗ್‌ಂದ್ ಎಣ್ಣ್‌ನಕ, ಕೊಡವಡ ಪಿಂಞ ಕೊಡಗ್‌ರ ಪಂಡೇತ ಆಕರ್ಷಣೆ, ಚಾಯಿಚಂದ ಎಲ್ಲ ಇಂದ್ ಮಾಜಂಡ್ ಮರೆಯಾಯಂಡ್ ಬಂದ್‌ಟಿತ್. ಡೆನಿಸ್ ಮೆಹೊನಿಂಜಿ ತೊಟ್ಟ್ ಹಿಲ್ಬನ್ ಬ್ರೌನ್ ಕೆತ್ತಣೆ ಯುರೋಪ್‌ರ ಪರಿಸರ ಪ್ರೇಮಿಯ ಕಂಡಂತ ಕೊಡಗ್‌ರ ಭೌಗೋಳಿಕ ಸನ್ನಿವೇಶ, ಪರಿಸರ ಸಂಪತ್ತ್, ಪಚ್ಚೆರಂಗ್, ಕಣ್ಣ್‌ಮನತ್‌ನ ತಣತುವ ನೋಟ - ಇದೆಲ್ಲ ಪಂಡ್ ಪೋಲೆ ಇಲ್ಲೆ.

ಪುರಾಣ, ಇತಿಹಾಸ ಕಾಲತ್‌ಲಿಂಜ ವೀರಪರಂಪರೆ ಇಂದೂ ಕೊಡಗ್ ಜನಡ ಚೋರಲೇ ಬಂದ್ ಪೋಯಿತ್. 1918ನೇ ಇಸವಿಲ್ ಇಡೀ ಭಾರತ ಪಿಂಞ ಬರ್ಮ ದಂಡೂ ದೇಶತ್‌ಂಜಿ ಬಾಲೆಕಾರಳ ಆಂಜಿತ್ ಆದ್ಯ ಆಯಿತ್ ಕಮಿಷನ್ ಅಧಿಕಾರಿಯಳಾಯಿತ್ ಮಿಲಿಟ್ರಿಕ್ ಕೂಟಿಯಂಡತ್. ಆ ಬ್ಯಾಚ್‌ಲ್ ಒಟ್ಟು 39 ಜನಕ್ ಅಧಿಕಾರಿ ಸ್ಥಾನ ಕೊಡ್‌ತಾಲ್ ಈ ಚೆರಿಯ ಕಾಡ್‌ಸೀಮೆ ಕೊಡಗ್‌ಂಜಿ ದಂಡಾಳ್ ಆಯ್ಕೆ ಆಚೀಂದೆಣ್ಣ್‌ನಕ (ಕೆ.ಯಂ. ಕಾರ್ಯಪ್ಪ ಪಿಂಞ ಚೆಪ್ಪುಡಿರ ಪೊನ್ನಪ್ಪ) ಇದ್‌ಂಗ್‌ಂಜ ಬಲ್ಯ ಉದಾಹರಣೆ ಏದ್ ಬೋಂಡು ? ದಂಡ್ ಮಹಾ ದಂಡನಾಯಕಂಗಳ ಕೊಡ್‌ತ ದೇಶ.

ಒಂದನೆ ಪಿಂಞ ದಂಡನೇ ಮಹಾಯುದ್ಧತ್‌ಲು ಕೊಡವ ಪೆರ್ತ್ ಬಲ್ಯ ಸಂಖ್ಯೆಲ್ ಪಡೆ ಭೂಮಿಲ್ ಪಡೆಪೊತ್ತ್ ಚತ್ತತ್. ಕೊಡಗ್‌ರ ಪ್ರತಿ ಮನೆಂಜೂ ಅಂಗಾಂಗ ಸೆರಿ

ಉಳ್ಳವು ಇಂದ್ ಮಿಲಿಟ್ರಿ ಸೇವೆಲುಂಡ್. ಮಿಲಿಟ್ರಿಲ್ ಬಲ್ಯ ಬಲ್ಯ ಅಧಿಕಾರಿಯಡ ಸಂಖ್ಯೆ ಇಕ್ಕ ದುಂಬ್ ಉಂಡ್. ಜನಸಂಖ್ಯಾವಾರ್ ಸೈನಿಕಂಗಡ ಲೆಕ್ಕ ಇಟ್ಟಕ, ಭಾರತತ್‌ರ ಏದ್ ಭಾಗತ್‌ಂಜಿಯೂ ಇಚ್ಚಕ್ ಸೈನಿಕಂಗ ಸೇನೆಲ್ ಇಲ್ಲೆ.

ಬೋನಿರ ಮುತ್ತಣ್ಣ, ಕಲ್ಯಾಟಂಡ ಪೊನ್ನಪ್ಪ, ಚೌರೀರ ಅಪ್ಪಣ್ಣ, ಅಪ್ಪಾರಂಡ ಬೋಪಣ್ಣ, ಕುಲ್ಲೇಟಿರ ಪೊನ್ನಣ್ಣ, ಪಟ್ಟಚೆರವಂಡ ಬೋಳ್‌ಕ, ಚೋನಿರ ಚರ್ಮಣ, ಕನ್ನಂಡ ದೊಡ್ಡಯ್ಯ, ಅಪ್ಪಚ್ಚಿರ ಮಂದಣ್ಣ, ಅಳಮಂಡ ಮುದ್ದಯ್ಯ - ಇನ್ನತ ನೂರಾರ್ ವೀರ ಕೊಡವ ಕೊಡಗ್‌ಲ್ ಶತ್ರುನ ಅಡಕುವಾಲ್ ಕೇಳಿ ಪಡ್‌ಂದಿತ್, ಪಂಡ್ ಕಾಲತ್‌ಲ್ ಈ ಕೊಡಗ್‌ನ, ರಕ್ಷಣೆ ಮಾಡಿತ್.

ಅನ್ನನೆ ಕೊಡಗ್‌ರ ಪೊಣ್ಣಾಳೂ ಕೊಡವ ವೀರ ಪರಂಪರೆಕ್ ಕಾತುರುಪಿತ್ ಲೋಕ ಕೇಳಿ ಎಡ್‌ತವು ಕಮ್ಮಿಲೊಂದು ಇಲ್ಲೆ. ಅಳಮಂಡ ದೊಡ್ಡವ್ವ ನಂತವು ಪದ್‌ನೇಳ್ ಪದ್‌ನೆಟ್ಟನೆ ಶತಮಾನತ್‌ಲ್ ಕೇಳಿ ಎಡ್‌ತಕ, ಚೆಪ್ಪುಡಿರ ಸೀತವ್ವ, ಅಪ್ಪಾರಂಡ ಅಕ್ಕವ್ವನಂತವು ಈ ಶತಮಾನತ್‌ಲ್ ಕೇಳಿ ಎಡ್‌ತವು.

ಇನ್ನನೆ, ಇಚ್ಚಕ್ ಚೆರಿಯ ಪ್ರದೇಶತ್‌ರ ಜನಡ ಪರಾಕ್ರಮತ್‌ರ ಕೇಳಿ ಪ್ರಪಂಚತ್‌ರ ಮೂಲೆ ಮೂಲೆಕೂ ಪಬ್ಬಿತ್, ವೀರ ಪರಂಪರೆರ ವಿಶೇಷ ಜನಾಂಗ ಎಣ್ಣಿತ್ ಬ್ರಿಟಿಷ್ ಅಧಿಕಾರಿಯ ಕಂಡಿತ್ ತೋಕ್ ಕತ್ತಿ ಪುಡಿಪಕ್ ಲೈಸನ್ಸ್ ಪಡೆಯುವಲ್ಲ್‌ಂಜಿ ವಿನಾಯತಿ ಕೊಡತತ್ (Exempted from Arms Act)

ಈ ವೀರ ಪರಂಪರೆ ಪಂಡ್ ಪೋಲೆ ಇಂದೂ ಉಂಡ್. ಪಂಡ್ ಪೋಲೆ ಇಂದ್ ಪಡೆ ಪೊಪ್ಪದ್ ಇಲ್ಲೆ. ಆಚೇಂಗಿ ಕೊಡವಡಲ್ಲಿ ಅಡಂಗಿತುಳ್ಳ ವೀರ ಪರಂಪರೆರ ಶಕ್ತಿ ಹಾಕಿ, ಕ್ರಿಕೆಟ್‌ನಂತ ಕಳಿ ಪರಂಬ್‌ಲ್, ಸೇನಾಪಡೆರ ಎಲ್ಲಾ ಚಮತ್ಕಾರತ್‌ಲೂ, ಕೈಗಾರಿಕಾ ಕ್ಷೇತ್ರತ್‌ಲೂ, ಸರಕಾರಿ ಪಿಂಞ ಖಾಸಗಿ ಕ್ಷೇತ್ರತ್‌ರ ಆಡಳಿತ ನಡತುವಾತೂ ಕೊಡವಡ ಸಾಮರ್ಥ್ಯ ಎದ್ದ್ ಕಾಂಬ. ಕೊಡಗ್‌ರ ಜನ ವಿಶ್ವಾಸಕಾರ ಎಣ್ಣುವ ಪೆದ ಎಡ್‌ತಿತ್ ಬಾಳುವ.

❖ ❖ ❖

# ಕೊಡವ ಜಾನಪದ ವಿಶೇಷತೆ

ಮಾನವ ಸಂಸ್ಕೃತಿನ ಅಭ್ಯಾಸ ನಡ್‌ತುವ ಶಾಸ್ತ್ರತ್‌ರ ಪೈಕಿ ಜಾನಪದ ಪೆರ್ತ್ ಪ್ರಧಾನವಾನದ್. ಮಾನವ ಕುಲತ್‌ರ ಜೀವನ ಯಾತ್ರೆಲ್ ಎಲ್ಲ ವ್ಯವಹಾರವೂ "ಕಂಠಸ್ಥ ಸಂಸ್ಕೃತಿ" ಎಣ್ಣ್‌ಚೇಂಗಿ ಬಾಯಿಂಜಿ ಬಾಯಿಕ್ ಓರ್ ಕರ್‌ಂದಲೆಂಜಿ ಇಂಞೋರ್ ಕರ್‌ಂದಲೆಕ್ ಸಾಗಿಯಂಡ್ ಬಾತ್. ಅಕ್ಷರ ಜ್ಞಾನ ಬಂದ ಪಿಂಞ ಪ್ರೌಢ ಸಂಸ್ಕೃತಿ ಪುಟ್ಟ್‌ಚಿ. ಆಚೇಂಗಿ, ಕೊಡವ ಸಂಸ್ಕೃತಿರ ಸಂಗತಿಯೇ ಬೋರೆ. ಕೊಡವ ತಕ್ಕ್‌ಕ್ ಅಕ್ಷರ ಇಲ್ಲೆ. ಇದಲ್ಲತೆ ಇತಿಹಾಸಗಾರಡ ಪ್ರಕಾರ ಕ್ರಿ.ಶ. 1750ನೇ ಇಸವಿಕೆತ್ತಣೆ, ಕೊಡಗ್ ರೊಳ್‌ಲ್ ಅಕ್ಷರ ಪಡ್‌ಚವು ದಾರೂ ಇಂಜಿತೇ ಇಲ್ಲೆ. ಸುಮಾರ್ ಕ್ರಿ.ಶ. 1820ಲಿಂಜಿ ಇಪ್ಪರ ಊರ್‌ಕೊ, ನಾಡ್‌ಕೊ ಓರಬ್ಬ ಕನ್ನಡ ಪಡ್‌ಚತ್. ಆಚೇಂಗಿ ಕೊಡವ ತಕ್ಕ್‌ನ ಕನ್ನಡ ಅಕ್ಷರತ್‌ಲ್ ಎಳ್‌ದುವ ಪ್ರಯೋಗ ಅಪ್ಪಚ್ಚ ಕವಿರ ಕಾಲತ್‌ಲ್ ಸುರುವಾಚಿ. ಕ್ರಿ.ಶ. 1924ನೇ ಇಸವಿಲ್ ನಡಿಕೇರಿಯಂಡ ಚಿಣ್ಣಪ್ಪಂಡ ಕಾಲತ್‌ಂಜಿ ನಂಗಡ ಜಾನಪದ ಕಲೆ ಎಳ್ತ್‌ಲ್ ದಾಖಲಾಚಿ.

ಇಲ್ಲಿ ನಂಗಕ್ ಕಂಡ್‌ಬಪ್ಪ ವಿಶೇಷ ಎನ್ನಣ್ಣ್‌ಚೇಂಗಿ, ಕೊಡವ ತಕ್ಕ್‌ಕ್ ಲಿಪಿ ಇಲ್ಲೇಂಗಿಯೂ, ಎಳ್ತ್‌ಲ್ ದಾಖಲ್ ಮಾಡಿತ್ ಬೆಚ್ಚ ಜಾನಪದ ಕಲೆಯಡ ಪೈಕಿ ಪಟ್ಟೋಲೆ ಪಳಮೆಲ್ ದಾಖಲಾನದೇ ಸುರೂವತ್‌ರದ್.

ಪ್ರತಿಯೋರ್ ಜನಾಂಗತ್‌ಲೂ ಜಾನಪದ ಕಲೆಉಂಡ್. ಚೆನ್ನಂಗ್ ಪಾಟ್, ಕತೆ, ಪಿಂಞ ಆಟ್; ಇದ್ ಮಾತ್ರ ಜಾನಪದಾಂದ್ ಅರ್‌ಂಜಂಡಕ ಪೋರ. ಜಾನಪದ ಕಲೆರ ಕ್ಷೇತ್ರ ಪೆರ್ತ್ ವಿಶಾಲವಾನದ್.

### ಜಾನಪದ ಎಣ್ಣ್‌ನಕ ಏದೇದ್ ಅಡಂಗುವ:-

ಪ್ರೊ.|| ಸ್ಮಿತ್ ಥಾಮ್‌ಸನ್‌ರ ಪ್ರಕಾರ ಜಾನಪದತ್‌ನ ದಂಡ್ ಭಾಗ ಮಾಡಲು. 1ನೇ ವಿಭಾಗ :- ಕತೆ, ಪಾಟ್, ಪ್ರೇಮಗೀತೆ, ಪಣಿಕೆಜ್ಜಂಡ್ ಪಾಡುವ ಪಾಟ್, ಕಳಿಕ್ ಅಡಂಗ್‌ನ ಪಾಟ್, ಚೆರಿಯ ಮಕ್ಕಡ ಪಾಟ್, ಒಡಪಕತೆ, ಗಾದೆ, ಹೇಳಿಕೆ, ಸೂತ್ರಬದ್ಧವಾಕ್ಯ.... ಇದೆಲ್ಲ ಜಾನಪದ.

2ನೇ ವಿಭಾಗ:- ನಮ್ಮೆ-ನಾಳ್ ಅಯಿಪಣಿ, ಬೊಳೆಪಣಿಲೆಲ್ಲ ನಡತುವ ಆಚರಣೆ, ಮೂಢ ನಂಬಿಕೆರ, ತರತರ ಆಟ್, ನಾಟಕ, ತಮಾಷಿ, ಆಶೀರ್ವಾದ ಮಾಡುವ ಕ್ರಮ, ಶಾಪ, ಪ್ರಮಾಣ ವಚನ, ಬೈಗಳ, ಹಂಗ್‌ಚಿಡುವ ತಕ್ಕ್, ಬೆಲ್ಕ ಪರೆವದ್, ಸ್ವಾಗತ

ಮಾಡುವದ್, ಬೆಂದುನ ಅಯಿಪ ಕ್ರಮ, ಪೊರಪಾಡ್, ಜನಪದ ವಾದ್ಯ ಸಂಗೀತ, ಕುಂಞಿಮಕ್ಕಡ ಲಾವಣಿ , ಜನಪದ ಉಪಮಾನ, ಜನಪದ ಅಲಂಕಾರ (Similies and Metaphors) ಪೊಲ್ಲಪಣಿ, (ಸೀಮೆಕುರಿ ಕುರಿಪ) ಕಳಿ, ತರಾವರಿ ಅಡಿಗೆ, ಮಂತ್ರ ತಂತ್ರ ವಿದ್ಯೆ, ಕೈಗಾರಿಕೆ, ನೆಯ್ಗಿ, ನಾಡ್‌ಮದ್ದ್, ಕೈಬೆರ ಕಾಲ್‌ಬೆರ ಬಳಸಿತ್ ಪಾಟ್, ಮನೆಕೆಟ್ಟುವ ವಿಧ, ಬೇಲಿಕಟ್ಟುವ ವಿಧ, ಪತ್ತಾಯ, ಪ್ರಾಣಿ ಪಕ್ಷಿ ಪುಡಿಪ ಕೆಣಿ - ಇದೆಲ್ಲ ಜಾನಪದಕ್ ಅಡಂಗುವ.

ಈ ದೃಷ್ಟಿಲ್ ನೋಟ್‌ನಕ ಕೊಡಗ್ ಜಾನಪದ ಕಲೆರ ಪತ್ತಾಯ ಎಣ್ಣಲು. ಜಾನಪದ ಕೃತಿ (ಪುಸ್ತಕ) ಯಡ ಪೈಕಿ ಲಿಪಿ ಇಲ್ಲತ ಕೊಡವತಕ್ಕ್‌ರ ಪಟ್ಟೋಲೆ ಪಳಮೆ ಕೃತಿ ದಕ್ಷಿಣ ಭಾರತತ್‌ಲ್ ಕೇಳಿಪಟ್ಟದ್.

ಕೊಡಗ್ ಪೆರ್ತ್ ಚೆರಿಯ ಜಿಲ್ಲೆ. ಇಲ್ಲಿ ನಾಲ್ ಮೂಲತ್‌ರ ಜಾನಪದ ಕಲೆ ಉಂಡ್ 1) ಬಯಲ್ ಸೀಮೆರ (ಮೂಡ್‌ಸೀಮೆ) ಕನ್ನಡ ಮೂಲತ್‌ರ 2) ತುಳು ಮೂಲತ್‌ರ (ತುಳ್‌ನಾಡ್) ದಕ್ಷಿಣ ಕನ್ನಡತ್‌ರ ಜಾನಪದ 3) ಮಲಯಾಳ ಮೂಲತ್‌ರ 4) ಕೊಡವ ಮೂಲತ್‌ರ, ಎಣ್ಣ್‌ನಕ ಕೊಡವ ತಕ್ಕ್‌ರ ಜಾನಪದ. ಈ ಎಳ್ತ್‌ಲ್ ಕೊಡವ ಮೂಲತ್‌ರ ಜಾನಪದ ಕಲೆನ ಮಾತ್ರ ಚೆನ್ನ ಚೆನ್ನ ವಿವರಣೆ ತಂದಂಡ್ ಪೋಪಿ.

ಜಾನಪದ ಆಟ್:- ಆಟ್‌ಲ್ ಬೊಳ್‌ಕಾಟ್, ಕೊಂಬಾಟ್, ಪೀಲಿಯಾಟ್, ಚೌರಿಯಾಟ್, ಕೋಲಾಟ್, ಬೋಡಾಟ್, ಕಪ್ಪೆಯಾಟ್, ಉಮ್ಮತ್ತಾಟ್, ವಾಲಗತಾಟ್, ಮರಪನಾಟ್, ಅಂಗಕಳಿ - ಇನ್ನನೆ ತರಾವರಿ ಆಟುಂಡ್.

**1. ಬೊಳಕಾಟ್:-** ದೇವಡ ಬೊಳಕ್ ನಮ್ಮೆಲ್ ಕುಪ್ಯಚೇಲೆ ಸಾಂಪ್ರದಾಯಿಕ ಪೊರಪಾಡ್‌ಲ್ ಆಡುವದ್. ಶಾಸ್ತ್ರೀಯ ರೀತಿಲ್ ಮೊಟ್ಟ್ ಎಡ್‌ಕಂಡು. ದುಡಿಕೊಟ್ಟ್ ಅವಶ್ಯ ಬೋಂಡು. ಆಡುವಕ ದೇವಡ ಮಹಿಮೆನ ಕೊಂಡಾಡಿಯಂಡ್ ಪಾಡಂಡು, ಆಡಂಡು, ಆಡುವಕ ಚೌರಿ ಬೀಜಿಯಂಡ್, ಒಡಿಕತ್ತಿ ಬೀಜಿಯಂಡ್, ಕೈತಪ್ಪಾಳೆ ಪೊಜ್ಜಂಡ್ ಆಡಲು. ಪೆರ್ತ್ ತರತ್‌ರ ಆಟುಂಡ್.

**2. ಕೊಂಬಾಟ್:-** ಒರೋರ ಊರ್‌ಲ್ ದೇವಡ ನಮ್ಮೆಲ್ ಮಾತ್ರ ಇದ್‌ನ ಆಡುವ. ಬೊಳ್‌ತ ಕುಪ್ಯತ್‌ನ ಅರೆಕ್ ಸುತ್ತಿಯಂಡ್, ರೇಶ್ಮೆ ಚೇಲೆನ ಎದೆ ಭಾಗಕ್ ಕತ್ರಿಯಾಯಿತ್ ತೊರ್‌ತಂಡ್, ಮಂಡೆ ತುಣಿ ಇಟ್ಟಂಡ್, ದಂಡ್ ಕೈಲೂ ಮಿಗತ್‌ರ ಕೊಂಬ್ ಪುಡ್‌ಚಂಡ್ ಕೊಟ್ಟ್‌ಕ್ ತಕ್ಕ ಮೊಟ್ಟ್ ಎಡ್‌ತಂಡ್ ಆಡುವ. ಇದ್‌ಲ್ 48 ತರ ಆಟ್ ಉಂಡ್.

**3. ಪೀಲಿಯಾಟ್:-** ಇದ್‌ನ ಪೆರ್ತ್ ನೇಮತ್‌ಲ್ ಆಡುಂಡು. ದೇವಡ ನಮ್ಮೆಕ್ ಕೆಟ್ಟ್‌ಬುದ್ದಲ್ಲಂಜಿ ಪನ್ನೆರಂಡ್ ದಿನ ಆಡಂಡು. ಆಟ್‌ಕಾರ ಅದ್ದಶುದ್ಧತ್‌ಲ್, ಇರ್‌ಲ್

ಮನೆರ ಪೊರಮೆ ಬುದ್ದಂಡ್, ಪೊಲಾಕ ಪೊಳೆಲ್‌ಕುಳ್‌ಚಿತ್, ಅರೆರ ಕ್‌ದಕ ಮುಂಡ್ ಸುತ್ತಿಯಂಡ್, ಚೇಲೆ ಕೆಟ್ಟಿಯಂಡ್, ಕೈಲ್ ನವಿಲ್‌ಗರಿರ ಚಾಮರ ಪುಡ್‌ಚಂಡ್, ಮೇದ ಕೊಟ್ಟ್‌ಕ್ ಆಡಂಡು. ಆಟ್‌ಕಾರ ಮೌನ ವ್ರತತ್‌ಲಿರಂಡು. ಒಟ್ಟು 108ತರ ಆಟ್ ಆಡಂಡು. ಪೊಲಾಕ ಎದ್ದಿತ್ ಸೂರ್ಯನ ತೊಪ್ಪಲ್ಲ್‌ಂಜಿ ಬೈಟ್ ದೇವಳ ತೊತ್ತಿತ್ ಬುದ್ದವಲ್ಲಿಕೆತ್ತಣೆ ಎನ್ನತೆಲ್ಲ ಪಣಿ ಮನೆಲೂ, ಬೇಲ್‌ಲೂ, ಕಳತ್‌ಲೂ ಕೆಯ್ಯುವ, ಅದ್‌ನೆಲ್ಲ ಆಡಿ ಕಾಟಂಡು. ಊರ್‌ಂಜಿ ಊರ್‌ಕ್ ಆಟ್‌ಲ್ ವ್ಯತ್ಯಾಸ ಉಂಡ್.

**4. ಕೋಲಾಟ್:-** ಇದ್ ಪುತ್ತರಿ ನಮ್ಮೆರ ಆಟ್. ಮೇದಂಡ ಕೊಟ್ಟಕ್ ಕುಪ್ಯ ಚೇಲೆಲ್ ಆಡುವ. ಇದ್‌ಲ್ ನಡುಕೋಲ್, ಕಡತ್‌ಕೋಲ್, ದಾಟ್‌ಕೋಲ್, ಒತ್ತೆಕೋಲ್, ಮೂಂದ್ ಪೊಯಿತ್ ಕೋಲ್, ನೆಲಪೋಯಿತ್, ಓಂಗಿ ಪೋಯಿತ್ - ಇನ್ನನೆ 32ತರ ಉಂಡ್.

**5. ಬೋಡಾಟ್:-** ಓರಂದ್ ಊರ್‌ಲ್ ಓರಂದ್ ತರ ಉಂಡ್. ದೇವಸ್ಥಾನತ್‌ಲ್ ಅದ್ದ ಶುದ್ಧತ್‌ಲ್, ಮೇಲ್‌ಕ್ ಮಸಿ ತೇಚಂಡ್, ಒಣಕ್ ಬಾಳೆ ಎಲಕಂಡತ್‌ಲ್ ಮೇಲ್ ಮುಚ್ಚಿಯಂಡ್, ಮಂಡೆಕ್ ಬಾಳೆಪಟ್ಟೆರ ಕಿರೀಟ ಇಟ್ಟಂಡ್ ಮೌನ ವ್ರತತ್‌ಲ್ ಆಡುವ. ಓರಂದ್ ಊರ್‌ಲ್ ಇದ್‌ನ ದೇವಡ ಕ್ರಿಯೆಯಾಯಿತ್ ಅಲ್ಲತೆ, ಬರಿ ಮನರಂಜನೆಕಾಯಿತ್, ಬೋಡುವ ಕಾಯಿತ್ ಆಡುವ. ಪಂಡ್ ಕೆಂಬಟ್ಟಿ ಜನಾಂಗಕಾರಳೇ ವೇಶ ಇಟ್ಟಂಡ್, ಮನೆ ಮನೆ ಪೋಯಿತ್ ಆಡುವದಿಂಜತ್. ಈ ಬೋಡಾಟ್‌ಲ್ ಪಟ್ಟಂಡ ವೇಶ, ಚೊಳೆವೇಶ, ಮಣ್ಣೊಡ್ಡ ವೇಶ ಕೋಡಂಗಿ ವೇಶ, ಮಾಪಳೆ ವೇಶ, ಪಾಂಬೊಡ್ಡ ವೇಶ - ಇನ್ನನೆ ತರಾವರಿ ಉಂಡ್. ಆಚೇಂಗಿ ಇದ್‌ಲ್ ಚೆನ್ನಂಗ್ ಆಟೆಲ್ಲ ಬಯಲ್ ಸೀಮೆರ ಮಿಶ್ರವುಂಡ್. ಪ್ರತಿವೇಶಕ್ಕ್ ತಕ್ಕ ಪಾಟುಂಡ್ - ಆಚೇಂಗಿ ಆ ಪಾಟೆಲ್ಲ ಅಶ್ಲೀಲ ಜಾಸ್ತಿ. ಆಚೇಂಗಿ ಹಾಸ್ಯ ಭರಿತ. ಇಕ್ಕ ಇದೆಲ್ಲ ಕಮ್ಮಿ ಆಯಿ ಪೋಚಿ.

**6. ಉಮ್ಮತ್ತಾಟ್:-** ಇದ್ ಪೊಮ್ಮಕ್ಕಡದೇ ಆಟ್. ಪಂಡ್ ಇದ್‌ನ ಎಲ್ಲಾ ಶುಭ ಸಮಾರಂಭತ್‌ಲ್ ಮನೆರ ಮುಂದ್‌ಲ್ ಆಡುವಯಿಂಜತ್. ಕಚ್ಚಿರ ತಾಳ ತಟ್ಟಿಯಂಡ್, ದೇವಡ ಪಾಟ್ ಪಾಡಿಯಂಡೂ, ಬೆಂದುನ ತುದ್‌ಚಿ ಪಾಂಡಿಯಂಡೂ ಆಡುವಯಿಂಜತ್. ಇಕ್ಕ ಇದ್‌ನ ಎಲ್ಲಾ ಸಾಮಾಜಿಕ ಸಮಾರಂಭತ್‌ಲೂ ಆಡುವ.

**7. ವಾಲಗತಾಟ್:-** ಇದ್ ಬೊರೀ ಮನರಂಜನೆರ ಆಟ್. ಇದ್‌ಂಗ್ ಇಂತದೇ ನಿಯಮಾಂದ್ ಇಲ್ಲೆ. ಕೊಟ್ಟ್‌ಕೊತ್ತ್ ಕಾಲೆಡತ್ ಆಡ್‌ನಕ ಮದಿ. ಇದ್ ಸಾಮಾಜಿಕ ಸಮಾರಂಭತ್‌ರ ಆಟ್, ದೇವಡನಮ್ಮೆಲ್ ಇದ್‌ಂಗ್ ಜಾಗ ಇಲ್ಲೆ. ಇದ್‌ಲ್ - ಎರವಚೀನಿ, ಕುರ್‌ಂದ ಆಟ್, ಪಾಂಬಾಟ್, ದೇವ ಆಚ್, ಹುಲಿವೇಷ, ಮಾಪಳೆ ಆಟ್, ಬೊಳಕಾಟ್ - ಇನ್ನನೆ ಬೋರೆ ಬೋರೆ ತರ ಉಂಡ್.

**8. ಮರಪನಾಟ್ ಪಿಂಞ ಅಂಗಕಳಿ:-** ಇದ್ ದಂಡ್ ಚಾವು ಮನೆಲ್, ಚತ್ತಂವಂಡ

ಆಕೃತಿನ ಪಿಲ್ಲ್‌ಲ್ ಮಾಡಿಯಂಜ್, ಅದ್‌ಂಡ ಸುತ್ತ ಹರಿಜನ ಆಡುವ ಆಟ್. ಇದೆಲ್ಲ ಇಕ್ಕ ಇಲ್ಲತಾಯಿತ್.

ಜಾನಪದ ಪಾಟ್

**1.** ಕಾವೇರಿ ಪುರಾಣ:- ಇದೋರ್ ಕೊಡಗ್‌ರ ಮಹಾಕಾವ್ಯ. ಕಾವೇರಮ್ಮೆರ ಪುರಾಣತ್‌ನ ಕೊಡಗ್‌ರ ಪ್ರತಿ ನಾಡ್‌ರ ಕೇಳಿಪಟ್ಟ ಪಾಟ್‌ಕಾರ ಶಿವರಾತ್ರಿರಂದ್ ಭಾಗಮಂಡಲ ದೇವಸ್ಥಾನತ್‌ರೆದಿಕೆ ಕಲ್ಲ್ ಐಮರತ್‌ಲ್ ಅಳ್‌ತಂಡ್ ದುಡಿಕೊಟ್ಟ್‌ಪಾಟ್ ಪಾಡುವ. ಈ ಪಾಟ್ ಇಂಞೂ ಎಳ್‌ತ್‌ರೂಪತ್‌ಲ್ ಪೊರ ಬುದ್ದಿತಿಲ್ಲೆ.

**2.** ಪುತ್ತರಿ ಪಾಟ್:- ತೆಡ್ ಇಡ್‌ಚಿ, ಮಳೆಬುದ್ದ್ ನೆಲ ಪದ ಬುದ್ದ್ ಎತ್ತ್‌ಕೆಟ್ಟಿ, ಉತ್ತ್ ಕಳತ್, ಬಿತ್ತಿ ಪೊರ್‌ಚಿ, ನಟ್ಟ್ ಬೊಳ್‌ತಿ, ಕೊಜ್ಜಿ ಕಡ್‌ತಿ, ದೇವಕ್ ಎಡೆಬೆಚ್ಚಿ ನಂಗ ಉಂಬಲ್ಲಿ ಕೆತ್ತಣೆ ನಡ್‌ಪಂತ ಎಲ್ಲ ಕಾರ್ಯತ್‌ನ ಪುತ್ತರಿ ನಮ್ಮೆಲ್ ದುಡಿಕೊಟ್ಟಾಯಿತ್ ಪಾಡುವ.

**3.** ಮನೆಪಾಟ್:- ಇದ್ ಪುತ್ತರಿ ಪಾಟ್‌ರದೇ ಓರ್ ಭಾಗ. ಪುತ್ತರಿ ನಮ್ಮೆ ಕಯಿಂಜ ಪಿಂಞ ಪ್ರತಿ ಮನೆಕೂ ಊರ್‌ಕಾರ ಪೋಯಿತ್, ಆ ಮನೆರ ಚಾಯಿಚಂದತ್‌ನ, ಆ ಮನೆಕಾರಡ ಬೆಂದುತಕ್ಕಾರ, ಊಟೋಪಚಾರ, ಆ ಮನೆರ ಕಾರೋಣಂಡ ಕೇಳಿ ಕೀರ್ತಿನ ಅಲ್ಲಿಂಜಿ ಆ ಮನೆರ ಪ್ರತಿಯೋರ್ ವ್ಯಕ್ತಿರ ಸಾಧನೆನಕೊಂಡ್ ಕೊಡ್‌ತಾನೆಲ್ಲ ಪಾಡಿ ತುದ್‌ಚಿ ಆಖೀರಿಕ್ ವಂದನಾರ್ಪಣೆ ಮಾಡ್‌ನ ಪಿಂಞ ಇನ್ನನೆ ಆಶೀರ್ವಾದ ಮಾಡುವ.

*ಈ ವೊಕ್ಕ ಮನೆಯಿಲ್*
*ಕಾವೇರಿ ಮಣಪೋಲೆ*
*ನೆಲ್ಲಕ್ಕಿ ಪೆರ್‌ಕಡ್,*
*ಇಗ್ಗ್‌ತ ಮಲಮೋಲೆ*
*ಪಿಮ್ಮಂಡ ಮರಿಯಡ್*
*ಪಾಬಳ್ಳಿ ಕೊಡಿ ಪೋಲೆ*
*ಕೈ ಮಕ್ಕ ಪೆರ್‌ಕಡ್*
*ಪಾವಕ್ಕೆರ ಪೂಪೋಲೆ*
*ಪಾಮಕ್ಕ ಪೆರ್‌ಕಡ್*
*ಅಜ್ಜನಜ್ಜೆ ಬಾವಡ್...*

ಇನ್ನನೆ ಎಲ್ಲಾ ನಲ್ಲಾಮೆ ಬಯಂದವ.

**4.** ಬಟ್ಟೆ ಪಾಟ್:- ಇದೂ ಪುತ್ತರಿ ನಮ್ಮೆಕೇ ಸಂಮ್ಮಂಧಪಟ್ಟದ್. ಬಟ್ಟೆಲ್

ನಡ್‌ಪಕ ಕಲ್ಲ್-ಮುಳ್ಳ್, ಕುಂಡ್-ಮೊಟ್ಟೆ, ಮಳೆ-ಮಂಜಿ, ಮುಟ್ಟಿರ್‌ಟ್, ಉರಿಬೆದ್, ಪಾಂಬು-ಚೇಳ್, ಇನ್ನತದೆಲ್ಲ ಅಡೆತಡೆ ಬಂದಕ ನಂಗ ಎನ್ನನೆ ಕಷ್ಟತ್‌ನ ನೀಕಿ ನೀಸಿಯಂಡ್ ಬಟ್ಟೆ ನಡಕಂಡು ಎಣ್ಣುವ ಸಲಹೆ ಸೂಚನೆನ ಪಾಡುವ

ಉದಾ: *ಮುಟ್ಟಿರ್ಟ್ ಬಟ್ಟೆಲ್*
*ಎನ್ನನೆ ಪೋಪೊ*
*ಆಂಗಲ್ಲೊ ಎಂಗಕ್*
*ಬೂಟಿರ ತೂಡ್*
*ಪೂಮಂಜಿ ಬೂವಲ*
*ಎನ್ನನೆ ಪೋಪೊ*
*ಆಂಗಲ್ಲೋ ಎಂಗಕ್*
*ಓಲಿಕೊಡೆಯೊ*
*ಕುಂಡೋಣಿ ಬಟ್ಟೆಲ್*
*ಎನ್ನನೆ ಪೋಪೊ*
*ಆಂಗಲ್ಲೋ ಎಂಗಕ್*
*ತಂಡ್‌ದರಿಯೋ -*

**5. ಮಂಗಲಪಾಟ್:-** ವಯಸ್ಸಕ್ ಬಂದ ಕ್‌ಣ್ಣ ತಾಂಗೊತ್ತೋರ್ ಪೊಣ್ಣ್‌ನ ತೇಡಿ ನಡಂದಿತ್, ಒತ್ತ್‌ಬುದ್ದಿತ್ ಮಂಗಲಾಯಿತ್ ಬಪ್ಪಲ್ಲಿ ಕೆತ್ತಣೆ ನಡ್‌ಪಾನೆಲ್ಲ ಪಾಡುವ ಸಾಹಿತ್ಯ ರಚನೆನ ನೋಟ್‌ನಕ ಈ ನಂಗಡ ಪೂರ್ವಿಕಂಗ ಪೆರ್ತ್ ಬಲ್ಯ ಮಟ್ಟತ್‌ರ ಸಾಹಿತಿಯ ಪಿಂಞ ಕವಿಯ ; ಇಲ್ಲಿಯೆ ಉಳ್ಳ ಕೊಡವ ಜಾನಪದತ್‌ರ ವಿಶೇಷತೆ:

ಕ್‌ಣ್ಣಂಗ್ ಮಂಗಲ ಕಯಿಕಂಡೂಂದ್ ಆಪಕ ಅವ್ವನ ನೇರೆ ಕೇಕತೆ, ಎನ್ನತ ಕೆಣೆರ ತಕ್ಕ್ ಪರೆವ - ಕೇಳಿ.

*ನೀರಿಲ್ಲತ ನೀಕೆರೆ*
*ತೋಡಿನೊ ಫಲವಿಲ್ಲೆ*
*ಪೂವಿಲ್ಲತ ಪೂತೋಟ*
*ಮಾಡಿನೊ ಫಲವಿಲ್ಲೆ*
*ಕೊಂಬಿಲ್ಲತ ಚೋಮನ*
*ಪೋರಿನೊ ಫಲವಿಲ್ಲೆ*
*ಕೊಮ್ಮೆ ಉಳ್ಳ ಅಕ್ಕನ*
*ಉಂಡೊಯೊಪೂರಾಳಿಲ್ಲೆ*
*ಚಂದುಕತ್ ಪೊಂಬಣ*

*ಎಣ್ಣೆ ನೋಟೊರಾಳಿಲ್ಲೆ*
*ಮಕ್ಕಳಿಲ್ಲ ತೊಕ್ಕಾಮೆ*
*ಕೆಜ್ಜೆನೊ ಫಲವಿಲ್ಲೆ*
*ಪೊಣ್ಣಲ್ಲತ ಮಂಬಾಚೆ*
*ಬದ್ಧಿನೊ ಫಲವಿಲ್ಲೆ..*

ಇನ್ನನೆ ತಾಂಡ ಇಚ್ಚೆನ ಪೊರ ಬೂಕುವ ಅನ್ನನೆ ಅವ್ವಂಡ ಆಶೀರ್ವಾದ ಎಡ್‌ತಂಡ್, ಪೊಂದೇಡಿ ನಡಂದಿತ್ ಮೂಡಿರ ಮನೆಲ್ ಅಳಪಕ ಆ ಮೂಡಿ ಎನ್ನ್ ಸಾಮಾನ್ಯ ಬುದ್ಧಿವಂತತಿಯಾ? ಬೆಂದು ತಕ್ಕಾರಕ್ ಕಾಲ್ ಕತ್ತುವಕ್ ನೀರ್ ಬೆಪ್ಪಕ ಕ್‌ಣ್ಣ ನೀರೆಡ್‌ತ್‌ಲೆ. ಅಕ್ಕ ಅವ-

*ನಾಟಚಾರ ಬೆಂದುವೆ*
*ಎನ್ನಡ ಮೊಳಿಗೊಂಡ್*
*ಬೆಚ್ಚ ನೀರೆಡ್‌ತ್‌ಲೆ*
*ಮೇಲೆ ನೀರ್ ಕೇಟ್‌ಲೆ?*

*ಅದ್‌ಂಗ್ ಕ್‌ಣ್ಣಂಡ ಸವಾಲ್*
*ಇಂದ್ ನೀರ್ ಬೆಚ್ಚೋಲೆ*
*ಎಂದೂ ನೀರ್ ಬೆಪ್ಪೇಂಗಿ*
*ಬೆಚ್ಚ ನೀರೆಡ್‌ಪಿನೊ*
*ಮೇಲೆ ನೀರ್ ಕೇಪಿನೊ*

*ಅಕ್ಕ ಮೂಡಿರ ಪಾಟಿ ಸವಾಲ್*
*ಇಂದ್ ಬಂದ ಬೆಂದುವೊ*
*ಎಂದೂ ನಿಂಗ ಬಪ್ಪೇಂಗಿ*
*ಎಂದೂ ನೀರ್ ಬೆಪ್ಪಿನೊ -*

ಇನ್ನತ ಕೆಣಿರ ಸಂವಾದತ್‌ಲ್ ಮೂಡಿಕ್‌ಣ್ಣ್‌ನ ಒತ್ತಂಡ ಸೂಚನೆ ಕೊಡ್‌ಪ. ಇನ್ನತ ಮೇಲ್ಮಟ್ಟತ್‌ರ ಜಾನಪದ ಸಾಹಿತ್ಯತ್‌ನ ಪೊರ ಜಗತ್‌ರ ಸಂಪರ್ಕ ಇಲ್ಲತ ಕುಂದ್ ಸೀಮೆರ ಅವಿದ್ಯಾವಂತ ಜನಾಂಗ ಸೃಷ್ಟಿ ಮಾಡ್‌ಚಿ ಎಣ್ಣುವಾನ ನಂಬುವದೇ ಕಷ್ಟ.

**6. ದೇಶ ಕೆಟ್ಟ್ ಪಾಟ್**:- ಛಪ್ಪನ್ನಾರ್ ದೇಶತ್‌ಲ್ ಕೊಡಗ್ ಒಂದ್ (56). ಕೊಡಗ್‌ರ ಭೌಗೋಳಿಕ ಬೌಂಡ್ರಿನ ಪನ್ನೆರಂಡ್ ಕೊಂಬಾಯಿತೂ, ನುಪ್ಪತಂಜಿ ನಾಡಾಯಿತೂ, ನಾಡ್ ನಾಡ್‌ಲ್ ಪಟ್ಟಿ ಆಯಿತೂ, ಎನ್ನನೆ ವಿಂಗಡಣೆ ಮಾಡ್‌ಚಿ - ದೇಶ, ನಾಡ್, ಊರ್‌ರ ಆಡಳಿತ ಕ್ರಮ ಎನ್ನನೆ? ತಕ್ಕಾಮೆ ಎನ್ನನೆ - ದೇಶತಕ್ಕ, ಊರ್‌ತಕ್ಕ,

ನಾಡ್‌ತಕ್ಕ, ದಾರ್‌ದಾರ್, ಅಯಿಂಗಡ ಜವಾಬ್ದಾರಿಕೆ ಏದೇದ್? ಇನ್ನನೆ ಕೊಡಗ್‌ರ ಇತಿಹಾಸತ್‌ನ ಎಳ್‌ದಿ ಬೆಚ್ಚ್‌ಲೇಂಗಿಯೂ ಈ ಜಾನಪದ ಪಾಟೇ ಐತಿಹಾಸಿಕ ಆಧಾರ.

**7. ಚಾವುಪಾಟ್:-** ಚತ್ತವಂಡ ಚಾವು ಕೂಡಿತ್ ಚಾವುರ ಬರಿಲ್ ನಾಲಾಳ್ (ಈರಂಡಾಳ್) ಅಳ್‌ತಂಡ್ ಚತ್ತವ್ಯಕ್ತಿ ಜೀವನತ್‌ಲ್ ಮಾಡ್‌ನ ಸಾಧನೆನೆಲ್ಲ ಪಾಡಿತ್ ಪುನರ್ಜನ್ಮತ್‌ರ ವಿಚಾರ ಭಾರಿ ತಾತ್ವಿಕ ವಿಚಾರತ್‌ನ ಪಾಡುವ. ಪುನರ್ಜನ್ಮ ಪಡೆವಂದಾಚೆಂಗಿ ದೇವಳ ಏದ್ ಜನ್ಮ ಬೋಡಂಡೂಂದ್ ಎಣ್ಣಿಕೊಡ್‌ಪ. ಚಾವು ಪಾಟ್‌ಲ್ ದುಡಿ ಬಳಸುಲೆ. ಆ ಪಾಟ್‌ರ ರಾಗ ದುಃಖ ಸೂಚಕ.

**8. ಪೊಲ್‌ಚಿ ಪಾಟ್:-** ವ್ಯಕ್ತಿರ ಮಾದತ್‌ರಂದ್ ದುಡಿಕೊಟ್ಟ್ ಪಾಟಾಯಿತ್, ವ್ಯಕ್ತಿರ ಗುಣಗಾನ ಮಾಡಿತ್, ಆತ್ಮತ್‌ನ ಸ್ವರ್ಗಕ್ ಕೂಟುವ. ಪುನರ್ಜನ್ಮ ಪಡಂದಕ ಈ ದುಷ್ಟ ಸ್ವಾರ್ಥಿ ಮಾನವನಗುಂಡ್ ಎನ್ನೆಲ್ಲಾ ಗೋಳ್ ಪಡಂಡಿಯಾಕು. ಆನಗುಂಡ್ ನೀಕ್ ಪುನರ್ಜನ್ಮ ಬೋಂಡ. ನಾರಾಯಣ ದೇವಂಡ ಪೂತೋಟತ್‌ಲ್ ಪೂವಾಯಿತ್ ಪುಟ್ಟಿತ್ ದೇವಡ ನಿತ್ಯಪೂಜೆಕ್ ದೇವಡ ಮುಡಿಲೇರಿತಳೇಂದ್ ಭಾರೀ ವೇದಾಂತತ್‌ನ ಪಾಡುವ.

**9. ದೇವತೆಯಡ ಪಾಟ್:-** ಇದ್‌ಲ್ ಅದದ್ ಊರ್‌ಕ್ ಸಂಮ್ಮಂಧಪಟ್ಟನ್ನೆಕೆ ಎವ್ವಮಕ್ಕ ದೇಬುವಡಪಾಟ್, ಐವಮಕ್ಕ, ದೇಬುವಡಪಾಟ್, ಮೂವ ಮಕ್ಕದೇಬುವ, ಇಬ್ಬಮಕ್ಕ ದೇಬುವ, ಇನ್ನನೆ ಆ ದೇವತೆಯ ಎನ್ನನೆ ಎಲ್ಲಿ ಜನ್ಮ ಎಡ್‌ತತ್, ಏಲೆಲ್ಲ ನೆಲೆ ತೇಡಿ ಬಂದ್ ಎಲ್ಲಿಲ್ಲಿ ನೆಲೆ ತಾಂಗ್‌ಚಿ ಎಣ್ಣುವ ಸ್ಥಳ, ಪುರಾಣ ಉಂಡ್. ಇದ್‌ಲೆ ಸಾರ್ತಾವು (ಶಾಸ್ತಾವು ) ರ ಪಾಟ್, ಕೇತ್ರಪ್ಪಂಡ (ಕ್ಷೇತ್ರಪಾಲ) ಪಾಟ್ ಎಲ್ಲ ಬಪ್ಪ.

**10. ಪೊವ್ವದಿರ ಪಾಟ್:-** ಊರ್‌ಕೋರ್ ಪೊವ್ವದಿ (ಭಗವತಿ) ಇಪ್ಪ. ಪ್ರತಿ ಊರ್‌ರ ನಮ್ಮೆಲೆ ದೇವಿರ ಮಹಿಮೆನ ಕೊಟ್ಟಿ ಪಾಡುವ.

**ಜಾನಪದ ವೀರಂಗಡ ಪಾಟ್:-** ಇದ್‌ಲ್ ಮುಖ್ಯವಾಯಿತ್ ಕಲಿಯಾಟ ಪೊನ್ನಪ್ಪ, ಕೈಯಂದಿ ಅಪ್ಪಯ್ಯ, ಅಯ್ಯ ಕೋವಿರ ಅಪ್ಪಯ್ಯ, ಪೊಳ್ಳೆದೇವಿರ ಅಪ್ಪಯ್ಯ, ಕನ್ನಿಯಡ ಕಾಮಯ್ಯ, ಕಲ್ಲೆಕೆರೆ ಅಪ್ಪಯ್ಯ, ನಡಿಕೇರಿಯಂಡ ದೇವಯ್ಯ, ಪುಗ್ಗೆರ ಮೊಣ್ಣಯ್ಯ, ಬಿದ್ದಾಟಂಡ ಪೊನ್ನಪ್ಪ, ಅಲ್ಲತೆ ಅದದ್ ಮನೆತನತ್‌ರ ಕಾರೋಣಂಡ ಪಾಟೂ ಇಪ್ಪ.

**ಮಕ್ಕಡ ಜೋಜೋ ಪಾಟ್:-** ಇನ್ನತ ಶಿಶುಗೀತೆ ಕೊಡವ ಜಾನಪದ ಲೋಕತ್‌ಲ್, ಪೆರ್ತ್ ಉಂಡ್. ನಡಿಕೇರಿಯಂಡ ಚಿಣ್ಣಪ್ಪಜ್ಜ ಚೆನ್ನ ಸಂಗ್ರಹ ಮಾಡ್‌ನಕಲೂ ಸಂಗ್ರಹ ಆಗತೆ ಜನಕ್ ಮರಂದ್ ಪೋನದ್ ಪೆರ್ತ್ ಉಂಡ್. ಅನ್ನತ ಓರಂದ್ ಶಿಶುಗೀತೆಯಡ ಸುರೂತ್‌ರ ಓರಂದ್ ಗೆರೆನ ಮಾತ್ರ ಇಲ್ಲಿ ಎಳ್‌ದುವಿ.

1. ಜೂವ ಜೂವಾ ಕುಂಞಿಯೆ - ಕುಞಿರವ್ವ ಬಪ್ಪಕ ಚೆಪ್ಪ್‌ಮೊಲೆ ಕೋಂದಕ್ಕು.
2. ಕಾಕು ಕಾಕೇಕ, ಕಾಕೆರ ಮಂಗಲ ಎಕ್ಕೇಕ, ನಾಳೆ ಪೊಲಾಕ ನಾರಾಚೆ.
3. ತಪ್ಪಾಲವ್ವ ತಪ್ಪಾಲ, ತಪ್ಪಕುಡ್‌ಕೆಲ್ ಎನ್ನುಂಡ್, ಚಾಮಿಕ್ ಬೆಚ್ಚ ಪಾಲುಂಡ್.
4. ಕಟ್ರು ಕಟ್ರು ತೋರೇಕ, ಎಚ್ಚಕ್ ಮಕ್ಕಳ ಪೆತ್ತಿಯ-
5. ಕಾಕು ಮಲ್ಲಕ್ಕ ಎಣ್ಣೆ ನಕ್ಕಿ ಚಿಣ್ಣಕ
6. ಕೋಳಿ ಕುಂಞಿ ಕೋಳಿ ಕುಂಞಿ ಪಾಟ್ ಪಾಡ್
7. ಚೆಂಬ ಚೆಂಬ ಚೆಂಬಡ್‌ತ ಚೆಂಬಂಡ ಮಂದಿ ದುಡಿಯೆಡ್‌ತ
8. ಚಿಣಿ ಬೆರ ಚಿಂಡಾಣಿ, ಮೋದಿರ ಪೊನ್ನಾಣಿ, ನಡುಬೆರ ನಾಣೇಕ...
9. ತಟ್ಟಂಡಾಣೆಲ್ ತಾರ್ ಕೊಡಂದೆ, ಉದಿಯಂಡಾಣೆಲ್ ನೂರ್ ಕುದರೆ.
10. ಬಾತವ್ವ ಬಾತವ್ವ ಬೋಜಕ್ಕ ಮೂಡಿ, ಕಾತ್ ಮಳೆಯಿಲ್ ನೆಲಂದಿತ್ ಬಾತ್.

ಇದೆಲ್ಲ ಪಟ್ಟೋಲೆ ಪಳಮೆಲ್ ಸಂಗ್ರಹ ಆಯಿತ್. ಸಂಗ್ರಹ ಆಕತದೂ ಪೆರ್ಕ್ ಉಂಡ್.

**ನಾಟಕೀಯ ಪಾಟ್:-** ಪುತ್ತರಿ ನಮ್ಮೆಕ್ ಮಿಂಞ ಏಳ್ ದಿನ ಕೋಲಾಟ ಬೊಳಕಾಟ್‌ಲೆಲ್ಲ ತರಬೇತಿ ಕೊಡ್‌ಪಕಾಯಿತ್ ಈಡ್ ಕೂಡವದಿಂಜತ್. ಆಣಾಳೂ, ಮಕ್ಕಳೂ ಮಂದ್‌ಲ್ ಕೂಡಿತ್, ನೆಲಚಿ ಬೊಳಿಲ್ ಆಟ್ ತರಬೇತ್ ಮಾಡುವಕ ಬೋರೆ ಬೋರೆ ಮನರಂಜನೆ ಕಾರ್ಯಕ್ರಮ ಇಪ್ಪ. ಎಲ್ಲಾರು ಸುತ್ತು ಅಳತಂಡ್ ನಾಟಕ ರೂಪತ್‌ರ ಕತೆನ ಪೆರ್ಕ್ ಹಾಸ್ಯಭರಿತವಾಯಿತ್ ಪಾಡುವದುಂಡ್. ಈ ನಾಟಕ ರೂಪತ್‌ರ ಕಥೆಲ್ ಚೆನ್ನ ಆಶ್ಲೀಲ ಇಪ್ಪ. ಆಚೇಂಗಿ ಆ ಆಶ್ಲೀಲ ಸಾಧಾರಣಕೆಲ್ಲ ಅರ್ಥ ಆಯಿರೂಂದ್ ಗೇನ ಮಾಡಂಡ. ಅಚ್ಚಕ್ ಸೂಕ್ಷ್ಮತ್‌ಲ್ ಕಲಿಕೂಟಿತಿಪ್ಪ- ಅನ್ನತ ನಾಟಕೀಯ ಪಾಟ್‌ಕ್ ಓರಂದ್ ಗೆರೆರ ಉದಾಹರಣೆ - ನೋಟಿ.

1. ತೋರೆಯೂ ಕುರುಳಿಯೂ
2. ನಾನೂ ಏಡ ಚೆಂಬೆಯೂ
3. ಮೇಪಾಡಿಯಂಡ ಕ್‌ಣ್ಣನೂ ಕ್‌ಪಾಡಿಯಂಡ ಮೂಡಿಯೂ
4. ಮೇದನೂ ಮೇದಿಯೂ
5. ಚಂದಪಂಡ ಕುಂಗು ತಡೆ ಒಡ್‌ತದ್
6. ಕಣಿಯನೂ ಕಣಿಯತಿಯೂ

ಇನ್ನತ ಪೆರ್ಕ್ ಹಾಸ್ಯ ಉಳ್ಳಂತ ನಾಟಕ ರೂಪಕ ಇಂಞಿ ಸಂಗ್ರಹ ಮಾಡತವ್ವೂ

ಉಂಡ್. ಇಕ್ಕೆಲ್ಲ ಈಡ್ ಕೋಲ್ ನಿಂದ್ ಪೋನಾನಗುಂಡ್ ಇನ್ನತ ಜಾನಪದ ಸಾಹಿತ್ಯ ಮರೆಯಾಯಿ ಪೋಚಿ.

**ಜಾನಪದ ಕಳಿ:-** ಇಂದೇಕೂ ಪೆರ್ತ್ ಜಾನಪದ ಕಳಿ ನಾಡ್‌ರೊಳ್‌ಲ್ ಉಂಡ್. ಆಚೇಂಗಿ ಪೆರ್ತ್ ಇಂದ್ ಇಲ್ಲತಾಯಿ ಪೋಚಿ.

**1. ಕಿತ್ತ್‌ಲ್ ನಾಟಿ ತೇಂವ ಓಟ್:** ಇದ್‌ಂಗ್ ಇಕ್ಕ ಚೆನ್ನ ಪ್ರೋತ್ಸಾಹ ಕ್‌ಟ್ಟಿಯಂಡುಂಡ್. ಆಚೇಂಗಿ ಕೊಡಗ್‌ಲೇ ಕೇಳಿಪಟ್ಟಿತಿಂಜ ಕುಟ್ಟಂಚೆಟ್ಟಿರ ಆಕತ್‌ರ ಓಟೇ ನಿಂದ ಪೋಯಿತ್.

**2. ಪರೆಯ ಕಳಿ:** ಇದ್ ಯುದ್ಧ ಕೌಶಲ ಪ್ರದರ್ಶನ.

**3. ಶಕ್ತಿಕೋಲ್:** ದಂಡಾಳ್ ಅಪ್ಪರಿಪ್ಪರ ಅಳತಂಡ್ ಅವಂಡ ಅಂಗಾಳ್‌ಕ್ ಇಂವೊ ಅಂಗಾಲ್ ತಾಕಿಕ್ ಓರ್ ಕೋಲ್‌ನ ಅಡ್ಡ ಪುಡ್‌ಚಂಡ್ ಬಲ್‌ಚಿ ಎಪ್ಪೊಂಡು, ಎದ್ದ್‌ಪೋನಂವೊ ಚೋತತ್.

**4. ಒತ್ತೆ ಪೋಯ್ತ್:** ಇದ್‌ಲ್ ಓರ್ ತಲ್ಲ್‌ಕ್ ವಿರೋಧಿನ ಪಣಿ ಕೂಟಂಡು. ಓರ್ ಊರ್‌ಂಜಿ ಇಂಞ್‌ಓರ್ ಊರ್‌ಕ್ ಒತ್ತೆ ಪೋಯ್ತ್ ಚಾಂಪಿಯನ್ನಳ ಆ ಊರ್‌ಕಾರ ಒಡ್ಡೋಲಗ ಆಯಿತ್ ಕೂಟಿಯ ಪೋಯಿತ್. ಊರ್‌ರ ಪರಂಬ್‌ಲ್ ಈ ಕಳಿ ಸುರು ಆಪಂಜತ್. ಸ್ಪರ್ಧಿಯ ಚಾವಕ್ ತಯಾರಾಯಿತೇ ಬಪ್ಪಂಜತ್. ಕೊಂಬ್‌ಕೊಟ್ಟ್‌ಕ್ ಸರಿಯಾಯಿತ್ ಆಡಿಯಂಡ್, ನೇರ ನೋಟಿತ್, ಆಯ ನೋಟಿತ್ ಒಂದ್‌ಬುಟ್ಟಿಕ ಅವಂಡ ವಿರೋಧಿರ ಪಣಿ ಕೂಡಂಡು. ದಂಡನೆ ಪೊಯ್ಯುವ ಕಯ್ಯ - ಇದ್‌ಂಗೆಲ್ಲ ಇಕ್ಕ ನಾಗರಿಕ ಜಗತ್‌ಲ್ ಅನುಮತಿ ಇಲ್ಲೆ.

**5. ತೋಕಲ್ ಗುರಿಕ್ ಬೊಡಿಬೆಪ್ಪ:** ಇದ್‌ಲ್ ಆಣೂ ಪೊಣ್ಣು ಭಾಗವಹಿಸುವ.

**6. ಭಾರ ನೇತುವೊ:** ಓರಂದ್ ತಿರ್‌ಕೆಲ್ ಮಂದ್‌ಲೆಲ್ಲ ಬೋರೆ ಬೋರೆ ಸೈಸ್‌ರ ಉರ್‌ಟ್ ಕಲ್ಲ್‌ರ ರಾಶಿ ಕಾಂಬ. ಅದ್ ಭಾರ ನೇತುವ ಪೈಪೋಟಿಕುಳ್ಳದ್.

**7.ತೆಂಗೆ ಪೋರ್:** ಇದೂ ಶಕ್ತಿ ಪ್ರದರ್ಶನತ್‌ರ ಪೈಪೋಟಿ. ಶಕ್ತಿರ ಕೂಡ ಯುಕ್ತಿಯೂ ಬೋಂಡು. ತೆಂಗೆನ ಒಬ್ಬ ಪುಡ್‌ಚಂಡ್ ಬಾಲೆಕಾರಡ ಗುಂಪ್‌ಕ್ ಬುಡಂಡು. ಬಾಲೆಕಾರ ಬಲ್‌ಚ ಬುದ್ದಿತ್ ಸ್ವಾಧೀನ ಪಡತಿಯುವಂಡು ನಮ್ಮೆರಂದ್ ಇರ್‌ಲ್ ನೂರಾರ್ ತೆಂಗೆನ ಇನ್ನೆನೆ ಪೋರ್‌ಕ್ ಬುಡುವದಿಂಜತ್.

**ಬಾಯಿ ತೆರವು:** ಬೋರೆ ಬೋರೆ ಆಟ್‌ಕ್ ಕೋಲ್ ಪೊಯ್ಯುವಕಲ್ಲ ತಾಳಬದ್ದವಾಯಿತ್ ಕೋಲ್ ಪೊಯ್ಯುವಕೂ, ಕಾಲೆಡ್‌ಪಕೂ ಸೆರಿಯಾಪಂತ ಮನರಂಜನೆರ ವಾಕ್ಯತ್‌ನ ಓರ್ ಮುಂದಾಳ್ ಪಾಡುವ. ಅಕ್ಕ ಬಾಕಿ ಕೂಟ್‌ಕಾರ "ಪೊಯಿಲೆ

ಪೊಯಿಲೇ"ಂದ್ ಅಥವಾ ಬೊಳಕಾಟ್‌ಲ್ "ಹೋಹೇಹೀಹೋ"ಂದ್ ರಾಗತ್‌ಲ್ ಬಾಯಿ ತೆರ ಕೊಡ್‌ಪ. ಇದ್ ಆಟ್‌ಲ್ ತಪ್ಪಿ ಪೋನ ಮೊಟ್ಟ್‌ನ ಸರಿ ಪಡತಿಯವಕ್ ಅನುಕೂಲ ಆಪ -ಕೋಲಾಟ್‌ಲ್ ಇನ್ನನೆ ಪಾಡುವ.

*ದೇವಳ ತೊತ್ತಿತ್ ಕೋಲ್‌ಕ್‌ಳ್‌ಂಜ-*
*ಪೊಯಿಲೇ ಪೊಯಿಲೇ*
*ಪಾತುರೆ ಕೋಲ್‌ಕ್ ಬೊಳ್ಳುಮುರುವ್ -*
*ಪೊಯಿಲೇ ಪೊಯಿಲೇ*

ಬೊಳ ಕಾಟ್‌ಲ್ ಬಾಯಿತೆರ ಇನ್ನನೆ:-

*ಮಿನ್ನಿ ಮಾಲೆ ದೇಬಿರ ಹೋ ಹೇ ಹೀ ಹೋ*
*ಮಾಲೆ ಚೂಡಿ ಮಂಗ್‌ಲ ಹೋ ಹೇ ಹೀ ಹೋ*
*ಇನ್ನನೆ ಆಟ್‌ರ ಎಡೆ ಎಡೆಯ ಪಾಟ್‌ರ ಬಾಯಿ*
*ತೆರ ಕೊಡ್‌ಪ.*

**ತಪ್ಪಡಕ ಕೆಟ್ಟುವ:** ನಮ್ಮ ನಾಳ್‌ಲಾಡ್, ಏದೇ ಶುಭ ಸಮಾರಂಭತ್‌ಲಾಡ್, ಸಮಾಜತ್‌ರ, ಅಥವಾ ಒಕ್ಕಡ ಪೆರಿಯಂವ ಬೊಳ್‌ಚತ್‌ರೆದಿಕೆ ನಿಪ್ಪ ಬಾಕಿ ಜನ ಎಲ್ಲ ದಂಡ್ ಸಾಲಾಯಿತ್ ನಿಪ್ಪ. ದೇವಡ ನಮ್ಮ ಕೆಟ್ಟ್ ಬುದ್ದಿತ್ ನಮ್ಮ ಕೆಟ್ಟ್ ಪೊಳಿಯಣೆ ಆ ಊರ್‌ಲ್ ಏದೇದ್ ಪಾಳ್ ಕೆಲಸ, ಹಿಂಸಾಚಾರ, ಕೊಲ್ಲ್ ಕೊಲೆ, ಅಶುದ್ಧತ್‌ರ ತಿಂಡಿ ತೀನಿ ಮಾಡುವಕಾಗ. ಊರ್‌ರ ಜನ ಏದೇದ್ ನೇಮ ನೀತಿನ ಪಾಲನೆ ಮಾಡಂಡು; ಇಂತಾನೆಲ್ಲ ಪೆರ್ತ್ ಕಾವ್ಯಮಯ ಆಯಿತ್ ಕೆಟ್ಟಪ್ಪಣೆ ಮಾಡುವ. ಆ ನಿಯಮಕ್ ತಪ್ಪಿ ನಡಂದವಂಗ್ ಎನ್ನತೆನ್ನತ ಕಾಯಕಷ್ಟ ಬಂದ್ ಪೋಕು. ಅವಂಡ ವಂಶ ಎನ್ನನೆ ನಾಶ ಆಯಿ ಪೋಕು ಎಣ್ಣುವಾನ ಕೇಟಕಲೇ ಮೇಲ್ ನೆಟ್ಟುವ. ಈ ತಪ್ಪಡಕತ್‌ನ ಕೇಟವ ಏದೋರ್ ಕೆಟ್ಟ ಕೆಲಸಕ್ ಇಳಿಯತೆನ್ನಕೆ ಮನಸ್‌ನ ಪರಿವರ್ತನೆ ಮಾಡುವ ವಿಶೇಷ ಶಕ್ತಿ ಆ ತಪ್ಪಡಕತ್‌ಲ್ ಅಡಂಗಿತಿಪ್ಪ.

**ಸಂಮ್ಮಂಧ ಅಡಕುವ:** ಮಂಗಲಾನ ಮೂಡಿಕ್ ವಡಿಯಂಡ ಮನೆರ ಹಕ್ಕ್‌ದಾರಿಕೆನ ಕೊಡ್‌ಪದೂ, ಮಂಗಲಾಯಿತ್ ಪೋನ ಮೂಡಿ ವಡಿಯಂಡಲ್ಲಿ ಎಂತೆಂತ ಆಗತ ಚಾಲ್ ಮಾಡುವಕಾಗ ಎಣ್ಣುವ ಸಾಮಾಜಿಕ ನಿಯಮ ಪಿಂಞ ಕಟ್ಟ್‌ಪಾಡ್‌ನ ಕೂಡ್‌ನ ಎಲ್ಲ ಜನಡೆದಿಕೆ ಅಪ್ಪರಿಪ್ಪರ ಪರಂದಂಡ್ ಒತ್ತವಂತ ಸಾಮಾಜಿಕ ನಿಯಮ - ಬಹುಷ್ಯ ಇನ್ನತ ಮೇಲ್ಮಟ್ಟತ್‌ರ ಜಾನಪದ ಕಲೆ ಬೋರೆ ಏದೇಂಗಿ ಸಮಾಜತ್‌ಲೇ ಇಕ್ಕೂಂದಾಪ್‌ಲೆ.

**ಕೊಡವ ಜಾನಪದ ವಾದ್ಯ:** ಚೀನಿ, ಮೋರಿ, ಕೊಂಬ್, ಡೋಲ್, ಜಾಗಟೆ, ದುಡಿ, ತಾಳ ಮಣಿ, ಮೇದ ಪರೆ, ಬಗ್ಗ್ ಇದಿಚ್ಚಕ್.

**ತೆರೆ ಕಟ್ಟುವೊ:** ಚವುಂಡಿ ತೆರೆ, ವಿಷ್ಣುಮೂರ್ತಿ ಕುಳಿಯಂದೆರೆ, ಪಾಷಾಣ ಮೂರ್ತಿ, ಕುಟ್ಟಿಚಾತ, ಬೋಟೆಚವ್ವ, ಅಜ್ಜಪ ತೆರೆ, ಇನ್ನತೆಲ್ಲ ಜಾನಪದ ಕಲೆ ಉಂಡ್. ಆಚೇಂಗಿ ಇದೆಲ್ಲ ದಂಡ್‌ಮೂಂದ್ ಶತಮಾನತ್‌ಂಜಿ ನೆರೆಜಿಲ್ಲ್ ನೆರೆ ರಾಜ್ಯತ್‌ಂಜಿ ಕೊಡಗ್‌ಕ್ ಕೂಡಿಯಂಡ ಕಲೆ. ಮನೆಮನೆಲ್ ಅಜ್ಜಪ್ಪನ ನಿಪ್ಪ್‌ಚ್‌ರುವದ್, ಮನೆಲ್ ಕಾರಣ ಬಪ್ಪದ್ ಮಾತ್ರ ಕೊಡಗ್‌ರ ಮೂಲ. ಜಾನಪದ ಕಲೇಂದ್ ತೋಂದುವ. ಕಾರಣಂಗ್ ಕೊಡ್‌ಪದ್, ಮೀದಿ ಬೆಪ್ಪದೆಲ್ಲ ಕೊಡವಡ ಜಾನಪದಕ್ ಕೂಡುವ.

**ಜಾನಪದ ಆಚರಣೆ:** ಪುತ್ತರಿ, ಕಾವೇರಿ ಚಂಗ್ರಾಂದಿ, ಕೈಲ್‌ಪೊದ್, ಊರೊರಮೆ, ಕಣಿ ಪೂಜುವೊ, ಎತ್ತರ್ ಬೋಳೆಂಜಿ ನೊಗ ಎಡ್‌ಪ, ನರಿಮಂಗಲ, ನಾಟಿಲ್ ಗಣೋದಿಬೆಪ್ಪ, ನಾಟಿ ಓಡ್‌ಚಿರುವ ಪಾಟ್ ಇದೆಲ್ಲ ಶ್ರೇಷ್ಠ ಜಾನಪದ ಆಚರಣೆ.

**ಜಾನಪದ ಕೈಗಾರಿಕೆ:** ತೂರ, ವಾಟೆ, ಪುಂಡ, ಮೊದೆಕಣ್ಣಿ, ಬೊವುಪಿಲ್ಲ್ ಚೀಪೆ, ಮುಂಡೆ (ಕೇದಿಗೆ) - ಇದ್‌ಲೆಲ್ಲ ಮಾಡುವ ಎಚ್ಚಕೊ ವಸ್ತುವ ಕೊಡಗ್ ಮೂಲತ್‌ರ ಜಾನಪದ ಕಲೆ. ಮೀನ್‌ಪುಡಿಪ ಕೋರಿಯ, ಕರಿಕೆಪೊಡ, ಕುತ್ತ್‌ಪೊಡ, ಕೊರಂಬೆ, ಬಲಂಜಿ, ಪಾಲ್‌ಬೆಪ್ಪ ಉದಿ, ಕೂಪದಿ ಪೊರ್‌ಪ ಕೂಬಲೆ, ಪಲಂಬ್, ನೆಟ್ಟಿ ಕಡ್ಡಿರ ಚೀಪೆ, ತಕ್ಕೆ ತೊಂಬಡ, ಮಂಗಲಕರತಿರ ಮಣಿ ತೊಂಬಡ, ಅಕ್ಕಿಕೊಮ್ಮೆ, ನೆಲ್ಲ್ ತುಯ್ಯ - ಇದೆಲ್ಲ ಕೊಡಗ್‌ರ ವಿಶೇಷಪಟ್ಟ ಜಾನಪದ ಕಲೆ.

**ಗಾದೆ:** ಬೋರೆ ಏದೇ ಭಾಷೆಂಜಿ ಆಂಜವತಂತ ಕೊಡವ ಗಾದೆ ಓರಾಯಿರಕ್‌ಂಜಿ ಜಾಸ್ತಿ ಉಂಡ್.

**ಜಾನಪದ ವೈದ್ಯಪದ್ಧತಿ (ಮದ್ದ್‌ಮರ):** ಬಡಿಕೆತ್ತುವೊ, ಕಟ್ರೆಪೊಳಿಪ, ತಡೆ ನೀಕುವ, ಕೊದಿಕುರುಪುವ, ಬೆಲಿ ಎಡ್‌ಪ, ಬೆಲಕುವ, ಬೇರ್ ಬಲಿಪ, ಇದೆಲ್ಲ ಇಂದ್ ಮರೆಯಾಯಂಡುಳ್ಳ ಜಾನಪದ ವೈದ್ಯ ಪದ್ಧತಿ.

**ಬೆಂದು ತಕ್ಕಾರ ಸೂತ್ರ:** ಮನೆಕೆಟ್ಟುವ ಕಲೆ: ಮುಂದ್ ಮನೆ, ಮಡಕ ಮನೆ, ಒತ್ತೆಪೊರೆ ಈ ಇಂಜಿನಿಯರಿಂಗ್ ಚಮತ್ಕಾರ ಎಲ್ಲ ಇಂದ್ ಆಧುನಿಕತೆರ ಪೊಯ್ಯ್‌ನಗುಂಡ್ ಮರೆಯಾಯಂಡುಂಡ್.

ಕೊಡವ ಜನಪದತ್‌ಲ್ ಪೆರ್ತ್ ವಿಶೇಷಪಟ್ಟದ್ ಕೊಡವಡ ಬೋರೆ ಬೋರೆ ಪಾಟ್‌ಲ್ ಬಪ್ಪಂತ ಅಲಂಕಾರ ಸಂಪತ್ತ್, ತತ್ವಸಂಪತ್ತ್, ಪಾರಮಾರ್ತಿಕ ಜ್ಞಾನ ಪಿಂಞ ಭೌಗೋಳಿಕ ಜ್ಞಾನ, ಇನ್ನತೋರ್ ಪರಿಪೂರ್ಣ ಸಮಾಜತ್‌ರ ಸದಸ್ಯಂಗ ನಂಗ ಎಣ್ಣುವ ಕುಶಿ ನಂಗಕಿರಂಡು ಅನ್ನನೆ ನಂಗಡ ಸಾಲ್ ಸಂತಾನಕ್ ಇನ್ನತ ಶ್ರೇಷ್ಠ ಜಾನಪದತ್‌ನ ರಕ್ಷಣೆ ಮಾಡಿತ್ ಬೆಪ್ಪದ್ ನಂಗಡ ಇಂದೇತ ಕರ್ತವ್ಯ.

❖ ❖ ❖

# ಕೊಡವ ಸಾಹಿತ್ಯ ಕೋವುಕ್
# ಡಾ. ಐಚೆಟ್ಟಿರ ಮಾ. ಮುತ್ತಣ್ಣಂಡ ಕೊಡುಗೆ.

ತ್ರಿಭಾಷಾ ಸಾಹಿತೀಂದ್ ಪೆದ ಪೋನ ಡಾ. ಐಚೆಟ್ಟಿರ ಮುತ್ತಣ್ಣ ಓರ್ ವಿಶಿಷ್ಟ ಕೊಡವ ಸಾಹಿತಿ. ಕಯಿಂಜ ಅರುವದ್ ಕಾಲ ತೊಟ್ಟ್ ಕೊಡವಾಮೆನ ಎಳ್‌ದಿ ಬೊಳ್‌ತುವಕಾಯಿತೂ ಕೊಡವ ಸಾಹಿತ್ಯತ್‌ನ ಬೊಳ್‌ತುವಕಾಯಿತೂ, ಕೊಡವ ಸಂಸ್ಕೃತಿನ ಕಾಪಾಡಿಯವಕಾಯಿತೂ ನೈಚಂತ ಸಾಹಸಿ ಸಾಹಿತಿಯೇ ಮುತ್ತಣ್ಣ. ಡಾ. ಐ.ಮಾ. ಮುತ್ತಣ್ಣ ಓರ್ ಕೊಡವ ಕವಿ, ಕೊಡವ ಕಥೆಕಾರ, ಕೊಡವ ನಾಟಕಕಾರ, ಸಂಶೋಧಕ, ಇತಿಹಾಸಕಾರ, ಕೊಡವಾಮೆನ ಪ್ರಚಾರ ಮಾಡ್‌ನ ಪ್ರಚಾರಕನ್ನಲ್ಲತ ಆದರ್ಶ ಕೊಡವ.

ಪತ್ತೊಂಬತ್ತಿಂಬದನೆ ಶತಮಾನತ್‌ರ ಆಖೀರಿ ಪಿಞ್ಞ ಇರುವದನೆ ಶತಮಾನತ್‌ರ ಆದಿಭಾಗ ಎಣ್ಣುವದ್ ಬಲ್ಯ ಕೊಡವಳೆಲ್ಲ ಇಂಗ್ಲೀಷ್ ಜಾತಿಕ್ ಕೂಡಿಪೋಯಿತಿಂಜ ಕಾಲ. ಕೊಡವ ಸಾಹಿತ್ಯಕ್ ನಯಿಪದಿರಡ್, ಕೊಡವ ತಕ್ಕ್‌ಪರೆಯುವದೇ ಮಾನಕೇಡ್‌ಂದ್ ವಿದ್ಯಾವಂತ ಕೊಡವಳೆಲ್ಲ ನಂಬಿತಿಂಜ ಕಾಲತ್, ಮಂಡೆ ನೇತ್‌ನ ಕೊಡವ ಸಾಹಿತಿಯೇ ಮುತ್ತಣ್ಣ. ಓರ್ ಸರಕಾರಕ್ ಮಾಡುವಕ್ ಕಯ್ಯತಾನ ಓರ್ ವ್ಯಕ್ತಿ ಸಾಧನೆ ಮಾಡ್‌ಚಿ. ಓರ್ ವಿಶ್ವವಿದ್ಯಾಲಯ ಮಾಡಿತ್ ಕಾಟುವಕ್ ಕಯ್ಯತಾನ ಐ.ಮಾ. ಮುತ್ತಣ್ಣ ಮಾಡಿತ್ ಕಾಟ್‌ಚಿ.

1935ನೆ ಇಸವಿಲ್ ತಾಂಡ ಪದ್‌ನಂಜನೆ ಬಯತ್‌ಲೇ ಕೊಡವ ತಕ್ಕ್‌ಲೆ ಕವನ ಎಳ್‌ದುವಕ್ ಸುರು ಮಾಡ್‌ಚಿ. 1942ನೆ ಇಸವಿಲ್ ಪ್ರಕಟಣೆ ಆಗತೆ ಮೂಲೆ ಕೂಡಿಪೋಯಿತಿಂಜ ಅಪ್ಪಚ್ಚಕವಿರ ಸುಬ್ರಹ್ಮಣ್ಯ ನಾಟಕ ಪುಸ್ತಕತ್‌ನ ತಾಂಡ ಸ್ವಂತ ಪ್ರಯತ್ನತ್ ಪ್ರಕಟಪಡ್‌ತ್‌ಚಿ.

1943ನೆ ಇಸವಿಲ್ "ಕೊಡವ ಸಂಸ್ಕೃತಿ" ಎಣ್ಣುವ ಚೆರಿಯ ಪುಸ್ತಕತ್‌ನ ಕನ್ನಡ ತಕ್ಕ್‌ಲ್ ಎಳ್‌ದಿತ್ ಪ್ರಕಟ ಪಡ್‌ತ್‌ಚಿ. ಕೊಡವ ತಕ್ಕ್‌ಲುಳ್ಳ ಪಾಟ್, ಸಂಸ್ಕೃತಿ ಸಂಪ್ರದಾಯತ್‌ನೆಲ್ಲಾ ಕೊಡವ ತಕ್ಕ್‌ಲೇ ಎಳ್‌ದಿತ್ ಕೊಡವ ಸಾಹಿತ್ಯ ಸಂಸ್ಕೃತಿನ ಲೋಕಕ್ ಪರಿಚಯ ಮಾಡ್‌ಚಿ.

1938ನೆ ಇಸವಿಂಜ ಆಧುನಿಕ ಶೈಲಿಲ್ ಕೊಡವ ಕವನ ಎಳ್‌ದಿತ್ ಸಭೆ ಸಮಾರಂಭತ್‌ಲೆಲ್ಲಾ ಪಾಡಿತ್ ಜನಮೆಚ್ಚುಗ ಪಡ್‌ಂದಂಡ್ ಬಾತ್. 1943ನೆ ಇಸವಿಲ್ ಮಡಿಕೇರಿಲ್ ಮಕ್ಕಕ್ ಯಯಾತಿರಾಜಂಡ ನಾಟಕ ಪಡ್‌ಪ್‌ಚ್‌ಟ್ಟಿತ್, ಜನಡ ಪ್ರೋತ್ಸಾಹ ಇಲ್ಲತೆ ಮೂಲೆ ಕೂಟಿಪೋಯಿತಿಂಜ ಅಪ್ಪಚ್ಚಕವಿರ ಕೇಳಿನ ಕೊಡಗ್‌ಡಿಯ ಪಬ್ಬ್‌ಚಿಟ್ಟತ್.

ಅನ್ನನೇ ಸುಬ್ರಹ್ಮಣ್ಯ ನಾಟಕ ಪಡ್‌ಪ್‌ಚಿಟ್ಟಿತ್ ಕೊಡಗ್‌ರ ಊರೂರ್ ಸುತ್ತಿತ್ ನಾಟಕ ಪ್ರದರ್ಶನ ಮಾಡ್‌ಚಿ.

1944ನೆ ಇಸವಿಲ್ ಹರದಾಸ ಅಪ್ಪಚ್ಚ ಕವಿ ಸ್ವರ್ಗಸೇರ್‌ನ ಪಿಞ್ಞ ಅಪ್ಪಚ್ಚಕವಿ ಸ್ಮಾರಕ ನಿಧಿ ಸ್ಥಾಪನೆಕಾಯಿತ್ ಪೇರ್ತ್ ನೈಚತ್. 1945ಲ್ ಅಪ್ಪಚ್ಚಕವಿ ಸ್ಮಾರಕೋತ್ಸವ ನಡ್‌ತ್‌ಚಿ. ಈ ಕಾರ್ಯಕ್ರಮತ್ ಶಿವರಾಮ ಕಾರಂತ ಪಿಞ್ಞ ಅ.ನ. ಕೃಷ್ಣರಾಯಂಡಂತ ಕೇಳಿಪಟ್ಟ ಸಾಹಿತಿಯಳ ಬಪ್ಪ್‌ಚಿಟ್ಟತ್. ಕೊಡವ ಸಾಹಿತ್ಯ ಬ್ರಹ್ಮ ಅಪ್ಪಚ್ಚಕವಿನ ಕನ್ನಡ ಸಾಹಿತ್ಯ ಲೋಕಕ್ ಪರಿಚಯ ಮಾಡಿತ್ ಕೊಡವ ಸಾಹಿತ್ಯಕೋರ್ ಶಾಶ್ವತ ನೆಲೆ ಕ್‌ಟ್ಟ್‌ಚಿಟ್ಟತ್.

1946ಲ್ "ಪೂಮಾಲೆ"ಎಣ್ಣುವ ಕವನ ಪುಸ್ತಕ ಪ್ರಕಟ ಪಡ್‌ತ್‌ಚಿ. ಅಂದಾಕಣೆ ಕೊಡವ ತಕ್ಕ್‌ಲ್ ಪಂಡೇತ್‌ರ ಬಾಳೋಪಾಟ್ ರಾಗತ್‌ರ ಪಾಟ್ ಪಿಞ್ಞ ಅಪ್ಪಚ್ಚಕವಿರ ನಾಟಕತ್‌ರ ಪಾಟ್ ಮಾತ್ರ ಇಂಜತ್. ಪೂಮಾಲೆಲ್ ಪುದಿಯ ಕೊಡವ ಪಾಟ್ ಪೊರಬುದ್ದ ಪಿಞ್ಞ ಪಾಟ್ ಎಳ್‌ದುವಯಿಂಗಕ್ ಪುರ್‌ಡ್ ಪುಟ್ಟ್‌ಚಿ.

1948ಲ್ ಕೊಡವ ಆಟ್‌ಪಾಟ್ ಪಡ್‌ಪ್‌ಚ್‌ಡುವ ಪ್ರಯತ್ನ ಮಾಡ್‌ಚಿ. 1949ಲ್ ಅಪ್ಪಚ್ಚಕವಿರ ಭಾವಚಿತ್ರತ್‌ನ ಕೊಡಗ್‌ರ ಅಂಜಿ ಹೈಸ್ಕೂಲ್‌ಲ್ ಅನಾವರಣ ಮಾಡ್‌ಚಿಟ್ಟತ್. ಕೊಡವ ಸಾಹಿತ್ಯ ಪ್ರಚಾರ ಮಾಡ್‌ಚಿ.

1963ಲ್ ಅಪ್ಪಚ್ಚಕವಿರ ಸಾವಿತ್ರಿ ನಾಟಕ, ಯಯಾತಿ ನಾಟಕ ಪಿಞ್ಞ ಸುಬ್ರಹ್ಮಣ್ಯ ನಾಟಕತ್‌ನ ಕ್ನನಡಕ್ ತರ್ಜುಮೆ ಮಾಡ್‌ಚಿ. 1967ಲ್ ಶ್ರೀ ಕಾವೇರಿ ನಾಟಕತ್‌ನ ಕನ್ನಡಕ್ ತರ್ಜುಮೆ ಮಾಡಿತ್ ಕೊಡವ ಸಾಹಿತ್ಯತ್‌ರ ಆಳ ಅಗಲ ಎಚ್ಚಕುಂಡ್‌ಂದೆಣ್ಣುವಾನ ಕನ್ನಡ ಲೋಕಕ್ ಪರಿಚಯ ಮಾಡ್‌ಚಿ.

1964ಲ್ 66 ಕವನ ಸಂಗ್ರಹ ಉಳ್ಳ "ರಾಗಮಾಲೆ" ಎಣ್ಣುವ ಕವನ ಪುಸ್ತಕತ್‌ನ ಪೊರಬೂಕ್‌ಚಿ. 1968ಲ್ ಅಪ್ಪಚ್ಚಕವಿರ ಶತಮಾನೋತ್ಸವ ಮಾಡುವಕಾಯಿತ್ ಪೇರ್ತ್ ಕಪ್ಪಪಟ್ಟತ್. ಅಪ್ಪಚ್ಚಕವಿರರ ನಾಟಕತ್ ಬಪ್ಪ ಪಾಟ್‌ನೆಲ್ಲಾ ಇಂಗ್ಲೀಷ್‌ಕ್ ತರ್ಜುಮೆ ಮಾಡ್‌ನದಲ್ಲತೆ ಓರ್ ಕೈಪುಡಿ ಪುಸ್ತಕ ಮಾಡಿತ್ ಕೊಡವ ಸಾಹಿತ್ಯತ್‌ರ ಚೋದ್‌ನ ಪ್ರಪಂಚಕ್ ಹಂಚ್‌ಚಿ.

1974ಲ್ 180 ಪಾಳೆರ "ಮಣಿಮಾಲೆ" ಎಣ್ಣುವ ಕವನಸಂಗ್ರಹ ಪೊರಬೂಕ್‌ಚಿ. ಇದ್‌ಲ್ ಕೊಡವ ಮನೆಪೆದತ್‌ನೆಲ್ಲ ಅದ್‌ಂಗೊತ್ತ ಶೈಲಿ ಕೂಟಿತ್ ಪಾಟ್ ಕೆಟ್ಟ್‌ನದೋರ್ ವಿಶೇಷ. ಕೊಡವಾಮೆನ ಕೈ ಬುಟ್ಟಂಡುಳ್ಳ ಕೊಡವಳ ಎಚ್ಚರ ಪಡ್‌ತುವಕಾಯಿತ್ ಕೊಡವಡ "ಬುದ್‌ದ್ ಕೆಟ್ಟ" ಪಾಟ್‌ನ ರಚನೆ ಮಾಡಿತ್ ಕ್ಯಾಸೆಟ್ ಬುಡ್‌ಗಡೆ ಮಾಡ್‌ಚಿ. ಕೊಡವ ಜನಪದ ಸಾಹಿತ್ಯತ್ ಬಪ್ಪ ಮಂಗಲ ಪಾಟ್, ಚಾವು ಪಾಟ್‌ನಂತ ಪಾಟ್ ಎಲ್ಲಾನೋ ಪಾಡಿತ್ ಕ್ಯಾಸೆಟ್ ತಯಾರ್ ಮಾಡ್‌ನಕಲೂ ಕೊಡವ,

ಈ ಕ್ಯಾಸೆಟ್‌ನೆಲ್ಲಾ ಎಡ್‌ತಂಡ್ ಕೊಡವ ಸಾಹಿತ್ಯ ಬೊಳ್‌ಚೆಕ್ ಮುತುವರ್ಜಿ ಕಾಟಿತದ್ ಬೇಜಾರತ ಸಂಗತೀಂದ್ ಎಣ್ಣೊಲು.

1987ಲ್ ಬಾಳೋ ಪಾಟ್‌ಕ್ ಅಡ್‌ಂಗ್‌ನ ದೇಶಕೆಟ್ಟ್ ಪಾಟ್, ಕಾವೇರಿ ಪಾಟ್, ಮಂಗಲ ಪಾಟ್, ಚಾವು ಪಾಟ್, ಪುತ್ತರಿ ಪಾಟ್, ಕಲ್ಯಾಟಂಡ ಪೊನ್ನಪ್ಪಂಡ ಪಾಟ್, ಪೊಳ್ಳೆದೇವಿ ಅಪ್ಪಯ್ಯಂಡ ಪಾಟ್, ಕಾಕೋಟ್ ಅಚ್ಚಯ್ಯಂಡ ಪಾಟ್, ಬಿದ್ದಾಟಂಡ ಪೊನ್ನಪ್ಪಂಡ ಪಾಟ್, ಅಲ್ಲತೆ 240 ಕೊಡವ ತಕ್ಕ್‌ರ ಪಳಂಚೊಲ್ಲ್‌ನ ಇಂಗ್ಲೀಷ್‌ಕ್ ತರ್ಜುಮೆ ಮಾಡಿತ್ ಪುಸ್ತಕ ಪ್ರಕಟ ಪಡ್‌ತ್‌ಚಿ. ಪಂಡೇತ ಕಾಲತ್‌ರ "ಪುಣ್ಯಕೋಟಿ" ಎಣ್ಣುವ ಕನ್ನಡ ಪದ್ಯತ್‌ನ ಬಾಳೋಪಾಟ್ ರಾಗತ್ ಒಟ್ಟು 26 ಪಾಳೆ ಎಳ್‌ದಿತ್. ಇದಲ್ಲತೆ, ಅದೇ ಪಾಟ್‌ನ ಚೌಪದಿಲ್ ಕನ್ನಡತುಳ್ಳ ರಾಗತ್‌ಲೇ ಕೊಡವ ತಕ್ಕ್‌ಕ್ ಭಾಷಾಂತರ ಮಾಡಿತ್. 1982ಲ್ ಕೊಡವ ಕನ್ನಡ ಅರ್ಥಕೋಶ ತಯಾರ್ ಮಾಡ್‌ಚಿ.

ಇಂಗ್ಲೀಷ್ ನಾಟಕಕಾರ ಶೇಕ್ಸ್ ಪಿಯರ್‌ರ "ಮರ್ಚೆಂಟ್ ಆಫ್ ವೆನ್ನಿಸ್" ನಾಟಕತ್‌ನ "ಕೊಡಗ್‌ಡ ಕೋಮಟಿ"ಂದ್ ತರ್ಜುಮೆ ಮಾಡಿತ್. "ಜೂಲಿಯಸ್ ಸೀಸರ್" ನಾಟಕತ್‌ನ "ಬೊಟ್ಟೋಳಿ ಬೀರಪ್ಪಾ"ಂದ್ ತರ್ಜುಮೆ ಮಾಡಿತ್. ಸಂಸ್ಕೃತ ಮೂಲತ್‌ರ "ಶಾಕುಂತಲ"ನಾಟಕತ್‌ನೋ ಕೊಡವ ತಕ್ಕ್‌ಕ್ ಭಾಷಾಂತರ ಮಾಡಿತ್.

1994ಲ್ ಅಪ್ಪಚ್ಚಕವಿರ 125 ಬಯತ್‌ರ ನಮ್ಮೆನ ಪೊನ್ನಂಪೇಟೆ ಕೊಡವ ಸಮಾಜತ್ ನಡ್‌ತುವಕ್ ಮೂಲ ಕಾರಣ ಡಾ. ಐ.ಮಾ. ಮುತ್ತಣ್ಣ. ಕೈಂಜ 60ಕಾಲತ್‌ಂಜಿ ಈತರತ್‌ರ ಎಚ್ಚಕೋ ಕಾರ್ಯಕ್ರಮ ನಡ್‌ತಿತ್ ಕೊಡವ ಸಾಹಿತ್ಯ ಬೊಳ್‌ತ್‌ಚಿ.

ಇಕ್ಕ "ತಿತ್ತ್‌ರ ಚೆಡಿಮಾಲೆ" ಎಣ್ಣುವ ಕವನ ಸಂಗ್ರಹತ್‌ನ ಪ್ರಕಟ ಪಡ್‌ತಿಯಂಡುಂಡ್. ಇದತ್ ಕೊಡವಡ ತಪ್ಪುನೆಪ್ಪುನ ಪಾಟಿ ಕಾಟಿತ್. ಕೊಡವ ತಕ್ಕ್‌ಕ್ ತಾಂಡದೇ ಆನ ಓರ್ ಲಿಪಿ ಬೋಂಡೂದೆಣ್ಣವದೇ ಈ ಸಾಹಿತಿರ ವಾದ. ಅದ್‌ಂಗಾಯಿತ್ ಪ್ರಪಂಚತ್‌ರ ತರಾವರಿ ಲಿಪಿರ ಅಧ್ಯಯನ ಮಾಡಿತ್, ಒಟ್ಟು 29 ಅಕ್ಷರತ್‌ರ ವೈಜ್ಞಾನಿಕವಾಯಿತೂ ಪೇರ್ತ್ ಸುಲಭವಾಯಿತೂ ಉಳ್ಳ ಓರ್ ಲಿಪಿಕ್ ರೂಪು ಕೊಡ್‌ತಿತ್, ಕೊಡಗ್‌ರ ಸುಮಾರ್ 600 ಸ್ಕೂಲ್ ಮಕ್ಕಕ್ ಪಡ್‌ಪ್‌ಚ್‌ಡುವ ಏರ್ಪಾಡ್ ಮಾಡ್‌ಚಿ. ಆಚೇಂಗಿ ಕೊಡವ ಸಾಹಿತ್ಯಕ್ ಪ್ರತ್ಯೇಕ ಲಿಪಿ ಬೋಂಡುವಾಂದೆಣ್ಣುವ ತೀರ್ಮಾನತ್‌ನ ಕೊಡವ ಎಡ್‌ತಂಡಿತಿಲ್ಲೆ.

ಕೈಂಜ 45 ಕಾಲತೊಟ್ಟ್ ಕೊಡಗ್ ಬುಟ್ಟಿತ್ ಆಫ್ರಿಕಾ, ಇಂಗ್ಲೆಂಡ್ ಪಿಞ್ಞಾ ಕೆನಡಾ ದೇಶತ್‌ಲಿಂಜಂಡ್ ಕೊಡವ ಸಾಹಿತ್ಯಕ್ ನ್ಯೆಚ ನ್ಯೆಪುವೇ ಓರ್ ಇತಿಹಾಸ. ಇಕ್ಕ ಡಾ. ಐ.ಮಾ. ಮುತ್ತಣ್ಣ ಮೈಸೂರ್‌ಲ್ ನೆಲೆ ನಿಂದಿತ್, ಕೊಡವ ಸಾಹಿತ್ಯ ಇಯಂಗಳಗುಂಡ್ ಇಞ್ಞೂ ಬೊಳಿಯಡ್‌ಂದ್ ಬಯಂದವನ.

❖ ❖ ❖

# ಕೊಡವ ಜನಾಂಗತ್‌ರ ಭವಿಷ್ಯತ್‌ರ ಬಾಳ್ - ಬದ್‌ಕ್

ಕೊಡವ ಪಂಡ್‌ಂಜೇ ಮನುಷ್ಯಂಗಿರಂಡಿಯ ಎಲ್ಲಾ ಆದರ್ಶ ಗುಣ ಬೊಳ್‌ತಿಯಂಡಾನುಂಡ್ ಉಲಗತೇ ಓರ್ ವಿಶಿಷ್ಟ ಜನಾಂಗಾಂದ್ ಕೇಳಿ ನೇಡ್‌ನ ದಾಖಲೆ ಉಂಡ್. ಮನುಷ್ಯಂಗಿರಂಡಿಯ ಸಾಮಾಜಿಕ ಗುಣವಾನ ಧೈರ್ಯ, ತ್ಯಾಗ ಪುರ್‌ಡ್, ಸಹಬಾಳ್ವೆ, ಸಹಕಾರ ಮನೋಭಾವ, ಸ್ವಾಭಿಮಾನ, ನಿಸ್ವಾರ್ಥ, ದೇಶಭಕ್ತಿ, ಕನಿಕರ ಧಾರ್ಮಿಕ ಬುದ್ಧಿ, ಸಹನೆ, ನೈಪು, ಸತ್ಯ ಪ್ರೀತಿ-ಪ್ರೇಮ, ಶಿಸ್ತ್, ನೀತಿ ನಿಯಮ ಇನ್ನತ ಎಲ್ಲಾ ಸಾಮಾಜಿಕ ಗುಣತ್‌ನ ಕೂಟಿತ್ ಎರಕ ಇಟ್ಟಿತ್ ತಯಾರ್ ಮಾಡ್‌ನಂತ ವ್ಯಕ್ತಿತ್ವ ಕೊಡವಡದ್. ಈ ಪೋಲೆ ಕೊಡವಡ ಗುಣಗಾನತ್‌ನ ಕೊಡವಳೇ ಮಾಡಿಯಂಡಿಂಜಕ ಅದ್ ಆತ್ಮಸ್ತುತಿ ಪಿಣ್ಣಾ ಸ್ವಪ್ರತಿಷ್ಠೆ ಆಯಿತ್ ಆ ತಕ್ಕ್‌ಕ್ ಬೆಲೆ ಇಪ್ಪಕಿಂಜ್‌ಲೆ. ಆಚೇಂಗಿ ಕೊಡವಳ ಕಂಡರ್‌ಂಜ ಉಲಗತ್‌ರ ಬೋರೆ ಬೋರೆ ಜನಾಂಗಕಾರ ದಾಖಲೆ ಮಾಡಿತ್ ಬೆಚ್ಚ ಸತ್ಯ ಇದ್.

ಭಾರತತ್‌ಲ್ - ಮತ ಭೇದ, ಜಾತಿ ಭೇದ, ವರ್ಣ ಭೇದಕ್ ಇಂಬ್ ಕೊಡ್‌ಕತ ಓರ್ ಜನಾಂಗ ಉಂಡೇಂಗಿ ಅದ್ ಕೊಡವ. ಹಿಂದುವಡ ಎಲ್ಲಾ ದೇವಳ ಪೂಜೆ ಮಾಡುವ ಮುಸಲ್ಮಾನಡ ಮಸೀದಿರ ಬರಿಯ ಕಡ್‌ಪಕ ನಿಂದಿತ್ ಕೈ ತೊತ್ತಿತೇ ಪೋಪ. ಏಸುರ ಫೋಟೊತ್‌ನ ಮನೆಲ್ ಬೆಚ್ಚಂಡ್ ಪೂಜುವ. ಹರಿಜನಾಂದ್ ಪಂಡ್ ಕಾಲತ್‌ಂಜಿ ತೆರ್ಪಬೆಚ್ಚ ಜಾತಿಕಾರ ಕೊಡವಡ ಅಡಿಗೆ ಮನೆಲ್ ಎಲ್ಲಾ ಕಾರ್ಬಾರ್ ಮಾಡುವ. ಎಲ್ಲಾ ಜಾತಿಕಾರಕೂ ಕೊಡವಡ ಮನೆಲ್ ಮುಕ್ತ ಪ್ರವೇಶ ಉಂಡ್.

ಕಳ್ಳತನ, ಚದಿ, ಪೊಟ್ಟ್ ಪಿಣ್ಣಾ ಅಧರ್ಮ ಅರಿಯತಂವ ಕೊಡವ. "ಸೂರ್ಯ ಉದಿಪಾಂಗ್ ಮಿಣ್ಣಾ ಕೇಕಿಯ ಪಡಿ ತೊರ್‌ಂದ್ ಬೆಕ್ಕಂಡು, ಬೈಟ್ ಸೂರ್ಯ ತಾಂದ ಪಿಣ್ಣಾ ಮಾತ್ರ ಮನೆಕ್ ಪಡಿ ತಾತಂಡು" ಎಣ್ಣುವ ನಿಯಮ ಇಂಜತ್. ಎಣ್ಣ್‌ನಕ ಕಳ್ಳತನ ಎಣ್ಣುವ ಶಬ್ಧ ಇಂಚ್‌ಲೆ. ಒಕ್ಕ ಮಕ್ಕಡೊಳ್‌ಲೂ, ಊರ್ ನಾಡ್‌ಲೂ, ಸಂಘ-ಸಂಸ್ಥೆ, ಸಮಾಜತ್‌ಲ್ ಒರ್ಮೆ ಇಂಜತ್. ಒರ್ಮೆಕೊತ್ತ್ ಪೆರ್ಮೆ ಇಂಜತ್.

1951ನೆ ಇಸವಿಲ್ ಕೊಡಗ್ ಕಾಂಗ್ರೆಸ್‌ಲ್ ದಂಡ್ ಪಾರ್ಟಿ ಆಚಿ. ಕೊಡಗ್‌ನ ಕರ್ಣಾಟಕಕ್ ಕೂಟುವಕಯ್ಯಾಂದೆಣ್ಣುವ ಪ್ರತ್ಯೇಕ ಪಾರ್ಟಿ ಪುಟ್ಟ್‌ಚಿ. ಅಕ್ಕಲೆ, ಕೊಡಗ್‌ಲುಳ್ಳ ಬೋರೆ ಜಾತಿಕಾರಕ್ ಕೊಡವಡ ಮೇಲೆ ಪಗೆ ಮೊಳ್‌ತತ್. ಅಕ್ಕತ್‌ಂಜೇ ಕೊಡವ ವಿರೋಧಿ ಭಾವನೆ ಬೊಳ್‌ಂದಂಡ್ ಬಂದಿತ್ ಇಂದ್ "ಕೊಡವ" ಎಣ್ಣುವ ಶಬ್ದತ್‌ನೇ ತಿಕ್ಕಿತೆಡ್‌ಕೊಂಡೂಂದ್ ಪ್ರಯತ್ನ ನಡ್‌ಂದಂಡುಳ್ಳದ್ ಗುಟ್ಟಾಯಿತ್ ಇಲ್ಲೆ.

1956ನೆ ಇಸವಿಲ್ ಕೊಡಗ್ ವಿಶಾಲ ಮೈಸೂರ್‌ಕ್ ಕೂಡ್‌ನಲ್ಲ್‌ಂಜಿ ಲಂಚ, ಮೋಸ, ಕಳ್ಳತನ, ಸ್ವಜನ ಪಕ್ಷಪಾತ, ಪರಿಸರ ನಾಶ, ಜಾತಿ ಮತ ದ್ವೇಷತ್‌ನಂತ ಸಾಮಾಜಿಕ ರೋಗ ಕೊಡಗ್‌ಲ್ ದುಂಬ್‌ಚಿ.

ಭಾರತ ಸರಕಾರತ್‌ರ ಮೀಸಲಾತಿ ನೀತಿನುಂಡ್ ಕೊಡವಕ್ ಎನ್ನತ ಸಾಮರ್ಥ್ಯ ಉಂಡೇಂಗಿಯೂ ಅದ್‌ಂಗ್ ಬೆಲೆ ಇಲ್ಲತೆ ಕೊಡವ ಮೂಲೆ ಕೂಡಿ ಪೋಚಿ.

1973ನೆ ಇಸವಿರ "ಉಪ್ಪಂವಂಗೇ ಭೂಮಿ" ಎಣ್ಣುವ ಕಾನೂನು ಬಂದಿತ್ ಕೊಡಗ್‌ಲಿಂಜ ಪ್ರೀತಿ, ಶಾಂತಿ, ವಿಶ್ವಾಸ ಮಾಯ ಆಯಿಪೋಚಿ. ಕೊಡವ ಚೋರೆ ನೀರಾಕಿತ್ ನೈಚಿತ್ ಚೆನ್ನ ಅನುಕೂಲ ಸ್ಥಿತಿಕ್ ಬಂದಕಲೂ ಪೊರ್‌ಮೆಂಜ ಬಂದ್ ಕೂಡ್‌ನ ಕರ್ವು ಪಣಕಾರಡ ಕೂಡೆ ಪೈಪೋಟಿ ನಡ್‌ತ್‌ವಕ್ ಕಯ್ಯತಾಯಿತ್, ಆಸ್ತಿಪಾಸ್ತಿ ಮಾರಿತ್ ಪೇಟೆ ಪಟ್ಟಣಕ್ ವಲಸೆ ಪೋಪಕ್ ಸುರುವಾಚಿ.

1993-94ನೆ ಕಾಲತ್‌ಲ್ ಒಮ್ಮಕೇ ಕಾಫಿಕ್ ಚೆನ್ನ ಕ್ರಯ ಪೊಂದ್‌ನಾನುಂಡ್ ಕುಂಡ್‌ಲ್ ತಾಂದ್ ಪೋಯಿತಿಂಜ ಕೊಡವ ಚೆನ್ನ ಮಂಡೆ ನೇತುವಕಾಚಿ. ಕಾಫಿನುಂಡ್ ಅನುಕೂಲ ಕೂಡ್‌ನ ಕೊಡವಡ ಸಂಖ್ಯೆ ಮಾತ್ರ ಪೇರ್ತ್ ಕಮ್ಮಿ ಉಂಡ್.

ಇನ್ನನೆ ಎಲ್ಲಾ ತರತ್‌ಲೂ ಸಾಮಾಜಿಕ ಪರಿವರ್ತನೆ ಆಯಂಡ್ ಬಪ್ಪಕ ಕೊಡವಡ ನೀತಿ ನಡತೆ, ಗುಣ ಮನವೂ ಬದಲಾಯಂಡ್ ಬಾತ್. ಆದಿಕಾಲತ್‌ಂಜಿ ಕೊಡವಳ ತಿರಿಪಕ್ ಇಂಜದೇ ಕೊಡವಡ ವಿಶೇಷ ತರತ್‌ರ ಪೆದ, ಪೊರಪಾಡ್ ಪಿಣ್ಣ್ ನಡ್‌ಪು. ಇಂದ್ ಆಣ್‌ಕೂ, ಪೊಣ್ಣ್‌ಕೂ ಕೊಡವ ಪೆದ ಇಡುಲೆ. ಪೊರಪಾಡ್ ಬದ್‌ಲಾಯಂಡುಂಡ್. ಸಂಸ್ಕೃತಿ ಪರಂಪರೆ ಮರೆಯಾಯಂಡುಂಡ್. ಇದ್‌ನೆಲ್ಲಾ ಅರ್‌ಂಜ ಸಮಾಜ ಶಾಸ್ತ್ರಜ್ಞಂಗ ಇಞ್ಞಿ ಓರ್ ಶತಮಾನತ್‌ರೊಳ್‌ಲ್ "ಕೊಡವ" ಎಣ್ಣುವ ವಿಶಿಷ್ಟ ಜನಾಂಗ ಕಣ್ಮರೆ ಆಯಿಪೋಪ ಸಾಧ್ಯತೆ ಉಂಡ್‌ಂದ್ ಅಭಿಪ್ರಾಯ ಪಡುವ. ಏದ್ ಪದ್ಧತಿ, ಪರಂಪರೆನ ಬುಟ್ಟಂಡ್ ಬಂದಕಲೂ ಬಟ್ಟಕ್ ಕೂಟೊಲು. ಆಚೇಂಗಿ ಕೊಡವಳೇ ಇಲ್ಲತಾಯಿಪೋನಕ ಪುದಿಯದಾಯಿತ್ ಸೃಷ್ಟಿ ಮಾಡುವಕ್ ಕಯ್ಯುವಾ?

ಕೊಡವಳೇ ಇಲ್ಲತಾಯಿ ಪೋಪಂತ ಅಪಾಯ ಉಂಡ್. ಅದ್ ಎನ್ನತಂದೆಣ್ಣ್‌ನಕ ಕೊಡವ ಪಾಲನೆ ಮಾಡಿಯಂಡುಳ್ಳ "ಸಂತಾನ ನಿಯಂತ್ರಣ" ಕ್ರಮ. ಸಂತಾನ ನಿಯಂತ್ರಣ ಓರ್ ರಾಷ್ಟ್ರೀಯ ನೀತಿ. ಆಚೇಂಗಿ ಇದ್‌ನ ಕೊಡವಳನ್ನಕೆ ಪಾಲನೆ ಮಾಡುವ ಜನಾಂಗ ಬೋರೆ ಕಾಂಬುಲೆ. "ಒಂದ್ ದಂಡ್ ಬೋಂಡು, ಮೂಂದ್ ಮಕ್ಕ ಮದಿ" ಎಣ್ಣುವ ಪ್ರಚಾರ ಸುರು ಆಪಾಂಗ್ ಮಿಞ್ಞಲೇ ಕೊಡವ ಒರೇ ಕುಞ್ಞಿಕ್ ಮನ್ನಾ ಮಾಡಿರ್‌ತ್. ಇದೋರ್ ರಾಷ್ಟ್ರೀಯ ದುರಂತಾಂದ್ ಕೊಡವ ಅರ್‌ಂಜ್‌ಲೆ!

ಪಂಡ್ ಆಸ್ತಿಪಾಸ್ತಿನ ಲೆಕ್ಕ ಇಟ್ಟಿತ್ ಮಕ್ಕಳ ಪೆರುವ ಇಂಜ್‌ಲೆ. ಮಕ್ಕಳೇ

ಆಸ್ತೀಂದ್ ನಂಬಿತ್ ಸಂಸಾರ ಪೆರ್‌ತತ್. ಇಂದ್ ನೂರಾರ್ ಏಕ್ರೆ ತೋಟ, ಕೋಟಿ ಪಣತ್‌ರ ಸಂಪಾದನೆ ಉಳ್ಳಂವನೂ ಒರ್ ಕುಞ್ಞಿಕ್ ಮಿತಿ ಮಾಡಿಯಂಡುಂಡ್. ಈ ಪರಿಸ್ಥಿತಿಕ್ ಕಾರಣ ಎಂತ? ಇದ್‌ಂಡ ಪರಿಣಾಮ ಎನ್ನಾಕು? ಇದ್‌ಂಗ್ ಪರಿಹಾರ ಎಂತೇಂದ್ ಕೊಡವ ಗೇನ ಮಾಡಂಡಿಯ ಕಾಲ ಬಂದಿತೆತ್ತಿತ್.

ಕಾರಣ, ಒರೇ ಕುಞ್ಞಿ ಮದಿ ಎಣ್ಣುವದೋರ್ ಶೋಕಿ ಆಯಿಪೋಯಿತ್. ಜಾಸ್ತಿ ಪೆತ್ತಂಡ್ ಎನ್ನಂಗ್ ಕಷ್ಟ ಪಡಂಡಿಯೆ ಎಣ್ಣುವ ಮನೋಭಾವ. ಇದೆಲ್ಲಾನ ಮೀರ್‌ನ ಕಾರಣ ಕೊಡವಡಲ್ಲಿ ಮೂಡಿ ಮಕ್ಕಳ ಮಂಗಲ ಕಯಿಬಿಟಿ ಕೊಡ್‌ಪದ್. ಇದೊಂದ್ ಮಾತ್ರ ನೇರಾಯಿತೂ ಅಪ್ಪವ್ವಂಡ ಮಂಡೆ ತಿಂಬ ಸಮಸ್ಯೆ ನೇರೆ. ಸುರೂವೆತ್‌ರ ಕುಞ್ಞಿ ಮೂಡಿ ಆಯಿಟಕ ದಂಡನೆರದೂ ಮೂಡಿ ಆಯಿರೂಂದ್ ಬೊತ್ತಿತ್ ಸಂತಾನ ನಿಯಂತ್ರಣ ಮಾಡಿಯವ ದಂಪತಿಯ ಪೇರ್ತ್ ಉಂಡ್.

ಪರಿಣಾಮ:-ಸಂಸಾರತ್‌ಲ್ ಒರೇ ಕುಞ್ಞಿ ಆನಕ ಸ್ಪರ್ಧಾ ಮನೋಭಾವ ಬೊಳಿಯುವದೇ ಇಲ್ಲೆ. ಪಂಡ್ ಅವ್ವ ಒಟ್ಟಿ ಚುಡುವಕ "ನಾಕ್ ದಂಡ್ ಪೋರ, ಅಂವ ಮೂಂದ್ ತಿಂದ್‌ರ್‌ತ್" ಎಣ್ಣುವ ಪೈಪೋಟಿ ಮನೆರೊಳ್‌ಲ್ ಬೊಳಿಯುವ ಇಂಜತ್. ಇಂದ್ ಪತ್ತ್ ಬಯತ್‌ರ ಮಕ್ಕಡ ಬಾಯಿಕ್ ಒರಾತತ್ ತೀತುವ ಅವ್ವಂಗಳ ಕಾಂಗೊಲು! ಅನ್ನನೇ ಬೊಳ್‌ಂದ ಮಕ್ಕ ಇಂದೇತ ಸ್ಪರ್ಧಾ ಜಗತ್ತ್‌ಲ್ ಓರ್ ಮೊಟ್ಟ್ ಬಯ್ಯಲೇ ಆಯಂಡುಳ್ಳದ್ ಕಾಂಬ. ಕೊಡವಳನ್ನಕೇ ಬೋರೆ ಜನಾಂಗಕಾರಳೂ ಸಂತಾನ ನಿಯಂತ್ರಣ ಮಾಡ್‌ನಕ ಪರೋಲೆ. ಇಂದ್ ಪರಿಸ್ಥಿತಿ ಅನ್ನನೆ ಇಲ್ಲೆ. ಬೊಳೆನ ಕಳೆ ಮುಚ್ಚಿರುವನ್ನಕೆ ಆಯಿತ್.

ಪರಿಹಾರ:- ಪೆರಿಯವು ಪಿಞ್ಞಾ ಕೊಡವ ಸಂಘ ಸಂಸ್ಥೆಕಾರಳೂ ವ್ಯವಸ್ಥಿತ ಪ್ರಚಾರತ್‌ರ ಮೂಲಕ ಕೊಡವಡ ಜನಸಂಖ್ಯೆ ಜಾಸ್ತಿ ಆನಕ ಬೊತ್ತಂಡಿಯ ಕಾರಣ ಇಲ್ಲೇಂದ್ ಯುವ ಪೀಳಿಗೆರ ಮನಸ್ಸ್‌ಕ್ ಪುಡಿಪ್‌ಚಿಡೊಂಡು. ಬಡತನಕ್ ಬೊತ್ತಿತ್ ಮಕ್ಕಳ ಪೆರುವಕ್ ಮಡಿಪ ದಂಪತಿಯ ದುಂಬಾ ಇಪ್ಪ. ಅದ್‌ಂಗಾಯಿತ್ ಪ್ರತಿಯೋರ್ ಕೊಡವ ಸಮಾಜತ್‌ಲೂ, ಪ್ರತಿಯೋರ್ ಒಕ್ಕಡ ಫಂಡ್ ಉಳ್ಳಲ್ಲಿಯೂ ಓರ್ ವಿಶೇಷ ನಿಧಿ ಸ್ಥಾಪನೆ ಮಾಡೊಂಡು. ಮೂಂದನೆ ಕುಞ್ಞಿ ಅಥವಾ ಮೂಂದಾಂಗ್‌ಞ್ಞಿ ಜಾಸ್ತಿ ಪೆರುವ ಸಂಸಾರತ್‌ರ ಮಕ್ಕಡ ವಿದ್ಯಾಭ್ಯಾಸತ್‌ರ ಖರ್ಚಿನ ಸಂಘ-ಸಂಸ್ಥೆ, ಸಮಾಜಕಾರ ವಹಿಸಿಯವಂಡು. ಮೂಂದನೆ, ನಾಲನೆ ಕುಞ್ಞಿನ ಪೆತ್ತ ಸಂಸಾರ ಕಷ್ಟತ್ ಉಂಡೇಂಗಿ ಅಯಿಂಗಕ್ ಪ್ರೋತ್ಸಾಹ ಪಣ ಕೊಡ್‌ಪಕ್ ಏರ್ಪಾಡ್ ಆಂಡು.

ಈ ನ್‌ಟ್ಟ್‌ಲ್ ಪ್ರಯೋಗಾರ್ತ ನಿಧಿ ಸ್ಥಾಪನೆ ಮಾಡುವಕ್ ಸಮಾಜಕಾರ ಮಿಞ್ಞಾಕ್ ಇಳಿಯೊಂಡೂಂದ್ ನಾಡ ಸಲಹೆ. ಇದ್ ಬಪ್ಪ 21ನೆ ಶತಮಾನಕ್ ಕೊಡವ ಸಂಘ-ಸಂಸ್ಥೆರ ಕೊಡುಗೆ ಆಡ್.

❖ ❖ ❖

# ಈ ಮುತ್ತಣ್ಣಂಗ ದಾರ್?

17.4.92ನೇ ಬ್ರಹ್ಮಗಿರಿಲ್ ಬಿದ್ದಾಟಂಡ ಪೊನ್ನಪ್ಪ, ಅಲ್ಲಿಂಜಿ ಬೊಳಕಾರಂಡ ಡಾಲಿ ಮಂದಣ್ಣ ಪಿಂಞ ಕ್ಯಾಪ್ಟನ್ ಐಚೆಟ್ಟಿರ ಮುತ್ತಣ್ಣ - ಇವು "ಈ ಮುತ್ತಣ್ಣ ದಾರ್"ಂದ್ ಚರ್ಚೆ ಮಾಡ್ನ ವಿಷಯಕ್ ಸಂಮ್ಮಂಧಪಟ್ಟನೆಕೆ ಈ ಲೇಕನ ಅಯೆಚದಾಚಿ. ಡಾ||ಐ.ಮಾ ಮುತ್ತಣ್ಣಂಡ ಸಂಶೋಧನಾ ಎಳ್ತ್‌ರ ಭಾವಾಂತರ ಇದ್.

ಈ ದಂಡ್ ಕೇಳಿಪಟ್ಟ "ಅರಬೀ" ಮುತ್ತಣ್ಣಂಗಂಡ ಪೈಕಿ ಒಬ್ಬೊ ಮುಹಮ್ಮದ್ ಪೈಗಂಬರಂಡ ಕಾಲತ್ ಕ್ರಿ.ಶ. 7ನೇ ಶತಮಾನತ್ ಇಂಜ ಒರ್ ಮಿಲಿಟರಿ ಕಮಾಂಡರ್, ದಂಡನೇ ಅರಬೀ ಮುತ್ತಣ್ಣ, ಪನ್ನೊಂದನೇ ಶತಮಾನತ್‌ಲಿಂಜ ಒರ್ ಕೇಳಿಪಟ್ಟ ಜ್ಯೋತಿಷ್ಯ ಶಾಸ್ತ್ರಗಾರ. ದಕ್ಷಿಣ ಹಿಂದೂಸ್ಥಾನತ್ ಪ್ರಚಾರ ಉಳ್ಳ ಈ ಪೆದ ಅಲ್ಲಿಕ್ ಎನ್ನನೆ ಪೋಚೀಂದೆಣ್ಣುವ ವಿವರತ್‌ನ ಡಾ|| ಐಚೆಟ್ಟಿರ ಮುತ್ತಣ್ಣಂಡ ಸಂಶೋಧನೆಂಜಿ ಅರಿಂಜವಲು.

ಇಸ್ಲಾಂ ಧರ್ಮ ಬಪ್ಪಾಂಗ್ ಮುಪ್ಪಡೆ ಅರಬಂಗ ಭಾರೀ ಬಯ್ಯಲುಳ್ಳ ಜನಾಂಗ ಆಯಿತಿಂಜತ್. ರೋಮ್ ಸಾಮ್ರಾಜ್ಯ ನಾಶ ಆನ ಪಿಂಞ ಪಶ್ಚಿಮ ಏಷ್ಯಾಕ್ ಕೂಡಿತಿಂಜ ರೋಮ್ ಸಾಮ್ರಾಜ್ಯತ್‌ರ ಜನ ಬೈಜಂಟಿಯನ್, ಅಲ್ಲೇಂಗಿ ಕಾನ್‌ಸ್ಟಾಂಟಿನೋಪಲ್‌ಂಜಿ ಆಳಲ್ಪಡುವಯಿಂಜತ್. ಈ ಭಾಗಕ್ ಗ್ರೀಸ್, ಟರ್ಕಿ, ಸಿರಿಯಾ, ಈಜಿಪ್ಟ್‌ರನ್ನತ ಇಕ್ಕತ ದೇಶ ಕೂಡಿತಿಂಜತ್.

ರೋಮ್ ಚಕ್ರವರ್ತಿ ಜಸ್ಟೀನಿಯನ್ (ಕ್ರಿ.ಶ.527-565) ಚತ್ತಿತಾಪದು, ಸಾಮ್ರಾಜ್ಯಕ್ ನಾಯಕನಿಲ್ಲತಾಚಿ. ಖೊರೋಸ್ ಪಾರ್ವಿಜ್ ಎಣ್ಣುವಂವ್ರೊ ಕ್ರಿ.ಶ. 620ಲ್ ಪಶ್ಚಿಮ ಏಷ್ಯಾಕ್ ಕೂಡ್‌ನ ದೇಶತ್‌ನೆಲ್ಲ ಪರ್ಷಿಯಾ ಸಾಮ್ರಾಜ್ಯಕ್ ಕೂಟ್‌ಚಿ. ಕ್ರಿ.ಶ. 628ಲ್ ಖೊರೋಜ್ ಪಾರ್ವಿಜ್‌ರ ಕೊಲೆಯಾಚಿ.

ಸುಮಾರ್ 1600 ಕಾಲಕ್ ಬಯ್ಯ ಗ್ರೀನ್ ಪಿಂಞ ಬೈಂಜಟಿಯನ್ ಪ್ರದೇಶತ್‌ರ ಸುತ್ತ ಮುತ್ತ ಸನಾತನ ಕ್ರೈಸ್ತ ಧರ್ಮ ಪಬ್ಬಿತಿಂಜತ್. ಅದ್‌ಂಡ ಕೂಡೆ ಯೆಹುದ್ಯಂಗಳೂ ಪೆರ್ತ್ ಇಂಜತ್. ಈ ದಂಡ್ ಜನಾಂಗತ್‌ರೊಳ್‌ಲ್ ಯುದ್ಧ ಆಯಂಡ್ ಇಂಜತ್.

ಕ್ರಿ.ಶ. 20-8-570ಲ್ ಮುಹಮ್ಮದ್ ಪುಟ್ಟಿತ್, ಇಸ್ಲಾಂ ಧರ್ಮ ಆಚಿ. ಪೈಗಂಬರ್ ಚತ್ತದು, ಬೋರೆ ಬೋರೆ ಬುಡ ಕಟ್ಟ್‌ಕ್ ಅಡಂಗ್‌ನ ಅರಬಂಗ ತಂಗಡೊಳ್‌ಲೇ ಯುದ್ಧ ಮಾಡುವಯಿಂಜತ್. ಇದ್‌ನ ಕಂಡ ಖಲೀಫ್ ಅಬೂಬಕರ್,

ಗಡಿ ಪ್ರದೇಶತ್‌ಲೆಲ್ಲ ಉಳ್ಳ ಬೋರೆ ಧರ್ಮಕಾರಡ ಕೂಡ ಯುದ್ಧ ಮಾಡಿತ್, ಆಯಿನೆಲ್ಲ ಇಸ್ಲಾಂಲ್ ಕೂಟುವಕ್ ಅರಬಂಗಕ್ ಪ್ರೋತ್ಸಾಹ ಕೊಡ್‌ತತ್.

ಅರಬಂಗಡಲ್ಲಿ ಸುಮಾರ್ ರಾಜವಂಶ ಇಂಜತ್. ಅದ್‌ಲ್ ಅವೇಜಾ ಪಿಂಞ ಲಕ್ಮಿಡ್ ಬಲಪಟ್ಟವು. ಅಕ್ಕ ನಡ್‌ಂದ ಯುದ್ಧತ್ ಪರ್ಷಿಯಾಕಾರ ಲಕ್ಮಿಡ್ ರಾಜನ ಚೋಪ್‌ಚಿಟ್ಟತ್.

ಮುತ್ತಣ್ಣ ದಾರ್?:- ಅರೇಬಿಯಾತ್‌ರ ಪೂರ್ವ ಗಡಿಕ್ ಕೂಡಿತಿಂಜ ಮುತ್ತಣ್ಣ - ಇಬ್ನ್ ಹರಿಥಾ ಎಣ್ಣುವಂವೊ ಪರ್ಷಿಯಾತ್‌ರ ಕೂಡ ಯುದ್ಧ ಮಾಡುವಕ್ ಮದೀನಾಕ್ ಪೋಯಿತ್ ಖಲೀಫಂಡ ಅನುಮತಿ ಕೇಟಂಡ್ ಬಾತ್, ಈ ಅರಬೀ ಪಾರ್ಸಿ ಗಡಿ ಕಾಳಗತ್ ಅರಬಂಗ ಗೆದ್ದತ್. ಇದ್‌ಲ್ ಭಾಗವಹಿಸ್‌ನ ಇಂಞೊಬ್ಬ ಅರಬ್ ವೀರ ಬೆನಿಬಕರ್.

ಕ್ರಿ.ಶ. 633ಲ್ ಮುತ್ತಣ್ಣ ಇಬ್ನ್ ಹರೀಥಾನೂ, ಖಲೀದ್ ಇಬ್ನ್ ವಾಲೀದನೂ ಪರ್ಷಿಯಾ -ಬೈಜಾಂಟಿಯನ್ ರಾಜ್ಯತ್‌ರ ಕೂಡ ಯುದ್ಧ ಮಾಡ್‌ಚಿ. ಸೈನ್ಯ ಬಲ ಪೋರತೆ ಗೆಲ್ಲುವಕ್ ಕಯಿಂಜಿಲೆ. ಚೆನ್ನ ದಿನತ್‌ಲೇ ಮುತ್ತಣ್ಣ ಹರಿಥಾ ಪಿಂಞ ಬಲೀದ್ ಉತ್ತರ ಗಡಿರ ಹೀರಾ ಪಟ್ಟಣತ್‌ನ ವಶ ಪಡ್‌ತಿಯಂಡತ್. ಇದಾನದು ಅನ್ಬಾರ್ ಪ್ರಾಂತ್ಯ ಪುಡ್‌ಚತ್. ಕ್ರಿ.ಶ. 634ಲ್ ಬೈಜಾಂಟಿಯನ್‌ರ ದಕ್ಷಿಣ, ಪೂರ್ವ ಭಾಗತ್‌ನೆಲ್ಲ ಗೆದ್ದಿತ್, ಜನಳ ಇಸ್ಲಾಂಕ್ ಕೂಟ್‌ಚಿ.

ಖಲೀದ್ ಮೆಸಪೊಟಾಮಿಯಕ್ ಪೋಂಡಿಯಾಚಿ. ಮುತ್ತಣ್ಣ ಹರಿಥಾನೇ ಅರಬ್ ಪಡೆರ ಕಮಾಂಡರ್ ಆಚಿ. ಖಲೀಫ್ ಅಬು ಬಕರ್ ಕ್ರಿ.ಶ. 634 ಆಗಸ್ಟ್‌ಲ್ ಚತ್ತತ್. ಅಕ್ಕ ಮುತ್ತಣ್ಣ ಇಬ್ನ್ ಹರಿಥಾ ಅಲ್ಲಿಯೇ ಇಂಜತ್,. ತಂಗಡ ದೇಶ ಪಿಂಞ ಮತಕಾಯಿತ್ ಯುದ್ಧ ಮಾಡಂಡೂಂದ್ ಮದೀನಾ ಮಸೀದಿಲ್ ಮುತ್ತಣ್ಣ ಒರ್ ಭಾಷಣ ಮಾಡ್‌ಚಿ.

ಪುದಿಯ ಖಲೀಫ್ ಓಮರ್ ಅಬು ಉಬೈದ್ ಎಣ್ಣುವಂವೊನ ಸೇನೆರ ಪ್ರಧಾನ ನಾಯಕ ಮಾಡ್‌ಚಿ. ಈ ಅಬು ಉಬೈದ್ ಪರ್ಷಿಯಾ ಪಡೆರ ಒರ್ ಆನೆರ ಚವುಟ್‌ಕ್ ಕೆಣ್‌ಂಜಿತ್ ಪಜ್ಜಿ ಆಯಿಪೋಚಿ. ಪುನಃ ಮುತ್ತಣ್ಣ ಹರಿಥಾನೇ ಪ್ರಧಾನ ಸೇನಾನಿ ಆಚಿ.

ಕ್ರಿ.ಶಃ 635 ಲ್ ಮುತ್ತಣ್ಣ ಬಲ್ಯ ಸೈನ್ಯ ಕೆಟ್ಟಿತ್, ಡೆಮಾಸ್ಕಸ್ ಕೆತ್ತಮೆ ಉಳ್ಳ ಪ್ರದೇಶತ್‌ನೆಲ್ಲ ಪುಡ್‌ಚತ್, ಬುವೈದ್ ಎಣ್ಣುವಲ್ಲಿ ಪಡೆ ಪೋಯಂಡಿಪ್ಪಕ ಭಾರೀ ಗಾಯ ಆಯಿತ್ ಕ್ರಿ.ಶ. 636 ಸೆಪ್ಟಂಬರ್‌ಲ್ ಚತ್ತತ್. ಅಂವೊ ನಡ್‌ತ್‌ನ ಪರ್ಷಿಯ ಗಡಿಕಾಳಗ ಚರಿತ್ರೆಲ್ ಕೇಳಿಪಟ್ಟತ್.

ದಂಡನೇ ಮುತ್ತಣ್ಣ:- ಪಂಡೇತ ಬ್ಯಾಬಿಲೋನಿಯ, ಅಸ್ಸೀರಿಯನ್ ನಾಗರೀಕತೆರ ಕಾಲತ್ ವಿಜ್ಞಾನ, ಗಣಿತಶಾಸ್ತ್ರ ಇದೆಲ್ಲ ಬೊಳ್‌ಂದಿತಿಂಜತ್. ಶಾಸ್ತ್ರೀಯ ವಿಧಾನತ್ ಭಾರೀ ಬಲ್ಯ ಗ್ರಂಥ ಎಳ್‌ದ್‌ನ ಕೇಳಿಪಟ್ಟ ವಿದ್ವಾಂಸಂಗ ಅರಬೀ ಜನಾಂಗತ್‌ಲೂ

ಇಂಜತ್. ಅನ್ನತಯಿಂಡ ಪೈಕಿ 10ನೇ ಶತಮಾನತ್‌ಲಿಂಜ ಕೇಳಿಪಟ್ಟ ಖಗೋಳ ಶಾಸ್ತ್ರಜ್ಞ ಆಲ್-ಖಾರಿಜ್ಮಿ. ಇವಂಡ ಗ್ರಂಥತ್‌ರ ಮೀದ ನಲ್ಲ ಟೀಕೆ ಎಳ್‌ದ್‌ನವನೇ ಇಬ್ನ್-ಅಲ್-ಮುತ್ತಣ್ಣ-ಅಹಮದ್.

ಇಬ್ನ್-ಅಲ್-ಮುತ್ತಣ್ಣಂಡ ಮೂಲ ಪ್ರತಿ ಇಕ್ಕ ಇಲ್ಲೇಂಗಿಯೂ, ಅಂವೊ ಎಳ್‌ದ್‌ನ ಅರಬೀ ಭಾಷೆರ ಕೃತಿ ಹಿಬ್ರೂ, ಪರ್ಷಿಯನ್, ಲ್ಯಾಟಿನ್‌ರನ್ನತ ಭಾಷೆಕ್ ಅಕ್ಕಲೇ ತರ್ಜುಮೆ ಆಯಿತ್. ಹಿಬ್ರೂ ಭಾಷೆಕ್ ತರ್ಜುಮೆ ಆನ ಕೃತಿರ ಮೇಲೆ ಬರ್ನಾರ್ಡ್ ಗೋಲ್ಡ್‌ಸ್ಮಿತ್ ಎಣ್ಣುವಂವೊ ಟೀಕೆ ಎಳ್‌ದಿತ್ ಭಾರೀ ಕೇಳಿ ಎಡ್‌ತತ್.

ಹಿಂದೂ ಪಿಂಞ ಗ್ರೀಕ್ ಖಗೋಳ ಶಾಸ್ತ್ರ ದಂಡೂ ಒರೇ ಪೋಲೆ ಉಂಡ್‌ಂದ್ ಇಬ್ನ್-ಆಲ್-ಮುತ್ತಣ್ಣ ಎಳ್‌ದಿತ್. ಈ ಮುತ್ತಣ್ಣಂಡ ಕೃತಿನ ಮ್ಯಾಜ್‌ರಿಟ ಎಣ್ಣುವಂವೊ ಲ್ಯಾಟಿನ್‌ಕ್ ತರ್ಜುಮೆ ಮಾಡಿತ್. ಭಾಸ್ಕರ, ಬ್ರಹ್ಮಗುಪ್ತಂಗಳನ್ನತ ವಿಜ್ಞಾನಿಯಡ ಪರಿಚಯ ಯಹೂದ್ಯಂಗಕೂ, ಗ್ರೀಕಂಗಕೂ, ಅರಿಬಂಗಕೂ, ಪರ್ಷಿಯಾಕಾರಕೂ ಇಂಜತ್‌ಂದೂ, ಈ ಮುತ್ತಣ್ಣ ಎಳ್‌ದಿತ್. ಪಾಶ್ಚಾತ್ಯ ಪ್ರವಾಸಿ ಟಾಲೆಮಿಯೂ ಮುತ್ತಣ್ಣಂಡ ಎಳ್ತ್‌ನ ನೋಟಿತ್ ಅರಬ್ ವಿದ್ವಾಂಸ ಅಲ್‌ಬೆರೂನಿ ಇಬ್ನ್ ಆಲ್ ಮುತ್ತಣ್ಣಂಡ ಖಗೋಳಶಾಸ್ತ್ರ ಸಮೀಕ್ಷೆನ ಆಲ್ ಘರ್ಘಾನಿ ಎಣ್ಣುವ ವಿದ್ವಾಂಸನಗುಂಡ್ ಅರಿಂಜಂಡತ್.

ಮುತ್ತಣ್ಣ ಪೆದ ಎನ್ನನೆ ಬಾತ್:- ಮುತ್ತಣ್ಣ ಎಣ್ಣುವದ್ ದ್ರಾವಿಡ ಶಬ್ದ. ಮುತ್ತಣ್ಣ, ಮುತ್ತಯ್ಯ, ಮುತ್ತಪ್ಪ, ಮುತ್ತು ಸ್ವಾಮಿ, ಮುತ್ತು ಕೃಷ್ಣ-ಇದೆಲ್ಲ ತಮಿಳ್, ತೆಲುಗು, ಕನ್ನಡ ಪಿಂಞ ಮಲಯಾಳತ್ ಬಳಸುವದ್, ಉತ್ತರ ಹಿಂದೂಸ್ಥಾನತ್ ಇದ್‌ಇಲ್ಲೆ.

ರೋಮನ್ಸ್, ಗ್ರೀಕ್ಸ್, ಅರಬಂಗ ಪಂಡ್‌ಂಜೇ ನಂಗಡ ದೇಶತ್‌ರ ಕೂಡ ವ್ಯಾಪಾರ-ವ್ಯವಹಾರ ಮಾಡುವಯಿಂಜದ್ ಚರಿತ್ರೆಲ್ ಗೊತ್ತುಳ್ಳ ಸಂಗತಿ. ಅಕ್ಕ ಇಲ್ಲಿಯತ್‌ರ ಸಾಮಾನ್ - ಸರಕ್‌ರ ಕೂಡ ಜನಳೂ ಅತ್ತಟಿ ಪೋನದುಂಡ್. ಅಲ್ಲಿ ಮತಾಂತರ ಆನ ಭಾರತೀಯಂಗ ಅಯಿಂಡ ಮೂಲ ಪೆದತ್‌ನ ಬೆಚ್ಚಂಡವು ಕಮ್ಮಿ. ತಂಗಡ ಮೂಲ ಪೆದನ್‌ನೋ ಬೆಚ್ಚಂಡ್ ಕೇಳಿ ಎಡ್‌ತ ಸೇನಾನಿ "ಮುತ್ತಣ್ಣ ಇಬ್ನ್ ಹರಿಥಾ" ಪಿಂಞ ಖಗೋಳ ಶಾಸ್ತ್ರಜ್ಞ"ಮುತ್ತಣ್ಣ-ಆಲ್-ಇಬ್ನ್-ಅಹಮದ್"- ಇಯಂಗಡ ವಿಷಯ ಆಯಿರ ಕಾಲ ಕಯಿಂಜ ಪಿಂಞ ಸಂಶೋಧನೆ ಮಾಡ್‌ನವನೂ ಈ ನಾಡ್‌ರ ಓರ್ "ಮುತ್ತಣ್ಣ"ನೇ ಎಣ್ಣುವದೇ ಒರ್ ವಿಶೇಷ!

ಕ್ಯಾಪ್ಟನ್ ಐಚೆಟ್ಟಿರ ಮುತ್ತಣ್ಣ 1941ಲ್ ಕಂಡ "ಮುತ್ತಣ್ಣ ಬುಕ್ ಶಾಪ್" ಈ 2ನೇ ಮುತ್ತಣ್ಣಂಡ ಪೆದಕ್ ಸಂಮ್ಮಂದ್‌ಪಟ್ಟದ್!

❖ ❖ ❖

# ಕೊಡಗ್‌ರ ಮಣ್ಣೇ ನಂಗಕ್ ಪ್ರತ್ಯಕ್ಷ ದೇವ. ಕೊಡಗ್‌ರ ಪ್ರಕೃತಿಯೇ ನಂಗಡ ದೇವಸ್ಥಾನ

ಜನನಿ ಪಿಂಞ ಜನ್ಮ ಭೂಮಿ, ಇವುದಂಡ್ ಮನುಷ್ಯಂಗ್ ಪ್ರತ್ಯಕ್ಷ ದೇವ. ಅವ್ವಂಡ ಚೋರೆನ ಬಳಸಿಯಂಡ್, ಪಾಲ್‌ಟ್ಟಂಡ್ ಬೊಳಂದಿತ್, ಅವ್ವಂಡ ಕೆಲತ್‌ಂಜಿ ಪೊರಮೆ ಭೂಮಿಕ್‌ಳ್‌ಂಜ ಪಿಂಞ ಆ ಕುಂಞಿ ಅವ್ವಂಡ ಪಾಲೂತಿತ್ ಬೊಳಂದ್ ಆಳಾಪ. ಅವ್ವಂಡ ಪಾಲೇ ಕುಂಞಿಕ್ ಪೋರ. ಅದ್‌ಂಡ ಕೂಡೆ ಭೂಮಿರ ಕಾತ್ ನೀರ್ ಇನ್ನತ ಪಂಚ ಭೂತತ್‌ರ ಆಧಾರತ್‌ಲ್ ಬೊಳಂದ್‌ಬಪ್ಪ. ಆ ಕುಂಞಿ ಬಲ್ಯದಾಯಂಡ್ ಬಂದನ್ನಕೆ ತಾಂಡ ಬೊಳಚೆಕ್ ತಾನ್ ಪುಟ್ಟ್‌ನ ಪಿಂಞ ಬೊಳಂದ ಮಣ್ಣೇ ಆಧಾರ ಆಯಿತಿಪ್ಪ. ತಾಂಡ ಆಯುಷ್ಯತ್‌ರ ಇಡೀ ಸಮಯ ಎಣ್ಣ್‌ನಕ ತೊಟ್ಟ್‌ಂಜಿ ತೂಟ್‌ಂಗಳಕೆತ್ತಣೆಕೂ ತಾಂಡ ಜನ್ಮ ಭೂಮಿರ ಮಡ್‌ಲೇ ಬದ್‌ಕಿ ಬಾಳಂಡು. ಪುಟ್ಟ್‌ನ ಮನುಷ್ಯ ತಾಂಡ ಬದ್‌ಕ್ ನೀಸುವಕ್ಕಾಯಿತ್ ಭೂಲೋಕತ್‌ರ ಏದೇ ದೇಶತ್‌ಲ್ ನೆಲೆ ನಿಕ್ಕು. ಆಚೇಂಗಿ ಅಂವಂಗ್ ತಾನ್ ಪುಟ್ಟ್‌ನ ಊರ್, ತಾನ್ ಚೆರ್‌ಪತ್‌ಲ್ ಓಡ್‌ನ ಪಾರ್‌ನ ತುಳ್ಳ್‌ನ, ಬುದ್ದ ಎದ್ದ ಎಲ್ಲ ಜಾಗತ್‌ರ ಮೀದ ಏದೋ ಓರ್ ತರತ್‌ರ ಭಾವನಾತ್ಮಕ ಸಂಬಂಧ ಬೊಳಂದಿತಿಪ್ಪ. ಎಚ್ಚಕೇ ದೇಶ ಸುತ್ತಡ್ ಆಕೀರಿಕ್ ತಾನ್ ಪುಟ್ಟ್‌ನ ಮಣ್ಣ್‌ಲೇ ನೆಲೆ ನಿಕ್ಕಂಡು. ಪುಟ್ಟ್‌ನ ಮನೆಲೇ ಚಾವಂಡು - ಇನ್ನನೆ ಓರ್ ಮನತ್‌ರ ಆಶೆಪುಟ್ಟುವ. ಫೀಲ್ಡ್ ಮಾರ್ಷಲ್ ಕಾರ್ಯಪ್ಪಜ್ಜಂಗ್ ಭಾರತ ಎನ್ನಂಗ್ - ಭೂಲೋಕತ್‌ರ ಏದ್ ನಗರತ್‌ಲ್ ಬೋಂಡಿಕೂ ನೆಲೆ ನಿಕ್ಕಲಿಂಜತ್. ಆಚೇಂಗಿ ಎಲ್ಲಾ ಸುಖ ಭೋಗತ್‌ರ ಆಶೆನ ಬುಟ್ಟಿತ್ ಬಂದಿತ್ ಕಾಡ್‌ರೊಳ್‌ಲ್ ತಾಂಡ ಜನ್ಮಭೂಮಿಲ್ ನೆಲೆ ನಿಂದತ್. ಇದೇ ತರ ಏದೇದೊ ದೇಶತ್‌ಲ್ ಪೊನ್ನ್ ಪಣನೇಡ್‌ನವು, ಸಂಸಾರ ನಡ್‌ತ್‌ನವು ಆಖೀರಿ ಕಾಲಕ್ಕ್ ತಾನ್ ಪುಟ್ಟಿ ಬೊಳಂದ ಜಾಗಕ್ ಬಂದಿತ್ ನೆಲೆಗೊಂಡಿತ್. ತಾಂಡ ಮನಸ್‌ಲೇ ಸಂತೋಷಪಡುವ.

ಅನ್ನನಾಯಿತೇ ಜನ್ಮಭೂಮಿಯೇ ಜನ್ಮ ತಂದ ಅವ್ವನೂ ಸರಿಸಮಾನ ಎಣ್ಣುವದೂ ಶಾಸ್ತ್ರ ಸಮ್ಮತವೂ ಅಕ್ಕು. ನೇರಾನ ಸಂಗತಿಯೂ ಅಕ್ಕು. ಅವ್ವಂಗೂ ಪುಟ್ಟ್‌ನ ಮಣ್ಣ್‌ಕೂ ಉಳ್ಳ ಹೋಲಿಕೆ ಪ್ರಪಂಚತ್‌ರ ಎಲ್ಲ ದೇಶತ್‌ಲೂ, ಎಲ್ಲ ಕಾಲತ್‌ಲೂ ಎಲ್ಲಾ ಜನಾಂಗತ್‌ಲೂ ಪಂಡೂ ಇಂಜದೆ, ಇಂದೂ ಉಳ್ಳದೆ.

ವಿಜ್ಞಾನತ್‌ಲ್ ಎಚ್ಚಿಕೆ ಮಿಂಞಕ್ ಬಂದ ದೇಶ ಆಯಿತಿರಡ್, ದೇವಳೇ ಇಲ್ಲೆಂದ್ ಎಣ್ಣುವ ನಾಸ್ತಿಕ ಜನಳೇ ಆಡ್, ಈ ಜನನೀ ಜನ್ಮ ಭೂಮಿರ ಸಂಬಂಧತ್‌ನ ಅಲ್ಲಗಳಂದದ್ ಎಲ್ಲಿಯೂ ಕಂಡ್ ಬಪ್ಪ್‌ಲೆ. ಅದೇ ತರ ಈ ಕೊಡಗ್‌ರ ಮೂಲ

ನಿವಾಸಿಯ ಅಥವಾ ಮೂಲ ಪುರುಷಂಗಳಾನ ಕೊಡವಳೂ ಈ ಮಣ್ಣ್‌ರ ಮೀದ ಪವಿತ್ರಭಾವನೆ ಬೆಚ್ಚಯಿಂಗ.

ಈ ಪ್ರಬಂಧ ಎಳ್‌ದುವಕ ಕೊಡವದಾರ್ ಪಿಂಞ ದೇವ ದಾರ್‌ಂದ್ ಚೆನ್ನ ಚರ್ಚೆ ಮಾಡಂಡಿಯ ಅವಶ್ಯಕತೆ ಉಂಡ್. ಎನ್ನಂಗ್‌ಂದೇಣ್ಣ್‌ನಕ ಸಂಶೋಧಕಂಗಾಂದ್ ಎದೆ ಪಟ್ಟಿ ಬೆಚ್ಚಂಡ ಚೆನ್ನಂಗ್ ಜನ ಕೊಡವಡ ಮೂಲ ತೇಡುವಕ್ ಪೋಯಿತ್ ಕೊಡವಡ ಮೂಲಕೇ ಕತ್ತಿಬೆಚ್ಚದ್ ಕಾಂಬ. ಅಂವಂಗಂವಂಗ್ ತೋಂದ್‌ನೆನ್ನಕೆ ಓರಂದ್ ಸಿದ್ಧಾಂತ ಎಳ್‌ದಿರೊಂಜಿ ಬಲ್ಯ ಜನ ಆಪಕೂ ಬಲ್ಯಪೆದ ಎಡ್‌ಪಕೂ ಪೇಚಾಡುವದುಂಡ್. ಅರ್ಥ ಇಲ್ಲತ ಎಳ್ತ್ ಎಳ್‌ದಿತ್, ವಾದ ಮಾಡಿತ್ ಭಾರೀ ಬಂಬಂಗಂದ್ ಎಣ್ಣ್‌ಚಿಟ್ಟಂಡ ಇತಿಹಾಸಗಾರಂದ್ ಪೆದಬೆಚ್ಚಂಡ್, ಪುದಿಯ ಸಂಗತಿ ಕಂಡ್‌ಪುಡ್‌ಚಂಡ್ ತಾಂಡ ಬೆನ್ನ್‌ನ ತಾನೇ ತಟ್ಟಿಯಂಡ ಕೊಂಬಂಗಳೂ ಉಂಡ್. ಕೊಡಗ್‌ರ ಮೂಲ ನಿವಾಸಿಯಳಾನ ಕೊಡವ ಆರ್ಯಂಗಾಂದೂ, ಖುರ್ದಿಸ್ಥಾನತ್‌ಂಜಿ ಬಂದವೂಂದೂ, ಇರಾನ್ ಇರಾಖ್‌ಂಜಿ ಬಂದಯಿಂಗಾಂದೂ ಎಂತೆಂತೊ ಎಳ್‌ದಿತ್. ಓರ್ ಊರ್‌ರ ಪೆದತ್‌ರ ದಂಡೊ ಮೂಂದೊ ಅಕ್ಷರ ಕೊಡವಡ ಓರ್ ಒಕ್ಕ ಪೆದತ್‌ರ ಮಾದರಿ ಕಂಡ್‌ಟಕ ಮದಿ, ಕೊಡವ ಆ ಊರ್‌ಂಜಿ ಬಂದವುಂದ್ ಎಳ್‌ದಿತ್. ಪ್ಯಾಲೆಸ್ತೀನ್‌ರ ಅಧ್ಯಕ್ಷ ಯಾಸರ್ ಅರಾಫತ್‌ರ ಮಂಡೆಕ್ ಕೆಟ್ಟುವ ತುಣಿ ನೋಟಿತ್ ಕೊಡವ ಅಜ್ಜಂಗ ಚೆಕ್ ವಸ್ತ್ರ ಕೆಟ್ಟುವಂಜಿಯೆ ಇನ್ನನೆ. ಕೊಡವ ಪ್ಯಾಲೆಸ್ತೀನ್‌ಂಜಿ ಬಂದವುಂದ್ ವಾದ ಮಾಡ್‌ನ ಭಾರಿ ಬುದ್ಧಿವಂತಗಳೂ ಉಂಡ್!

ನೇರಾನ ಸಂಗತಿ ಏದ್‌ಂದೇಣ್ಣ್‌ನಕ ಕೊಡವ ಎಲ್ಲ್‌ಂಜಿಯೂ ಬಂದಯಿಂಗ ಅಲ್ಲ. ಪ್ರಪಂಚತ್‌ರ ಓರಂದ್ ಪ್ರದೇಶತ್‌ಲ್ ವಿಕಾಸ ಆಯಿತ್ ನೆಲೆ ತಾಂಗ್‌ನ ಬೋರೆ ಬೋರೆ ಜನಾಂಗತ್‌ರ ಮಾದ್‌ರಿ ಕೊಡವ ಕೊಡಗ್‌ರ ಮೂಲ ನಿವಾಸಿಯ ಈ ವಾದತ್‌ರ ಮೀದ ಬೋರೆವಾದ ಅಗತ್ಯ ಇಲ್ಲೆ. ಪೊರಮೆಂಜಿ ಬಂದವು ಆನಕ ಈ ಕಾಡ್ ಸೀಮೆಕ್ ಬರಂಡಿಂಜತಾ? ಪಂಡ್ ಜನ ನೆಲೆ ನಿಪ್ಪಂಜಿಯೆ ಬಲ್ಯ ಪೊಳೆರ ಕರೆಲ್, ಕೆಲಕ್ ಬೋಂಡಿಯ ಮೇಚಿ ಸುಲಭತ್‌ಲ್ ಕ್‌ಟ್ಟುವಲ್ಲಿ, ಸುಖಜೀವನಕ್ ಬಟ್ಟೆ ಉಳ್ಳಲ್ಲಿ , ಕಮ್ಮಿ ಮಳೆ ಬೂವಲ್ಲಿ, ಅತ್ತ ಕಡಚಿಯಳ ಚಾಕುವಕ್ ಎಲ್ಲಾ ಸೌಕರ್ಯ ಉಳ್ಳಲ್ಲಿ. ಅದ್ ಬುಟ್ಟಿತ್ ಕೊಡಗ್‌ರಂತ ಕುಂದ್ ಮಲೆಕ್, ನರಿ ಕರಡಿ ಆನೆನಂತ ಕಾಡ್‌ಪ್ರಾಣಿಯಡ ಗೂಡ್‌ಕ್ ಮಲೇರಿಯಾತ್‌ರ ಊರ್‌ಕ್ ಬಂದಿತ್ ನೆಲೆ ನಿಂದದ್ ನೇರಾ? ಅಕ್ಕ ಬೊಡಿ ಮದ್ದ್, ತೋಕ್ ಇಂತದೆಲ್ಲ ಕಂಡ್ ಪುಡಿಕತ ಕಾಲ. ಪೊರಮೆ ಜನಡ ಸಂಪರ್ಕ ಇಲ್ಲತೆ, ನಾಲಂಜಿ ತಿಂಗ ಜಡಿಮಳೆ ಬೂವ ಇಂಜಂತ ಜಾಗತ್‌ಲ್ ದಾರೂ ಬಂದಿತ್ ನೆಲೆನಿಪ್ಪ್‌ಲೆ. ಡಾರ್ವಿನಂಡ ವಿಕಾಸವಾದವೇ ಆಕಡ್, ಅಥವಾ ದೇವಳೇ ಮನುಷ್ಯನ ಸೃಷ್ಟಿಮಾಡಿತ್ ಅಯಚದೇ ಆಡ್, ಕೊಡವ ಮಾತ್ರ ಕೊಡಗ್‌ಲೇ ವಿಕಾಸಗೊಂಡ ಜನಾಂಗ ಎಣ್ಣುವದ್ ನೇರ್.

ದೇವದಾರ್? - ನಂಗ ದೇವಳ ಮನಸ್‌ಲ್ ಸೃಷ್ಟಿ ಮಾಡಿಯಂಡಿತ್. ನಂಗ ಬೋಡ್‌ನಾನ ತಪ್ಪಕ್ ಒಬ್ಬ ಉಂಡ್‌ಂದ್ ನಂಬಿತ್. ನಂಗಡ ಕಷ್ಟತ್‌ನ ನೀಕಿತ್ ಸುಖ ತಪ್ಪಕೋರ್ ಕಾಣತ ಕೈ ಉಂಡ್‌ಂದ್ ನಂಬಿತ್. ನಂಗಡ ದುಃಖ ನೀಕುಂಪವ್ವೊ ದೇವ. ಇರ್‌ಟಾಕಿತ್ ದಿನ ಪೋಲತುಂಪಂವ್ವೊ ದೇವ. ಪುಟ್ಟುವಾಂಗೂ ಚಾವಾಂಗೂ ಕಾರಣ ಕರ್ತ ದೇವಾಂದ್ ನಂಬಿತ್. ಪ್ರಕೃತಿರ ಗುಟ್ಟ್‌ನ ಅರಿಯುವಕೇ ಕಯ್ಯತಿಪ್ಪಕ ನಂಗ ದೇವಳ ಸೃಷ್ಟಿ ಮಾಡಿಯಂಡತ್.

ಒಕ್ಕುವ್ವೊ ನೀರ್‌ಲ್ ದೇವಳ ಕಂಡತ್, ಕತ್ತುವ್ವೊ ತಿತ್ತ್‌ಲ್, ಬೀಜುವ್ವೊ ಕಾತ್‌ಲ್, ಚುಡುವ್ವೊ ಬೆದ್‌ಲ್, ತೆಡ್‌ರಸದ್ದ್‌ಲ್, ತೆಡ್ ಮಿನ್ನುವ್ವೊ ಮೊಳಿಲ್, ನಂಗಕ್ ಪಾಲ್ ತಪ್ಪ ಪಯ್ಯ್‌ಲ್, ಮನೆಕಾಪ ನಾಯಿಲ್, ಚಾಯಿ ಚಂದತ್‌ರ ಪ್ರಾಣಿ ಪಕ್ಷಿಯಡೋಳ್‌ಲ್, ಕಾಡ್‌ಕ್ ಬಲ್ಯ ಆನೆಲ್, ವಿಷಕಾರುವ್ವೊ ಪಾಂಬ್‌ಲೂ ದೇವಳ ಕಂಡತ್. ಅನ್ನನೆ ದೇವಡ ಸೃಷ್ಟಿ ಮಾಡಿಯಂಡ್ ದೇವ ಉಂಡ್‌ಂದ್ ನಂಬಿತ್. ಆ ನಂಬಿಕೆ ಎಚ್ಚಕ್ ಕಾಲತ್‌ಂಜಿ ಬಂದಿತೊ ಎನ್ನೊ. ಈ ತರತ್‌ರ ನಂಬಿಕೆಲ್ ಮನುಷ್ಯಂಗ್ ಓರ್ ನೆಮ್ಮದಿ ಕ್‌ಟ್ಟಿಯಂಡೇ ಉಂಡ್. ನಂಗಡ ಆಕಾಂಕ್ಷೆನ ತ್‌ೀತವಕಾಯಿತ್ ಕಾಣತದೇವಳ ಬೋಡುವದ್ ಸಂಪ್ರದಾಯ. ನಂಗಡ ಕಣ್ಣ್‌ಕ್ ಕಾಂಬ ದೇವಳೇ ಪ್ರಕೃತಿ ಮಾತೆ.

ದಂಡ್ ಮಿನಿಟ್ ಉಸ್‌ರೆಡ್‌ಪಕ್ ಕಾತ್ ಇಲ್ಲೆಂಗಿ ಚತ್ತೇ ಪೋಪ. ಕುಡಿಪಕ್ ನೀರ್, ಪ್ಯೆಪ್ ನೀಕುವಕ್ ಕಂಡೆಕಳಂಜಿ, ಪಣ್ಣ್‌ಫಲ ಇದ್‌ನೆಲ್ಲ ತಪ್ಪ ಪ್ರಕೃತಿಯೇ ಪ್ರತ್ಯಕ್ಷ ದೇವಾಂದ್ ಎಲ್ಲಾ ಕಾಲತ್‌ರ ಜನಳೂ ಅಯಿಂಗ ಪುಟ್ಟಿ ಬೊಳಂದ ಮಣ್ಣ್‌ನ ಪೂಜ್‌ಚಿ. ವರಕ್ ತೆಳ್‌ಂಜಿತ್ ಪವಕ ಸೂರಿಯನ ತೊತ್ತಿತ್ ನೆಲತ್‌ನ ದಂಡ್ ಕೈಲೂ ತೊಟ್ಟಿತ್ ತೊತ್ತವ.

ಈ ಕೊಡಗ್‌ರ ಮಣ್ಣ್ ಭಾರತ ದೇಶತ್‌ರ ಬೋರೆ ಎಲ್ಲ ಮಣ್ಣ್‌ನ ಕಾಟಿ ವಿಶೇಷಪಟ್ಟದ್. ಇಲ್ಲಿ ಬೊಳೆಯುವಚ್ಚಕ್ ಬೋರೆ ಬೋರೆ ತರತ್‌ರ ಸಸ್ಯವರ್ಗ ಬೋರೆಲ್ಲಿಯೂ ಕಾಂಬ್‌ಲೆ. ದುಂಬ ಫಲವತ್ತಾನ ಗಂಗಾ ಸಿಂಧೂ ಬಯಲ್‌ಲೂ ಇಚ್ಚ ತಚರತ್‌ರ ಗಿಡಮರ ಇಲ್ಲೆ. ಕೊಡಗ್‌ಲ್ ಬೊಳೆಯುವಚ್ಚಕ್ ಆಹಾರ ಧಾನ್ಯ ಬೋರೆಲ್ಲಿಯೂ ಬೊಳೆಯುಲೆ. ಉತ್ತರ ಭಾರತತ್‌ರ ಗೋಧಿ, ದಖ್ಖನ್ ಪ್ರಸ್ಥಭೂಮಿರ ಪರ್ತಿ, ನೆಲಗಡಲೆ, ಜೋಳ, ಎಲ್ಲಾ ತರತ್‌ರ ದ್ವಿದಳ ಧಾನ್ಯ, ಅಸ್ಸಾಂ ಭಾಗತ್‌ರ ಲವಂಗ, ಪಟ್ಟೆ, ಟೀ, ಕರಾವಳಿರ ತೆಂಗ್, ಅಡಿಕೆ, ಗೇರ್, ನಲ್ಲಮಳು, ಬಯಲ್ ಸೀಮೆರ ಎರಿ (ರಾಗಿ), ಕೈಬು, ಪೇತೊಪ್ಪು, ನದೀ ಮುಖಜ ಭೂಮಿರ (ಪೊಳೆ ನೀರ್ ಕ್‌ಟ್ಟುವ) ನೆಲ್ಲ್, ತೋಟಗಾರಿಕೆ ಬೊಳೆಯಾನ ಕಾಫಿ, ಟೀ, ರಬ್ಬರ್, ಸಂಬಾರ ಪದಾರ್ಥತ್‌ರ ರಾಣಿ ಎಣ್ಣುವ ಪೆದ ಪೋನ ಯಾಲ, ಪಣ್ಣ್ ಫಲತ್‌ರ ಪೆದ ಪೋನ ಕಿತ್ತುಳಿ, ಮಾಂಗೆ, ಇಂತ ಒಂದ್ ತೊಟ್ಟ್‌ನೂರೋಳ ಕೊಡಗ್‌ಲ್ ಬೊಳೆಯುವ. ಇನ್ನತ ವಿಶೇಷ ಪಟ್ಟ ಮಣ್ಣ್

ಭೂಲೋಕತ್‌ಲೇ ಅಪರೂಪ.

ಕೊಡಗ್ ಉಷ್ಣವಲಯತ್‌ಲುಂಡೇಂಗಿಯೂ ಕುಂದ್ ಸೀಮೆ, ಕಾಡ್, ಪೊಳೆ, ತೋಡ್, ಕಾತ್ ಮಳೆ ಇಂಜಂಡ್, ಶೆಖೆಗಾಲತ್‌ಲ್ ಮಳೆಯೂ, ಕುಳ್‌ರ ಕಾಲತ್‌ಲ್ ಬೆದೂ ಇಂಜಂಡ್, ಕಾಲತ್‌ರ 365 ದಿನವೂ ಹವಾ ನಿಯಂತ್ರಣ (A.C.) ಕೋಂಬರೆಲುಳ್ಳಂತ ಹವಾಮಾನವೇ ಕೊಡಗ್‌ರ ವಿಶೇಷತೆ. ಏದ್ ತರತ್‌ರ ಬೊಳೆ ಬೊಳತ್‌ಲೆಂಗಿಯೂ, ಆರ್‌ತಿಂಗ ಓರಾಂಡೆಕೆತ್ತಣೆ ಕಾಡ್‌ಲ್ ಪ್ರಕೃತಿ ಮಾತೆ ಸೃಷ್ಟಿ ಮಾಡಿತ್ ತಪ್ಪಂತ ಕಂಡೆ ಕಳಂಜಿ ಪಣ್ಣ್ ಫಲ ತಿಂದಂಡ್ ನೆಮ್ಮದಿಲ್ ಬದ್‌ಕಿಯವಲು. ಇನ್ನತ ಪ್ರಕೃತಿರ ವರವುಳ್ಳ ಜಾಗ ಬೋರೆಲ್ಲಿಯೂ ಇಲ್ಲೆ.

ಉತ್ತರ ಭಾಗತ್‌ರನ್ನಕೆ ಕುಳ್‌ರ್ ಕಾಲತ್‌ಲ್ ಮಂಜ್‌ಗಡ್ಡೆ ಬುದ್ದಿತ್ ಮುಚ್ಚುಲೆ. ಮಳೆಗಾಲತ್ ಪೊಳೆದುಂಬಿ ಮರ್‌ಂಜಿತ್ ಗಂಗಾ, ಸಿಂಧೂ, ಬ್ರಹ್ಮಪುತ್ರ ಬಯಲ್‌ನೆನ್ನಕೆ ಊರೂರೆ ಮುಡ್‌ಂಜಿ ಪೋಪ್‌ಲೆ. ಪೂರ್ವ ಕರಾವಳಿನೆನ್ನಕೆ ಚಂಡಮಾರುತ ಎದ್ದಿತ್ ಸಮುದ್ರ ಅಲೆ ನುಗ್ಗಿತ್ ಆಯಿರಾಯಿರ ಜನ ಚತ್ತ್ ಪೋಪಲೆ. ದಖ್ಖಿನ್ ಪೀಠ ಭೂಮಿರನ್ನಕೆ ಮಳೆಯಿಲ್ಲತೆ ಅತ್ತಕಡ್‌ಚಿಯಳೂ ಚತ್ತಿತ್ ಭೂಮಿ ಒಡಂದ್ ಬಾಯಿ ಬುಡುಲೆ, ಪಶ್ಚಿಮ ಕರಾವಳಿನೆನ್ನಕೆ ಸಮುದ್ರ ಕೊರಂದಿತ್ ಭೂಮಿ ತಾರುಲೆ. ಉತ್ತರ ಭಾರತತ್‌ರ ಮಾದ್‌ರಿ ಪಂಡ್ ಕಾಲತ್‌ಂಜೇ ಶತ್ರು ದಾಳಿಕ್ ಒಳಗಾಯಿತಿಲ್ಲೆ. ಬಯಲ್ ಸೀಮೆರನ್ನಕೆ ಪಂಡ್ ಸಿಡ್‌ಬು, ಕಾಲರಾ ಪ್ಲೇಗ್‌ಲ್ ಊರೂರೆ ಮುಡ್‌ಂಜಿಪೋನ ಮಣ್ಣ್ ಇದಲ್ಲ. ಚೆನ್ನ ಮಲೇರಿಯಾ ಇಂಜತ್. ಅದ್‌ಂಗ್ ತಕ್ಕ ಮನೆ ಮದ್ದೂ ಇಂಜತ್. ಅತ್ತ ಕಡ್‌ಚಿಯಳ ನರಿಕೆನ್ನಾಯಿ ಚೆನ್ನ ಕೊಂದಿತ್ ತಿಂದಿತಿಕ್ಕು. ಆಚೆಂಗಿ ಬೋರೆ ಜಾಗತ್‌ನೆನ್ನಕೆ ತೊಂಡೆಕೆಟ್ಟ್‌ರಂತ ರೋಗಬಂದಿತ್ ಅತ್ತಡ ಕುತ್ತಿ ನಾಶ ಆನ ಮಣ್ಣ್ ಇದಲ್ಲ. ತಡಿಲ್ ನೆರು ಪಬ್ಬ್‌ನೆನ್ನಕೆ ಕೊಡಗ್‌ರ ಉದ್ದ ಅಗಲಕ್ಕೂ ನನ್ನಾಲ್ ಮಾರ್ ಕೋರಂದ್ ಕೊಲ್ಲಿ ತೋಡೂ, ಈರಂಡ್ ಮೈಲ್ ಕೋರಂದ್ ಪೊಳೆಯೂ ಉಂಡ್. ಬರಗಾಲ ಎಣ್ಣುವಾನ ಏದ್ ಕಾಲತ್‌ಲೂ ಕೊಡಗ್ ಕಂಡಿತಿಲ್ಲೆ.

ಇಲ್ಲಿ ಭೂಮಿಲ್ ಪೊನ್ನ್ ಬೊಳ್ಳಿರನ್ನತ ಖನಿಜ ಇಲ್ಲೆ ನೇರ್. ಆಚೆಂಗಿ ಪೊನ್ನ್‌ರ ಕ್ರಯತ್‌ರ ಬೂಟಿ, ಚಾಂದ್, ತೇಗತ್‌ರಂತ ಮರ ಲೋಕಕೇ ಕೇಳಿ ಪೋನದ್. ಕಾಡ್ ಜಾತಿಯಡ ಪೈಕಿ ಸಿಂಹತ್‌ನಂತ ಚೆನ್ನ ಜಾತಿಯಳ ಬುಟ್ಟ್‌ಕ ಬಾಕಿ ಎಲ್ಲಾ ತರತ್‌ರ ಪ್ರಾಣಿಯಳೂ, ಪಕ್ಷಿಯಳೂ ಉಂಡ್. ಬೋರೆ ಪ್ರದೇಶತ್‌ರನ್ನಕೆ ಅಂಟ್‌ರೋಗ ಇಲ್ಲಿ ಪಬ್ಬುವವೇ ಇಲ್ಲೆ. ಪ್ರಕೃತಿ ಸಮತೋಲನ ಕಾಪಾಡಿತ್. ಇನ್ನತೆಲ್ಲ ಸೌಕರ್ಯ ಉಳ್ಳಾನಗುಂಡ್ ಇಲ್ಲಿಯತ್‌ರ ಜನ ದೀರ್ಘಾಯುಷಿಯು, ಬಲ್ಯ ಗಟ್ಟಿಮುಟ್ಟಾನ ತಡಿಕಾರ, ಆರೋಗ್ಯವಂತಂಗ, ಬುದ್ಧಿವಂತಂಗ, ಗಟ್ಟಿಗಂಗ, ನ್ಯೆಪುಕಾರ, ಪರೋಪಕಾರಿಯ, ವೀರಪರಂಪರೆಗಾರ ಪಿಞ ಪರಿಶುದ್ಧ ಮನಸ್‌ಕಾರ. ಇದೆಲ್ಲ ಈ ಮಣ್ಣ್‌ರ ಗುಣ.

ಸ್ವರ್ಗ ಎಣ್ಣುವ ದೋರ್ ಜಾಗ ಉಂಡ್‌ಂದಾಚೆಂಗಿ ಅದೇ ಆಕಾಶತೂ ಅಲ್ಲ ಪಾತಾಳತೂ ಅಲ್ಲ ಆ ಸ್ವರ್ಗ ಈ ಭೂಮಿರ ಮೀದಲ್ ಉಂಡ್. ಆ ಸ್ವರ್ಗ ಬೋರೇದೂ ಅಲ್ಲಕಲ್ಲ್ ಕಾವೇರಿ ಪಿಲ್ಲ್ ಭೂಮಿರ ಈ ಪೊಮ್ಮಾಲೆ ಕೊಡಗ್‌ರ ಪೊನ್ನ್ ಮಣ್ಣ್! ಅನಾದಿ ಕಾಲತ್‌ಂಜಿ ನಂಗಳ ಚಾಕಿ ಪೊಲತಿಯಂಡುಳ್ಳ, ನಂಗ ಅಜ್ಜ ಮುತ್ತಜ್ಜ ಗುರು ಕಾರೋಣಂಗ ಬಾಳಿ ಬದ್‌ಕ್‌ನ, ಇಂಞಿ ಮಿಂಞಕ್ ಏಳೇಳ್ ಕರಂದಲೆ ಕೆತ್ತಣೆ ನಂಗ ಮಕ್ಕ ಮರಿ ಸಾಲ್‌ಸಂತಾನ ಬಾಳಿ ಬದ್‌ಕಿ ಕೇಳಿ ಎಡ್‌ಕಂಡಿಯ ಈ ಕೊಡಗ್‌ರ ಮಣ್ಣ್ ನಂಗಡ ಪ್ರತ್ಯಕ್ಷ ದೇವಂದ್ ಎಣ್ಣುವಾತ್ ದಂಡ್ ಅಭಿಪ್ರಾಯ ಇಲ್ಲೆ.

ಈ ಪ್ರತ್ಯಕ್ಷ ದೇವಳ ನಂಗ ಕಣ್ಣ್ ತೊರಂದಕ ಕಾಂಬ. ಅದೇ ಕೊಡಗ್‌ರಗ ಪ್ರಕೃತಿ. ಕಲ್ಲ್ ಗುಡಿರೊಳ್‌ಲ್ ಮುಟ್ಟೆರ್‌ಟ್ ಮೂಲೆಲ್ ಕರಿಂಗಲ್ಲ್ ವಿಗ್ರಹತ್‌ಲ್ ದೇವ ಉಂಡ್‌ಂದ್ ನಂಬ್‌ನ ಎಂಗ ಪೋಡಿಲೂ, ಭಕ್ತಿಲೂ, ಕೊದಿಲೂ, ಓರೇ ನೇರ ಉಂಡಂಡೂ, ಪಟ್ಟಣಿ ಬುದ್ದಂಡೂ ಪಚ್ಚೆ ನೀರ್‌ಲ್ ಕುಳಚಂಡೂ, ತೆಂಗೆ ಒಡತಿತೂ ಪಣ್ಣ್ ಫಲ, ಒಪ್ಪ್‌ಚಿಟ್ಟಂಡೂ ಪೂಜುವ. ಎನ್ನಂಗ್‌ಂದೆಣ್ಣಕ - ನಂಗ ಬೋಡ್‌ನಾನ ತಂದಿತ್ ಕಾಪಾಡೂಂದ್. ಆಚೆಂಗಿ ಎಕ್ಕೊಲೂ ಇರ್‌ಲೂ ಪೋಲೂ ನಂಗಕೂ ಬೋಂಡಿಯ ಸುಖ, ಶಾಂತಿ, ಸಂಪತ್ತ್, ನೆಮ್ಮದಿ ತಪ್ಪಂತ ಪ್ರಕೃತಿಯೇ ನಂಗ ಪವಿತ್ರಾಂದ್ ಕಂಡಿತ್ ಎಕ್ಕೊಲು ಪೂಜಂಡಿಯ ದೇವಸ್ಥಾನ. ದೇವಡ ಎಲ್ಲಾ ತರತ್‌ರ ರೂಪ ಪ್ರಕೃತಿಲ್ ಕಾಂಬ. ಗಣಪತಿರ ರೂಪ ಆನೆ, ಸುಬ್ರಹ್ಮಣ್ಯಂಡ ರೂಪ ವಿಷ್ಣುರ ಕ್‌ರ್‌ಕೊಟ್ಟ, ಅಯ್ಯಪ್ಪಸ್ವಾಮಿರ ನರಿ, ಪೊಳೆರ ನೀರ್‌ಲ್ ಗಂಗಾ ಮಾತೆ, ಕತ್ತ್‌ವ ತಿತ್ತ್‌ಲ್ ಅಗ್ನಿದೇವ, ಬೀಜುವ ಕಾತ್‌ಲ್ ವಾಯುದೇವಳ, ಪೊಯ್ಯುವ ಮಳೆಲ್ ವರುಣ, ಆಲ್‌ಮರತ್‌ಲ್ ನಾರಾಯಣ, ಶನಿ ದೇಳ ಕಾಕೆಲೂ, ಪ್ರಾಣಿ ಪಕ್ಷಿಯಡ ಕೂತ್‌ಲ್ ಯಕ್ಷ ಗಂಧರ್ವ ಲೋಕತ್‌ರ ಸಂಗೀತತ್‌ನೊ, ಉದಿಪ ಸೂರ್ಯನೂ, ನೆಲಚಿರ ಚಂದ್ರನೂ ಇದೆಲ್ಲ ನಂಗಡ ಪ್ರಕೃತಿ ದೇಗುಲತ್ ಕಣ್ಣ್ ತೊರಪಕಲೂ, ಕೆಯಿಕೊಡತಿತ್ ಆರ್‌ಚಿಟ್ಟಕಲೂ, ನಂಗ ದೇವಳ ಅನುಭವಿಚಿಡುವ ಪಿಂಞ ಕಾಂಬ. ಅಂತ ಪ್ರಕೃತಿ ದೇವಸ್ಥಾನಕ್ಕ್ ನಂಗ ನಿತ್ಯ ಪೂಜೆ ಮಾಡಂಡು. ಈ ಪ್ರಕೃತಿರ ಪೂಜೆಕ್ ಕಾಸ್ ಖರ್ಚಿಲ್ಲೆ. ಬೆವರುತ್ತಿಯಂಡ್ ಅಂಗಾಲ್‌ಲ್ ತೋಲ್ ಉಳ್‌ಕಿಯಂಡ್ ನಡಂದ್ ಪೋಂಡೂಂದಿಲ್ಲೆ. ಉಸ್‌ರ್ ಎಡ್‌ಪಕಲೂ ಬುಡವಕಲೂ ಈ ಪ್ರಕೃತಿ ದೇವಸ್ಥಾನಕ್ ಪೂಜೆ ನಡತಿಯಂಡಿರಂಡಿಯದ್ ನಂಗಡ ಕರ್ತವ್ಯ.

ಈ ಪೂಜೆ ಎನ್ನನೆ? - ಪೊಳೆ ತೋಡ್‌ರ ನೀರ್ ಸಾಕ್ಷಾತ್, ಗಂಗೆರ ಸ್ವರೂಪ. ಈ ನೀರ್‌ನ ಹೇಸಿಗೆ ಮಾಡುವಕಾಗ. ಕಾಫಿ ತೋಲ್‌ಚ ನೀರ್‌ನ ಪೊಳೆಕ್ ಬುಟ್ಟಿತ್ ಮಾದಾಪುರ, ಕಬ್ಬಿಣ ಸೇತುವೆ ಪೊಳೆಲೆಲ್ಲ ಕಪ್ಪೆ, ಮೀನೆಲ್ಲ ಚತ್ತತ್. ಇಂತ ತೋಟಕಾರ ಕಾಶಿ, ತಿರುಪತಿ, ಧರ್ಮಸ್ಥಳತ್‌ರ ಪೆದ ಎಡ್‌ತವಕಲೂ ಆ ಕ್ಷೇತ್ರ ಅಪವಿತ್ರ ಆಯಿಪೋಕು.

ಒಮ್ಮಕೆ ಪಣ ಮಾಡಿರಾನಂದ್ ಪ್ರಕೃತಿಲ್ ತಾನೇ ತಾನಾಯಿ ಬೊಳಂದ ಮರತ್‌ನ

ಕೆತ್ತಿ ಮಾರುವ ಹಕ್ಕ್ ಮನುಷ್ಯಂಗೆಲ್ಲಿ ಉಂಡ್? ಪಣ್ಣ್ ಫಲ ತಪ್ಪ ಮರತ್‌ನ ನಾಶ ಮಾಡತೆ ಕೂಟ್‌ಕ್ ನಟ್ಟ್ ಚಾಕಿ ಬೊಳತುವದ್ ಓರ್ ದೇವಸ್ಥಾನ ಕೆಟ್ಟ್‌ವಾಂಗ್‌ಞಿ ಬಲ್ಯ ಧರ್ಮಕಾರ್ಯ.

ತಾಂಡ ನಾವುರ ಅಲಪ್‌ಕಾಯಿತ್ ಕಾಡ್ ಪ್ರಾಣಿಯಳ, ಪಕ್ಷಿಯಳ, ತೋಡ್‌ಲ್ ಮೀನನ ನಾಶ ಮಾಡಿತ್ ಅಲ್ಪ್‌ನ ತ್‌ೇತವಂತಂವ ಏದ್ ದೇವಸ್ಥಾನಕ್ ಪೋನಕ ಎನ್ನ್ ಲಾಭ ಬಕ್ಕು. ಕಾಡ್‌ಕ್ ತಿತ್ತ್ ಕೊಡ್‌ಪಂವ ತಾಂಡ ಪೊಣ್ಣ್ ಮಕ್ಕಳ ಕೋಂಬರೆಲ್ ಕೂಟಿತ್ ಮನೆ ಚುಟ್ಟ್ಯಾಂಗ್ ಸರಿಯಾನಂತ ಪಾಪಿ.

